# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (93) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರು ದಿನಾಂಕ:23-03-2011 ರಂದು ಮನವಿ ಸಲ್ಲಿಸಿ, ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಅಧಿಸೂಚನೆ ಸಂಖ್ಯೆ: ನಅಇ 92 ಎಂಎನ್‌ವೈ 2006, ದಿನಾಂಕ: 16-01-2007 ರಂದು ಈ ಹಿಂದೆ ಇದ್ದ ಬೆಂಗಳೂರು ಮಹಾನಗರ ಪಾಲಿಕೆಯು 110 ಗ್ರಾಮಗಳು, 7 ನಗರಸಭೆ ಮತ್ತು 1 ಪುರಸಭೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರಚನೆಯಾಗಿದ್ದು, ಸದರಿ 110 ಗ್ರಾಮಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಹಂಗಾಮಿ ಕಂದಾಯ ವಸೂಲಿಗಾರರು, ಗಣಕಯಂತ್ರ ನಿರ್ವಾಹಕರು, ಜವಾನರು, ಎಲೆಕ್ಟ್ರೀಷಿಯನ್, ಜಲಗಾರರು, ಪೌರಕಾರ್ಮಿಕರುಗಳು ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿಲೀನಗೊಂಡು ಕಾರ್ಯನಿರ್ವಹಿಸುತ್ತಿದ್ದು, ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ ಮಾಹೆಯಾನ ರೂ.2500, ಗುಮಾಸ್ತರಿಗೆ ಮಾಹೆಯಾನ ರೂ.2042, ಜಲಗಾರರಿಗೆ ಮಾಹೆಯಾನ ರೂ.2250, ಪೌರಕಾರ್ಮಿಕರಿಗೆ ಮಾಹೆಯಾನ ರೂ.1750 ಹಾಗೂ ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ ರೂ.3000 ಮತ್ತು ಜವಾನರಿಗೆ ಮಾಹೆಯಾನ ರೂ.1000 ಗಳನ್ನು ಪಾವತಿಸಲಾಗುತ್ತಿತ್ತು. ನಂತರದಲ್ಲಿ ಅಪರ ಆಯುಕ್ತರು (ಆಡಳಿತ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ದಿನಾಂಕ:07-07-2010 ರ ಆದೇಶದಂತೆ, ಸರ್ಕಾರದ ಕಾರ್ಮಿಕ ಆಯುಕ್ತ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ. ಪಿಟಿಎನ್/ಸಿಆರ್/118/09-10, ದಿನಾಂಕ:07-01-2010 ರ ಪತ್ರದನ್ವಯ ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ, ಗುಮಾಸ್ತರಿಗೆ, ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ ರೂ.2874, ಜಲಗಾರರಿಗೆ, ಪೌರಕಾರ್ಮಿಕರಿಗೆ, ಜವಾನರಿಗೆ ಮಾಹೆಯಾನ ರೂ.2632.00 ಗಳಿಗೆ ಕನಿಷ್ಠ ವೇತನವನ್ನು ಹೆಚ್ಚಿಸಿ ಆದೇಶ ಹೊರಡಿಸಿರುತ್ತಾರೆ. ಅದರಂತೆ, ಹೆಚ್ಚಳ ಮಾಡಿರುವ ಕನಿಷ್ಠ ವೇತನವನ್ನು ಪಡೆಯುತ್ತಿದ್ದು, ಈಗ ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರು ಘನತೆವೆತ್ತ ರಾಜ್ಯಪಾಲರ ಆದೇಶಾನುಸಾರ ದಿನಾಂಕ:21-02-2011 ರಂದು ಅಧಿಸೂಚನೆ ಹೊರಡಿಸಿ, ಕನಿಷ್ಠ ವೇತನವನ್ನು ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ, ಗುಮಾಸ್ತರಿಗೆ, ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ ರೂ.5881, ಜಲಗಾರರಿಗೆ, ಪೌರಕಾರ್ಮಿಕರಿಗೆ ಮಾಹೆಯಾನ ರೂ.5647.00 ಗಳನ್ನು, ಜವಾನರಿಗೆ ಮಾಹೆಯಾನ ರೂ.5179.00 ಗಳನ್ನು ಪರಿಷ್ಕರಿಸಿ, ಕನಿಷ್ಠ ವೇತನವನ್ನು ಹೆಚ್ಚಿಸಿ ಅಧಿಸೂಚನೆ ಹೊರಡಿಸಿರುತ್ತಾರೆ. ಆದ್ದರಿಂದ, ಸದರಿ ಸರ್ಕಾರದ ಅಧಿಸೂಚನೆಯಂತೆ ಪರಿಷ್ಕೃತ ಕನಿಷ್ಠ ವೇತನವನ್ನು ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಪಾವತಿಸಬೇಕೆಂದು ಕೋರಿರುತ್ತಾರೆ.

ಸರ್ಕಾರದ ಕಾರ್ಮಿಕ ಇಲಾಖೆಯ ಸಂಖ್ಯೆ: ಕಾಇ/152/ಎಲ್‌ಡಬ್ಲ್ಯೂಎ/2008, ದಿನಾಂಕ: 21-02-2011 ರ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಯಾವುದೇ "ನಗರ ಸ್ಥಳೀಯ ಸಂಸ್ಥೆಗಳು" ಹಾಗೂ "ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು" ಎಂಬ ಅನುಸೂಚಿತ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನಿರ್ದಿಷ್ಟಪಡಿಸಿರುವ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆಯ ಭಾಗ-4(ಎ) ರಲ್ಲಿ ದಿನಾಂಕ:30-09-2010 ರಂದು ಪ್ರಕಟಿಸಿ, ಕನಿಷ್ಠ ವೇತನ ಕಾಯ್ದೆ 1948 ರ (ಕೇಂದ್ರಾಧಿನಿಯಮ ಸಂ.(XI) ಸೆಕ್ಷನ್ 5(1)(ಬಿ) ಪ್ರಕಾರ ಇದರಿಂದ ಭಾದಿತರಾಗುವ / ಸಂಬಂಧವಿರುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ / ಆಕ್ಷೇಪಣೆಗಳನ್ನು ಕನಿಷ್ಠ ವೇತನ ಸಲಹಾ ಮಂಡಳಿಯಲ್ಲಿ ಮಂಡಿಸಲಾಗಿ, ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯ ಬಗ್ಗೆ ಚರ್ಚಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರಕ್ಕೆ ಶಿಫಾರಸ್ಸು ನೀಡಿರುವಂತೆ, ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಪರಿಶೀಲಿಸಿ, ಕರಡು ಅಧಿಸೂಚನೆಯಲ್ಲಿ ನಿಗದಿಪಡಿಸಿದ್ದ ವೇತನ ದರಗಳು ಇತರೆ ಅನುಸೂಚಿತ ಉದ್ದಿಮೆಗಳಿಗಿಂತ ಹಾಗೂ ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ರಾಷ್ಟ್ರೀಯ ಕನಿಷ್ಠ ವೇತನ ದರಕ್ಕಿಂತ ಗಣನೀಯವಾಗಿ ಹೆಚ್ಚಾಗಿರುವುದನ್ನು ಸರ್ಕಾರವು ಗಮನಿಸಿ, ಈ ರೀತಿ

..................2

C

ಗಣನೀಯವಾಗಿ ಕನಿಷ್ಠ ವೇತನವನ್ನು ಹೆಚ್ಚಾಗಿ ನಿಗಧಿಪಡಿಸಿರುವುದರಿಂದ ಇತರ ಅನುಸೂಚಿತ ಉದ್ದಿಮೆಗಳಿಗೆ ತಾರತಮ್ಯ ಮಾಡಿದಂತಾಗುತ್ತದೆ ಎನ್ನುವುದನ್ನು ಮನಗಂಡು ಕರಡು ಅಧಿಸೂಚನೆಯಲ್ಲಿನ ದರಗಳನ್ನು ಕಡಿತಗೊಳಿಸಲು ತೀರ್ಮಾನಿಸಿ, ಕನಿಷ್ಠ ವೇತನ ಕಾಯ್ದೆ 1948 ರ ಸೆಕ್ಷನ್ 3(1)(ಬಿ) ಹಾಗೂ 5(1)(ಬಿ) ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ ಯಾವುದೇ "ನಗರ ಸ್ಥಳೀಯ ಸಂಸ್ಥೆಗಳು" ಹಾಗೂ "ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ ಈ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆಯೆಂದು ಅಧಿಸೂಚನೆ ಹೊರಡಿಸಿರುತ್ತದೆ.

## ಅನುಸೂಚಿ

| ಕ್ರ ಸಂ. | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು (ರೂಪಾಯಿಗಳಲ್ಲಿ) | | | | | |
|---|---|---|---|---|---|---|---|
| | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು | | ಎಲ್ಲಾ ನಗರ ಸಭೆಗಳು | | ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು | |
| | | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| 1 | 2 | 3 | 4 | 5 | 6 | 7 | 8 |
| 1 | ಗುಮಾಸ್ತ/ಕ್ಲರ್ಕ್/ಕಂಪ್ಯೂಟರ್ ಆಪರೇಟರ್/ ಡಾಟಾ ಎಂಟ್ರೀ ಆಪರೇಟರ್/ ಕರ ವಸೂಲಿಗಾರರು/ಎಲೆಕ್ಟ್ರೀಷಿಯನ್ ಹಾಗೂ ಇತರೆ ಕುಶಲ ಕಾರ್ಮಿಕರು | 5881-20 | 226-20 | 5532-80 | 212-20 | 4919-20 | 189-20 |
| 2 | ಪಂಪ್ ಆಪರೇಟರ್/ಮೆಕ್ಯಾನಿಕ್/ಬಾಲವಾಡಿ/ ಕಾರ್ಯಕರ್ತೆಯರು/ವಾಹನ ಚಾಲಕರು ಮತ್ತು ಇತರೆ ಅರೆ ಕುಶಲ ಕಾರ್ಮಿಕರು | 5647-20 | 217-20 | 5304-00 | 204-00 | 4808-70 | 184-90 |
| 3 | ವಾಟರ್‌ಮ್ಯಾನ್ (ನೀರು ಗಂಟಿ) | 5413-20 | 208-20 | 5075-20 | 195-20 | 4698-20 | 180-70 |
| 4 | ಜವಾನರು, ಅಟೆಂಡರ್ | 5179-20 | 199-20 | 4846-40 | 186-40 | 4587-70 | 176-45 |
| 5 | ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸ ರಸ್ತೆಗಳನ್ನು ಗುಡಿಸುವುದು, ಒಳಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು ಹಾಗೂ ಇತರೆ ಕುಶಲರಲ್ಲದ ಕಾರ್ಮಿಕರು | 5044-00 | 194-00 | 4264-00 | 164-00 | 3484-00 | 134-00 |

<u>ತುಟ್ಟಿಭತ್ಯೆ :</u>

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳನ್ನು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960-100) 3944 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 3944 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿ ಭತ್ಯೆ ನೀಡತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು, ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ, ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಂಕದ (ಜನವರಿ 2010 ರಿಂದ ಡಿಸೆಂಬರ್ 2010) ರ ಸರಾಸರಿ ಆಧಾರದ ಮೇಲೆ 2011 ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದು ಸೇರಿದಂತೆ ಲೆಕ್ಕ ಹಾಕತಕ್ಕದ್ದು.

<u>ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ :</u>

<u>ಅ) ಮಾಸಿಕ ವೇತನವನ್ನು ಪಡೆಯುವವರು:</u>

ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ. ಅಂಶಗಳು x ತುಟ್ಟಿಭತ್ಯೆ ದರ x 30 ದಿನಗಳು = ತುಟ್ಟಿಭತ್ಯೆ

<u>ಆ) ದಿನಗೂಲಿ ವೇತನ ಪಡೆಯುವವರು:</u>

$$\frac{\text{ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ. ಅಂಶಗಳು} \times \text{ತುಟ್ಟಿಭತ್ಯೆ ದರ} \times 30 \text{ ದಿನಗಳು} = \text{ತುಟ್ಟಿಭತ್ಯೆ}}{26}$$

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.
3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ಹೆಚ್ಚಾಗಿರುವ ದರಗಳ ವೇತನವನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.
4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.
5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ, ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ರಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಬೇಕು.
7. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.
8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ, ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.
9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.

.................4

10. ಅಪ್ರೆಂಟೀಸ್‌ಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.
11. **ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ, ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ, ಅವಶ್ಯವಿದ್ದರೆ ಸರಳವಾದ ನಕ್ಷೆಗಳನ್ನು ಓದಿ ಮತ್ತು ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.
12. **ಅರೆ ಕುಶಲ:** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರ ಉಪಕರಣಗಳ ಸಹಾಯದಿಂದ ಸರಳವದ ಕೆಲಸಗಳನ್ನು ಮಾಡಬಲ್ಲವರು.
13. **ಕುಶಲರಲ್ಲದವರು:** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ, ಆದರೆ ಉದ್ಯೋಗದ ವಾತಾವರಣದ ಪರಿಚಯವಿರುವ ಕೆಲಸ ಮಾಡುವುದು. ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರುಗಳಿಗೆ ಸರ್ಕಾರದ ಕಾರ್ಮಿಕ ಆಯುಕ್ತರ ಅರೆ ಸರ್ಕಾರಿ ಪತ್ರ ಸಂಖ್ಯೆ: ಪಿಟಿಎನ್/ಸಿಆರ್ – 188/09-10, ದಿನಾಂಕ:07-01-2010 ರನ್ವಯ ಸದರಿ ನೌಕರರುಗಳಿಗೆ ಕನಿಷ್ಠ ವೇತನವನ್ನು ಪಾವತಿಸಲಾಗುತ್ತಿರುತ್ತದೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ:04-05-2011 ರಂದು ಕಾರ್ಮಿಕ ಇಲಾಖೆಯ ಪ್ರಸ್ತುತ ಅಧಿಸೂಚನೆ ಅನ್ವಯ ಪರಿಷ್ಕೃತ ವೇತನ ಶ್ರೇಣಿಯನ್ನು ಹಂಗಾಮಿ ಕಾರ್ಮಿಕರುಗಳಿಗೆ ನೀಡುವುದರಲ್ಲಿ ಯಾವುದೇ ಬಾದಕವಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ:21-02-2011 ರಂದು ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು, ಪಾಲಿಕೆಯ ಮಹದೇವಪುರ ವಲಯ, ಬೊಮ್ಮನಹಳ್ಳಿ ವಲಯ, ದಾಸರಹಳ್ಳಿ ವಲಯ, ರಾಜರಾಜೇಶ್ವರಿನಗರ ವಲಯ ಮತ್ತು ಯಲಹಂಕ ವಲಯಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ಮುಂದುವರೆದು ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರುಗಳಿಗೆ, ಸದರಿ ಅಧಿಸೂಚನೆ ಹೊರಡಿಸಿದ ದಿನಾಂಕ:21-02-2011 ರಿಂದ ಅನ್ವಯವಾಗುವಂತೆ, ಪರಿಷ್ಕೃತ ಕನಿಷ್ಠ ವೇತನವನ್ನು ಪಾವತಿಸುವ ಬಗ್ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 01-06-2011 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ:01-06-2011 ರ ಟಿಪ್ಪಣಿಯನ್ನು ಒಪ್ಪುತ್ತಾ, ಸರ್ಕಾರದ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಜಾರಿಗೊಳಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2011 ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಕೌನ್ಸಿಲ್ ಸಭೆಯ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ದಿನಾಂಕ:26-09-2011 ರಲ್ಲಿನ ಸಮಿತಿಯ ಸಭೆಯಲ್ಲಿನ ಅವಲೋಕನೆಗೆ ಸಂಬಂಧಿಸಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, ದಿನಾಂಕ: 20-06-2011 ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:17-03-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸದರಿ ನೌಕರರು ಕಾರ್ಮಿಕ ಕಾಯಿದೆಗೆ ಒಳಪಡುವುದಿಲ್ಲವೆಂದು ನ್ಯಾಯಾಲಯವು ಅಭಿಪ್ರಾಯ ನೀಡಿರುವುದರಿಂದ, ಸದರಿ ನೌಕರರು ಕನಿಷ್ಠ ವೇತನಕ್ಕೆ ಒಳಪಡುವುದಿಲ್ಲ. ಈಗಾಗಲೇ ನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವು ಇಂತಹ ನೌಕರರುಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುತ್ತಿರುವುದರಿಂದ, ಸದರಿ ನೌಕರರುಗಳಿಗೂ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಸದರಿ ನೌಕರರು ಕಾರ್ಮಿಕ ಕಾಯಿದೆಗೆ ಒಳಪಡುವುದಿಲ್ಲವೆಂದು ನ್ಯಾಯಾಲಯವು ಅಭಿಪ್ರಾಯ ನೀಡಿರುವುದರಿಂದ, ಸದರಿ ನೌಕರರು ಕನಿಷ್ಠ ವೇತನಕ್ಕೆ ಒಳಪಡುವುದಿಲ್ಲ. ಈಗಾಗಲೇ ನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವು ಇಂತಹ ನೌಕರರುಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುತ್ತಿರುವುದರಿಂದ, ಸದರಿ ನೌಕರರುಗಳಿಗೂ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (153) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ದಿನಾಂಕ:05-06-2012 ರಂದು ಒಂದು ಸಾರ್ವಜನಿಕ ಕಾರ್ಯಕ್ರಮವನ್ನು ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಪೂಜ್ಯ ಮಹಾಪೌರರು, ಮಾನ್ಯ ಉಪ ಮಹಾಪೌರರು, ಮಾನ್ಯ ಆಡಳಿತ ಪಕ್ಷದ ನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರು, ಆಯುಕ್ತರು ಮತ್ತು ಇತರೆ ಗಣ್ಯ ವ್ಯಕ್ತಿಗಳು ಪಾಲ್ಗೊಂಡಿರುತ್ತಾರೆ. ಈ ಸಂದರ್ಭದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಹಾಗೂ ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣಾ ಅರಿವನ್ನು ಉಂಟು ಮಾಡುವ ಸಲುವಾಗಿ ಒಂದು ಸಾರ್ವಜನಿಕ ಸಭೆಯನ್ನು ಸಹ ನಡೆಸಲಾಯಿತು.

ಪಾಲಿಕೆಯ ಆಯುಕ್ತರು ಈ ಸಂದರ್ಭದಲ್ಲಿ ಮಾತನಾಡುತ್ತಾ, ಬೆಂಗಳೂರು ನಗರದ ಪರಿಸರ ಸಂರಕ್ಷಣಾ ವಿಚಾರದಲ್ಲಿ ಎಲ್ಲರೂ ಕಾಳಜಿ ವಹಿಸಿ ಕೆಲಸ ಮಾಡಬೇಕೆಂದು ಹಾಗೂ ಪಾಲಿಕೆಯ ಎಲ್ಲಾ ಸದಸ್ಯರು ಮುಂದಾಳತ್ವ ವಹಿಸಿ ಪರಿಸರ ಸಂರಕ್ಷಣಾ ಕಾರ್ಯವನ್ನು ಮಾಡಬೇಕೆಂದು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಅವರು ಒಂದು ಸಲಹೆಯನ್ನು ನೀಡಿ ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಪಾಲಿಕೆಯ ಸದಸ್ಯರುಗಳು ಮಾಡಿರುವ ಕೆಲಸವನ್ನು ಗುರುತಿಸಿ ಎಲ್ಲರಿಗೂ ಉತ್ತೇಜನ ನೀಡುವ ಸಲುವಾಗಿ 5 ಅತ್ಯುತ್ತಮ ಪಾಲಿಕೆಯ ಸದಸ್ಯರಿಗೆ "ಪರಿಸರ ಸ್ನೇಹಿ ಪಾಲಿಕಾ ಸದಸ್ಯರು" ಎಂಬ ಬಿರುದನ್ನು ಕೊಡುವ ಜೊತೆಗೆ ಅವರ ವಾರ್ಡ್‌ಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ರೂ.5.00 ಲಕ್ಷಗಳ ವಿಶೇಷ ಅನುದಾನವನ್ನು ಘೋಷಣೆ ಮಾಡುವುದು ಸೂಕ್ತವೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಸಲಹೆ ಬಹಳ ಉತ್ತಮವಾದುದೆಂದು ಪೂಜ್ಯ ಮಹಾಪೌರರು ಮತ್ತು ಇತರೆ ಗಣ್ಯ ವ್ಯಕ್ತಿಗಳು ಸಹಮತಿಯನ್ನು ವ್ಯಕ್ತಪಡಿಸಿರುತ್ತಾರೆ. ಆದುದರಿಂದ, ಪರಿಸರ ಸ್ನೇಹಿ ಪಾಲಿಕೆಯ ಸದಸ್ಯರನ್ನು ಗುರುತಿಸಿ, ಅವರ ಕಾರ್ಯವನ್ನು ಉತ್ತೇಜನ ನೀಡುವ ಸಲುವಾಗಿ ಪ್ರತಿ ವರ್ಷ ವಿಶ್ವ ಪರಿಸರ ದಿನಾಚರಣೆ ಸಂದರ್ಭದಲ್ಲಿ ಸನ್ಮಾನಿಸಲು ತೀರ್ಮಾನ ಕೈಗೊಳ್ಳುವ ಸಲುವಾಗಿ ಒಂದು ಪ್ರಸ್ತಾವನೆಯನ್ನು ಪಾಲಿಕೆ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸುವಂತೆ ತೀರ್ಮಾನಿಸಲಾಯಿತು.

ಈ ರೀತಿ ಅರ್ಹ ಸದಸ್ಯರನ್ನು ನೇಮಿಸುವ ಕುರಿತು ಒಂದು ಸಮಿತಿಯನ್ನು ರಚಿಸಲು ಪಾಲಿಕೆಯು ಅಗತ್ಯ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ಈ ಸಮಿತಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಸದಸ್ಯರ ಆಯ್ಕೆ ಮಾಡುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ.

1. ಕಳೆದ ಒಂದು ವರ್ಷದಲ್ಲಿ ಆಯಾ ಸದಸ್ಯರ ವಾರ್ಡ್‌ನಲ್ಲಿ ನೆಟ್ಟು ಪೋಷಿಸಿರುವ ಒಟ್ಟು ಗಿಡಗಳ ಸಂಖ್ಯೆ.
2. ವಾರ್ಡ್‌ನ ಶುಚಿತ್ವ ಮತ್ತು ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸದಸ್ಯರ ಪಾತ್ರ
3. ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಣಗೊಳಿಸುವಲ್ಲಿ ಮಾಡಿರುವ ಸಾಧನೆ.
4. ಕಲುಷಿತ ನೀರನ್ನು ಸಂಸ್ಕರಣೆ ಮತ್ತು ಪುನರ್ ಬಳಕೆ ಮಾಡಿರುವ ಬಗ್ಗೆ ಸದಸ್ಯರ ಪಾತ್ರ
5. ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಂಡು ನೀರಿನ ಸಂರಕ್ಷಣೆ ಮಾಡುವಲ್ಲಿ ಸದಸ್ಯರ ಪಾತ್ರ
6. ಆಯಾ ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳನ್ನು ಸಂರಕ್ಷಿಸಿ ಪೋಷಿಸುವಲ್ಲಿ ಮಾಡಲಾಗಿರುವ ಸಾಧನೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, "ಪರಿಸರ ಸ್ನೇಹಿ ಪಾಲಿಕಾ ಸದಸ್ಯರ" ಆಯ್ಕೆ ಕುರಿತು ರಚಿಸಬೇಕಾಗಿರುವ ಸಮಿತಿಯನ್ನು ಮತ್ತು ಈ ನಿಟ್ಟಿನಲ್ಲಿ ಅನುಸರಿಸಬೇಕಾದ ಆಯ್ಕೆ ಪ್ರಕ್ರಿಯೆ ಕುರಿತು ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-06-2012 ರ ಟಿಪ್ಪಣಿ.

..................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30–08–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (155) / 2012–13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಸಿ.ಬ್ರಿಜೇಶ್, ಲೆಕ್ಕಾಧೀಕ್ಷಕರು, ಪೌರಾಡಳಿತ ನಿರ್ದೇಶನಾಲಯದಿಂದ ಎರವಲು ಸೇವೆಯ ಮೇಲೆ ನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಪರಿಶೀಲಿಸಿ, ಅಭಿಪ್ರಾಯ ವರದಿಯನ್ನು ಕಳುಹಿಸಿಕೊಡಲು ಸರ್ಕಾರದ ಪತ್ರದಲ್ಲಿ ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 35 ಲೆಕ್ಕಾಧೀಕ್ಷಕರುಗಳ ಹುದ್ದೆಯು ಮಂಜೂರು ಆಗಿರುತ್ತದೆ.

ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಸರ್ಕಾರವು ದಿನಾಂಕ: 19–05–2005 ರ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿರುತ್ತದೆ. ಆದ್ದರಿಂದ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಕೆಳಕಂಡ ರೀತಿ ಭರ್ತಿ ಮಾಡಬೇಕಾಗಿರುತ್ತದೆ.

| ಹುದ್ದೆಯ ಪದನಾಮ | ತುಂಬುವ ವಿಧಾನ | ವಿದ್ಯಾರ್ಹತೆ |
|---|---|---|
| ಲೆಕ್ಕ ಆಧೀಕ್ಷಕರು ವೇತನ ಶ್ರೇಣಿ ರೂ. 10800–20025 | ಶೇ.50ರಷ್ಟು ಹುದ್ದೆಯನ್ನು ರಾಜ್ಯ ಲೆಕ್ಕ ಪತ್ರ ಇಲಾಖೆ, ಕರ್ನಾಟಕ ಸರ್ಕಾರದಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಳ್ಳುವುದು.<br>ಶೇ. 50 ರಷ್ಟು ಹುದ್ದೆಯನ್ನು ಪಾಲಿಕೆಯ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ಹುದ್ದೆಯ ಅನುಪಾತ 4:1 ರ ಅಡಿಯಲ್ಲಿ ಮುಂಬಡ್ತಿ ನೀಡಬೇಕಾಗಿದ್ದು, 5ನೇ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿಗೆ ಪರಿಗಣಿಸಬೇಕಾಗಿರುತ್ತದೆ.<br>ಶೀಘ್ರಲಿಪಿಗಾರರು ಲೆಕ್ಕ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ಪಡೆಯುವ ಮುಂಚೆ ಕನಿಷ್ಠ 1 ವರ್ಷಗಳ ಸೇವೆಯನ್ನು ಪ್ರಥಮ ದರ್ಜೆ ಗುಮಾಸ್ತರಾಗಿ ಕಾರ್ಯನಿರ್ವಹಿಸಿರಬೇಕು. | ಕನಿಷ್ಠ 5–ವರ್ಷ ಸೇವೆಯನ್ನು ಅರ್ಹತೆ ಹೊಂದಿರುವ ಹುದ್ದೆಯಲ್ಲಿ ಸಲ್ಲಿಸತಕ್ಕದ್ದು, ಈ ಅರ್ಹತೆ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಕನಿಷ್ಠ 3–ವರ್ಷಗಳ ಸೇವೆ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳನ್ನು ಪರಿಗಣಿಸಬಹುದಾಗಿರುತ್ತದೆ.<br><br>ಇಲಾಖಾ ಪರೀಕ್ಷೆಗಳು:<br>1. ಎಸ್.ಎ.ಎಸ್ ಪರೀಕ್ಷೆ<br>2. ಕನ್ನಡ ಭಾಷಾ ಪರೀಕ್ಷೆ<br>3. ಅಕೌಂಟ್ಸ್ ಹೈಯರ್<br>4. ರೆವಿನ್ಯೂ ಹೈಯರ್<br>5. ಮುನಿಸಿಪಲ್ & ಲೋಕಲ್ ಬೋರ್ಡ್<br>6. ಜನರಲ್–ಲಾ |

ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಲಿ ಇರುವ ಹುದ್ದೆಗಳು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ವಿವರಗಳು | ಮಂಜೂರಾಗಿರುವ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಖಾಲಿ ಹುದ್ದೆ | ಷರಾ |
|---|---|---|---|---|---|
| 1 | ಬಿ.ಬಿ.ಎಂ.ಪಿ | 18 | 8 | 10 | – |
| 2 | ರಾಜ್ಯ ಲೆಕ್ಕಪತ್ರ ಇಲಾಖೆ | 17 | 40 | –23 | ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. |

ನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಪೌರಾಡಳಿತ ನಿರ್ದೇಶನಾಲಯದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ.ಸಿ.ಬ್ರಿಜೇಶ್, ಲೆಕ್ಕಾಧೀಕ್ಷಕರು, ಇವರನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಸರ್ಕಾರವು ದಿನಾಂಕ: 18-02-2012 ರ ಪತ್ರದಲ್ಲಿ ಶ್ರೀ.ಸಿ.ಬ್ರಿಜೇಶ್, ಲೆಕ್ಕಾಧೀಕ್ಷಕರ ಇವರ ಸೇವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವುದಕ್ಕೆ ಅಭಿಪ್ರಾಯ ನೀಡಲು ಕೋರಿರುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:31.05.2012ರ ಟಿಪ್ಪಣಿ ಹಾಗೂ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿದ ನಂತರ ಆಯುಕ್ತರ ದಿನಾಂಕ:31-05-2012ರ ಟಿಪ್ಪಣಿಯಲ್ಲಿ ವಿವರಿಸಿರುವ ರೀತ್ಯಾ ಈ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಅಂತಿಮ ತೀರ್ಮಾನಕ್ಕೆ ಮಂಡಿಸಲು ನಿರ್ಣಯಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:14-06-2012ರ ನಿರ್ಣಯ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:14-06-2012ರ ನಿರ್ಣಯವನ್ನು ಒಪ್ಪುತ್ತಾ, ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವ ಬಗ್ಗೆ ಪಾಲಿಕೆ ಸಭೆಯ ತೀರ್ಮಾನಕ್ಕೆ ಮಂಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

**(ಡಿ.ವೆಂಕಟೇಶ್ ಮೂರ್ತಿ)**
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 04 (370) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಗೆ ನೀಡಲಾಗಿರುವ ಗುತ್ತಿಗೆಯ ಷರತ್ತು ಉಲ್ಲಂಘನೆಯ ಕುರಿತಂತೆ ದಿನಾಂಕ:14-06-2011 ರಂದು ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ಸಂಸ್ಥೆಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಸಿಎಲ್-4 ಸನ್ನದನ್ನು ನೀಡಿದ್ದು, ಇದರ ಅವಧಿ ದಿನಾಂಕ:30-06-2011ಕ್ಕೆ ಮಾತ್ರವಿರುತ್ತದೆ. ಪಾಲಿಕೆಯ ಆಯುಕ್ತರು ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಭೆಯಲ್ಲಿ ಮಧ್ಯಪಾನ ಪರವಾನಿಗೆ ರದ್ದುಪಡಿಸುವ ಕುರಿತು ನಡೆದ ಚರ್ಚೆಯ ಹಿನ್ನಲೆಯಲ್ಲಿ, ದಿನಾಂಕ:20-06-2011 ರಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಈ ಸಂಸ್ಥೆಗೆ ನೀಡಲಾಗಿರುವ ಮಧ್ಯಪಾನ ಪರವಾನಿಗೆಯನ್ನು ನವೀಕರಿಸಬಾರದು ಎಂಬುದಾಗಿ ಕೋರಲಾಗಿತ್ತು. ಇದರ ಅನ್ವಯ ಸಿಎಲ್-4 ಪರವಾನಿಗೆಯನ್ನು ನವೀಕರಿಸಲಾಗಿರುವುದಿಲ್ಲ.

ದಿನಾಂಕ:23-08-2011 ರಂದು ನಡೆದ ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಭೆಯಲ್ಲಿ ಈ ಸಂಸ್ಥೆಗೆ ನೀಡಿರುವ ಮಧ್ಯಪಾನ ಪರವಾನಿಗೆಯನ್ನು ನವೀಕರಿಸದೆ ಇರುವುದು ಸಮಂಜಸವಲ್ಲ ಹಾಗೂ ನಗರದ ಇಂತಹ ಇತರೆ ಸಂಸ್ಥೆಗಳಿಗೆ ನೀಡಲಾಗಿರುವ ಪರವಾನಿಗೆಯನ್ನು ರದ್ದುಪಡಿಸದೆ ಇದ್ದು, ಈ ಸಂಸ್ಥೆಗೆ ಮಾತ್ರ ಈ ರೀತಿಯ ಕ್ರಮ ಜರುಗಿಸುವುದು ಸಮಂಜಸವಲ್ಲವೆಂದು ಅಭಿಪ್ರಾಯ ನೀಡುತ್ತಾ, ಪಾಲಿಕೆಯವರು ಮಧ್ಯಪಾನ ಪರವಾನಿಗೆಯನ್ನು ನವೀಕರಿಸುವಂತೆ ಸಂಬಂಧಿಸಿದವರಿಗೆ ಪ್ರಸ್ತಾಪಿಸುವ ನಿರ್ದೇಶನ ನೀಡಿರುತ್ತಾರೆ.

ಈ ಸಂಬಂಧ, ದಿನಾಂಕ:24-08-2011 ರಂದು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿತ್ತು. ದಿನಾಂಕ:18-10-2011 ರಂದು ಈ ಸ್ಥಾಯಿ ಸಮಿತಿಯು ಆಯುಕ್ತರ ಟಿಪ್ಪಣಿ ಅನುಮೋದಿಸಿ, ಪಾಲಿಕೆಯ ತೀರ್ಮಾನ ಕೈಗೊಳ್ಳಲು ನಿರ್ಣಯಿಸಿದ ತರುವಾಯ ದಿನಾಂಕ:29-11-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಕೈಗೊಂಡಿರುವ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಗಿರುತ್ತದೆ.

ಶ್ರೀ.ಎಂ.ಉದಯ್‌ಶಂಕರ್, ವಿರೋಧ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ದಿನಾಂಕ:02-12-2011 ರಲ್ಲಿ ಪೂಜ್ಯ ಮಹಾಪೌರರಿಗೆ ಪತ್ರ ಬರೆದು ಕೆ.ಎಂ.ಸಿ ಕಾಯ್ದೆಯ ನಿಯಮ 51 ರ ಪ್ರಕಾರ ಪ್ರಸ್ತಾವನೆಯನ್ನು ಪಾಲಿಕೆಯ ಸಭೆಯ ಮುಂದೆ ಪುನ: ಮಂಡಿಸಲು ಕೋರಿರುತ್ತಾರೆ. ಪೂಜ್ಯ ಮಹಾಪೌರರು ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದ್ದು, ಮಾನ್ಯ ಆಯುಕ್ತರು, ಕೌನ್ಸಿಲ್ ಕಾರ್ಯದರ್ಶಿಯವರ ಪ್ರಸ್ತಾವನೆಯಂತೆ ಆಸ್ತಿ ಶಾಖೆಗೆ ನಿಯಾಮಾನುಸಾರ ಕ್ರಮಕ್ಕಾಗಿ ಆದೇಶ ನೀಡಿರುತ್ತಾರೆ. ಪಾಲಿಕೆಯ ನಿರ್ಣಯವು ದಿನಾಂಕ:28-11-2011 ರಲ್ಲಿ ಆಗಿದ್ದು, ನಿಯಮಾನುಸಾರ 90 ದಿನಗಳ ನಂತರವೇ ಈ ನಿರ್ಣಯದ ಬಗ್ಗೆ ಮರು ಪರಿಶೀಲಿಸುವ ಅವಕಾಶವಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 ರ ನಿಯಮ 51 ರ ಅನ್ವಯ ಶ್ರೀ.ಎಂ.ಉದಯ್‌ಶಂಕರ್, ವಿರೋಧ ಪಕ್ಷದ ನಾಯಕರು ಕೋರಿರುವ ಕಡತವನ್ನು ಪಾಲಿಕೆ ಸಭೆಯ ಮುಂದೆ ಪುನರ್ ಪರಿಶೀಲಿಸಲು ಮಂಡಿಸಿರುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 16-02-2012ರ ಟಿಪ್ಪಣಿ.

ಚರ್ಚೆಯ ನಂತರ ಶ್ರೀ ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಕೆ.ಎಂ.ಸಿ. ಕಾಯ್ದೆ 1976 ರ ನಿಯಮ 51 ರ ಅಡಿಯಲ್ಲಿ ಪುನರ್ ಪರಿಶೀಲನೆಗಾಗಿ ಮಂಡಿಸಲಾದ ಪ್ರಸ್ತಾವನೆಯನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಕೆ.ಎಂ.ಸಿ. ಕಾಯ್ದೆ 1976 ರ ನಿಯಮ 51 ರ ಅಡಿಯಲ್ಲಿ ಪುನರ್ ಪರಿಶೀಲನೆಗಾಗಿ ಮಂಡಿಸಲಾದ ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 05 (159) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರಿನ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd. ರವರು ಇಂತಹ ಸ್ಥಳಗಳನ್ನು ಗುರುತಿಸಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅತಿ ಕಡಿಮೆ ದರದಲ್ಲಿ ಅಂದರೆ 20 ಲೀಟರ್‌ಗೆ ರೂ.5/-ರ ದರದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು "Community Water Systems in Urban Slums" ಎಂಬ ಯೋಜನೆಯ ಮೂಲಕ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಉದ್ದೇಶ ಹೊಂದಿರುತ್ತಾರೆ. ಈಗಾಗಲೇ ಸದರಿಯವರು ಈ ಘಟಕವನ್ನು ಆಂಧ್ರ ಪ್ರದೇಶದ 290 ಸ್ಥಳಗಳಲ್ಲಿ ಸ್ಥಾಪಿಸಿದ್ದು, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಸದರಿ ಯೋಜನೆಗೆ ಕನಿಷ್ಟ 10 ಸಾವಿರ ಜನಸಂಖ್ಯೆಯುಳ್ಳ 10 ಕೊಳಚೆ ಪ್ರದೇಶಗಳನ್ನು ಗುರುತಿಸಿ, Water Health India Pvt. Ltd. ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು "BOOT (Build-Own-Operate-Transfer) ಆಧಾರದ ಮೇಲೆ ಅನುಷ್ಠಾನಗೊಳಿಸಿ, 5 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಘಟಕವನ್ನು ನಿರ್ಮಿಸಲು ಪಾಲಿಕೆಯು ಕೊಳಚೆ ಪ್ರದೇಶದ ಮಧ್ಯಭಾಗದಲ್ಲಿ ಸುಮಾರು 30x40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ವ್ಯವಸ್ಥೆವುಳ್ಳ ಸ್ಥಳವನ್ನು ಮತ್ತು ಸದರಿ ಘಟಕಕ್ಕೆ ವಿದ್ಯುತ್ ಅನ್ನು ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯು ಕೊಳಚೆ ಪ್ರದೇಶದ ನಿವಾಸಿಗಳಿಗೆ ಉಪಯುಕ್ತವಾಗಿರುವುದರಿಂದ, ಸದರಿ ಪ್ರಸ್ತಾವನೆಗೆ ದಿನಾಂಕ:07-01-2011 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯದ ಸಂಖ್ಯೆ:ಸಾಆಸ್ಥಾಸ/09/2010-11 ರಲ್ಲಿ ಮತ್ತು ದಿನಾಂಕ:24-01-2011 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯದ ಸಂಖ್ಯೆ:ತೆಆಸ್ಥಾಸ/153/2010-11 ರಲ್ಲಿ ಅನುಮೋದನೆ ಪಡೆಯಲಾಗಿದ್ದು, ಸದರಿ ಯೋಜನೆಗೆ ಈ ಕೆಳಕಂಡಂತೆ 8 ಸ್ಥಳಗಳನ್ನು ಗುರುತಿಸಲಾಗಿದೆ.

- ಶಾಂತಿನಗರ, ವಾರ್ಡ್ ಸಂಖ್ಯೆ 117
- ದೇವರಜೀವನಹಳ್ಳಿ, ವಾರ್ಡ್ ಸಂಖ್ಯೆ 47 (ಎರಡು ಸ್ಥಳಗಳಲ್ಲಿ)
- ವಿದ್ಯಾರಣ್ಯಪುರ, ವಾರ್ಡ್ ಸಂಖ್ಯೆ 09
- ಅರಮನೆನಗರ, ವಾರ್ಡ್ ಸಂಖ್ಯೆ 35
- ಪೀಣ್ಯಾ ಕೈಗಾರಿಕಾ ಪ್ರದೇಶ, ವಾರ್ಡ್ ಸಂಖ್ಯೆ 41
- ಪ್ರಕಾಶ್‌ನಗರ, ವಾರ್ಡ್ ಸಂಖ್ಯೆ 98
- ಲಿಂಗರಾಜಪುರ, ವಾರ್ಡ್ ಸಂಖ್ಯೆ 49

ಪಾಲಿಕೆಯ ವ್ಯಾಪ್ತಿಯ ಕೊಳಚೆ ಪ್ರದೇಶದಲ್ಲಿ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಮಾದರಿ ಯೋಜನೆಯಾಗಿ 08 ಸ್ಥಳಗಳಲ್ಲಿ Water Health India Pvt. Ltd. ರವರಿಗೆ ಸುಮಾರು 30x40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥೆಯುಳ್ಳ ಸ್ಥಳವನ್ನು 5 ವರ್ಷಗಳ ಅವಧಿಗೆ ನೀಡಲು ಪ್ರಸ್ತಾವನೆಯನ್ನು ಅನುಮೋದನೆಗಾಗಿ ಮಂಡಿಸಲಾಗಿತ್ತು.

.........2

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯು ದಿನಾಂಕ: 23-11-2011 ರಂದು ನಡೆದ ಸಭೆಯ ನಡವಳಿಗಳ ವಿಷಯದ ಸಂಖ್ಯೆ:ಸಾಆಸ್ಥಾಸ/15/2011-12 ರಲ್ಲಿ "ಪಾಲಿಕೆ ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಬಡ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd. ಸಂಸ್ಥೆಯವರ ಯೋಜನೆಯನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳುವ ವಿಷಯದಲ್ಲಿ ಕರಡು ಪತ್ರದಲ್ಲಿರುವ ಹಲವಾರು ನಿಯಮ ಹಾಗೂ ನಿಬಂಧನೆಗಳನ್ನು ಕಾನೂನು ಕೋಶದ ಮುಖ್ಯಸ್ಥರೊಂದಿಗೆ ವಿವರವಾಗಿ ಚರ್ಚಿಸಿ ನಿಯಮಾ ಅನುಬಂಧಗಳನ್ನು ಅಳವಡಿಸಿ ವಿಷಯವನ್ನು ಮರು ಮಂಡಿಸುವಂತೆ" ಕಡತವನ್ನು ಹಿಂದಿರುಗಿಸಲಾಗಿರುತ್ತದೆ.

ಈ ನಿಟ್ಟಿನಲ್ಲಿ ಕರಡು ಒಪ್ಪಂದ ಪತ್ರದಲ್ಲಿ ಮಾರ್ಪಾಡು ಮಾಡಲಾಗಿದ್ದು, ಮಾರ್ಪಾಡು ಮಾಡಿರುವ ಕರಡು ಒಪ್ಪಂದ ಪತ್ರದಲ್ಲಿರುವ ನಿಯಮ ಹಾಗೂ ನಿಬಂಧನೆಗಳನ್ನು ಕಾನೂನು ಕೋಶದ ಮುಖ್ಯಸ್ಥರೊಂದಿಗೆ ಚರ್ಚಿಸಲಾಗಿದ್ದು, ಕರಡು ಪತ್ರದಲ್ಲಿರುವ ನಿಬಂಧನೆಗಳು ಸಮಂಜಸವಾಗಿದೆಯೆಂದು ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪಾಲಿಕೆಯ ವ್ಯಾಪ್ತಿಯ ಕೊಳಚೆ ಪ್ರದೇಶದಲ್ಲಿ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಮಾದರಿ ಯೋಜನೆಯಾಗಿ 08 ಸ್ಥಳಗಳಲ್ಲಿ Water Health India Pvt. Ltd. ರವರಿಗೆ ಸುಮಾರು 30x40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥೆಯುಳ್ಳ ಸ್ಥಳವನ್ನು 5 ವರ್ಷಗಳ ಅವಧಿಗೆ ನೀಡುವ ಪ್ರಸ್ತಾವನೆಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-05-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Water Health India Pvt. Ltd. ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು BOOT (Build-Own-Operate-Transfer) ಆಧಾರದ ಮೇಲೆ ಅನುಷ್ಠಾನಗೊಳಿಸಿ, 5 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿದ್ದು, ಸದರಿ ಸಂಸ್ಥೆಯೊಂದಿಗೆ ಮಾಡಿಕೊಳ್ಳುವ ಕರಡು ಒಪ್ಪಂದ ಪತ್ರದಲ್ಲಿರುವ ನಿಬಂಧನೆಗಳು ಸಮಂಜಸವಾಗಿದೆ ಎಂದು ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯ ನೀಡಿರುವ ಹಿನ್ನಲೆಯಲ್ಲಿ ವಾರ್ಡ್ ನಂ. 73, 163, 143, 152, 10, 105, 121, 61, 33, 137 ಮತ್ತು 71ರ ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡಲು ಹಾಗೂ ಅಗತ್ಯವಿರುವ ಕಡೆಗಳಲ್ಲಿ ಅನುಷ್ಠಾನ ಮಾಡುವುದೆಂದು ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:11-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಾಥಮಿಕ ಹಂತವಾಗಿ ವಾರ್ಡ್ ನಂ.73 ಮತ್ತು 169 ರಲ್ಲಿ ಶುದ್ಧನೀರಿನ ಉತ್ಪಾದನಾ ಘಟಕವನ್ನು ಸ್ಥಾಪಿಸಿ, ಅದರ ಕಾರ್ಯವನ್ನು ಆಧರಿಸಿ, ಸಾಧಕ ಬಾಧಕಗಳ ವರದಿಯೊಂದಿಗೆ ಇತರೆ ವಾರ್ಡ್‌ಗಳಿಗೆ ವಿಸ್ತರಿಸುವ ಬಗ್ಗೆ ಸಭೆಯ ಮುಂದೆ ಪ್ರಸ್ತಾವನೆಯನ್ನು ಮಂಡಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.................3

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪ್ರಾಥಮಿಕ ಹಂತವಾಗಿ ವಾರ್ಡ್ ನಂ.73 ಮತ್ತು 169 ರಲ್ಲಿ ಶುದ್ಧನೀರಿನ ಉತ್ಪಾದನಾ ಘಟಕವನ್ನು ಸ್ಥಾಪಿಸಿ, ಅದರ ಕಾರ್ಯವನ್ನು ಆಧರಿಸಿ, ಸಾಧಕ ಬಾಧಕಗಳ ವರದಿಯೊಂದಿಗೆ ಇತರೆ ವಾರ್ಡ್‌ಗಳಿಗೆ ವಿಸ್ತರಿಸುವ ಬಗ್ಗೆ ಸಭೆಯ ಮುಂದೆ ಪ್ರಸ್ತಾವನೆಯನ್ನು ಮಂಡಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 06 (193) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ ಸತಾರೆಂ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ರೂ.230.00 ಕೋಟಿಗಳ ಬಂಡಾವಳದೊಂದಿಗೆ ಸ್ಥಾಪಿಸಲು ಆಸಕ್ತಿ ಹೊಂದಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರದ “State high level committee” ಮುಂದೆ ಅನುಮೋದನೆಗಾಗಿ ಸಲ್ಲಿಸಿದ್ದು, ಈ ಮೇರೆಗೆ ಘನ ಸರ್ಕಾರವು ಮೆ॥ ಸತಾರೆಂ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರ ಪ್ರಸ್ತಾವನೆಗೆ ದಿನಾಂಕ:16-12-2011 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ “State high level committee” ಯಲ್ಲಿ ಸಂಖ್ಯೆ: G.O.No.C1263SPI, 2011 ರಂತೆ ಅನುಮೋದನೆ ನೀಡಿ, ಸದರಿ ಸಂಸ್ಥೆಗೆ ವಿದ್ಯುತ್ ಘಟಕ ಸ್ಥಾಪಿಸಲು ಅವಶ್ಯಕವಿರುವ 25 ಎಕರೆಗಳ ಜಾಗವನ್ನು ಹಾಗೂ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಒದಗಿಸಲು ಕ್ರಮವಹಿಸುವಂತೆ ಪಾಲಿಕೆಗೆ ತಿಳಿಸಲಾಗಿರುತ್ತದೆ.

ಅದರಂತೆ, ಪಾಲಿಕೆಯ ಬಗ್ಗನದೊಡ್ಡಿ ಗ್ರಾಮದಲ್ಲಿ ಲಭ್ಯವಿರುವ 25 ಎಕರೆ ಪ್ರದೇಶವನ್ನು ಸದರಿ ಸಂಸ್ಥೆಗೆ ಒದಗಿಸಲು ಸ್ಥಳ ಪರಿಶೀಲನೆ ಮಾಡಲಾಗಿ, ಸದರಿ ಜಾಗವು ಬನ್ನೇರುಘಟ್ಟ ಕಾಡಿನ ಗಡಿಯಂಚಿನಲ್ಲಿದ್ದು, ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಯಾದಲ್ಲಿ ಕಾಡು ಪ್ರಾಣಿಗಳ ಓಡಾಟಕ್ಕೆ ತೊಂದರೆಯಾಗುವುದನ್ನು ಮನಗಂಡು ಮತ್ತು ಎಂ.ಎಸ್.ಡಬ್ಲ್ಯೂ ನಿಯಮಾವಳಿ, 2000 ರಂತೆ ಕಾಡಿಗೆ ಹೊಂದಿಕೊಂಡಿರುವ ಜಾಗವನ್ನು ಘನತ್ಯಾಜ್ಯ ವಿಲೇವಾರಿಗೆ ಬಳಸಲು ಬಾರದಿರುವುದರಿಂದ ಬಗ್ಗನದೊಡ್ಡಿಯ ಪಾಲಿಕೆ ಜಾಗವನ್ನು ಸದರಿ ವಿದ್ಯುತ್ ಯೋಜನೆಗೆ ಒದಗಿಸಲಾಗಿರುವುದಿಲ್ಲ.

ಮುಂದುವರೆದು ಮೆ॥ ಸತಾರೆಂ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ದಿನಾಂಕ: 25-05-2012 ರಲ್ಲಿ ಪಾಲಿಕೆಗೆ ಸಲ್ಲಿಸಿರುವ ಪತ್ರದಲ್ಲಿ, ಸದರಿ ವಿದ್ಯುತ್ ಯೋಜನೆಗೆ ಅವಶ್ಯವಿರುವ ಭೂಮಿಯನ್ನು ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಸರ್ವೆ ನಂ.30, 31, 32 ಮತ್ತು 33 ರಲ್ಲಿ ಹೊಂದಿರುವುದಾಗಿ ತಿಳಿಸಿ, ಕೆಳಗಿನಂತೆ ಕೋರಿರುತ್ತಾರೆ.

1. ವಿದ್ಯುತ್ ಯೋಜನೆಯನ್ನು ಮೆ॥ ಸತಾರೆಂ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ಬೆಂಗಳೂರಿನಿಂದ ಸುಮಾರು 46 ಕಿ.ಮೀ. ದೂರದಲ್ಲಿರುವ ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ, ಸರ್ವೆ ನಂ.30, 31, 32 ಮತ್ತು 33 ಜಾಗದಲ್ಲಿ ಸ್ಥಾಪಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
2. ವಿದ್ಯುತ್ ಘಟಕ ಸ್ಥಾಪನೆಯಾದಲ್ಲಿ ಸದ್ಯಕ್ಕೆ ಟಿಪ್ಪಿಂಗ್ ಫೀ ನೀಡುವ ಅವಶ್ಯಕತೆ ಇಲ್ಲವೆಂದು ಮತ್ತು ಘಟಕದ ಕಾರ್ಯಕ್ಷಮತೆಯನ್ನು ಆಧರಿಸಿ ಮುಂದಿನ ದಿನಗಳಲ್ಲಿ ಪಾಲಿಕೆಯ ಕೌನ್ಸಿಲ್ ಅಥವಾ ಆಯುಕ್ತರು ಸೂಕ್ತ ತೀರ್ಮಾನ ಕೈಗೊಂಡು ನಿಗಧಿಪಡಿಸಬಹುದೆಂದು ತಿಳಿಸಿರುತ್ತಾರೆ.
3. ವಿದ್ಯುತ್ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ, 30 ತಿಂಗಳ ಅವಧಿಗೆ ಅಥವಾ ಘಟಕ ಪೂರ್ಣಗೊಳ್ಳುವವರೆಗೆ ಯಾವುದು ಮೊದಲೂ ಅಲ್ಲಿಯವರೆಗೆ ರೂ.20.00 ಕೋಟಿಗಳ Performance guarantee ಯನ್ನು ಪಾಲಿಕೆಗೆ ನೀಡುವುದಾಗಿ ತಿಳಿಸಿರುತ್ತಾರೆ.
4. ಸದರಿ ವಿದ್ಯುತ್ ಘಟಕ ಸ್ಥಾಪನೆಗೆ ಅವಶ್ಯಕವಿರುವ ಎಲ್ಲಾ ಶಾಸನಬದ್ಧ ಅನುಮೋದನೆಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ತಾವೇ ಪಡೆಯುವುದಾಗಿ ತಿಳಿಸಿರುತ್ತಾರೆ.
5. ಶಾಸನಬದ್ಧ ಅನುಮೋದನೆಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ಪಡೆದ ನಂತರದ 27 ತಿಂಗಳುಗಳೊಳಗೆ ಉದ್ದೇಶಿತ ವಿದ್ಯುತ್ ಘಟಕ ಯೋಜನೆಯನ್ನು ಪೂರ್ಣಗೊಳಿಸುವುದಾಗಿ ತಿಳಿಸಿರುತ್ತಾರೆ.

..................2

ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 198 ವಾರ್ಡ್‌ಗಳನ್ನು ಹೊಂದಿದ್ದು, ಸುಮಾರು 80 ಲಕ್ಷ ಜನ ಸಂಖ್ಯೆ ಹಾಗೂ ಸುಮಾರು 20 ಲಕ್ಷ ವಸತಿಗಳನ್ನು ಹೊಂದಿರುತ್ತದೆ. ಇದಲ್ಲದೆ ಪ್ರತಿದಿನ ಬೆಂಗಳೂರು ಮಹಾನಗರಕ್ಕೆ ಬಂದು ಹೋಗುವವರ ಜನಸಂಖ್ಯೆಯು (Floating population) ಸಹ ಲಕ್ಷಗಳಲ್ಲಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತಿದಿನ ಸುಮಾರು 3000 ದಿಂದ 3500 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ನಗರವು ಬೆಳೆಯುತ್ತಿರುವ ವೇಗವನ್ನು ಗಮನಿಸಿದ್ದಲ್ಲಿ ಘನತ್ಯಾಜ್ಯದ ಉತ್ಪಾದನೆ ಶೀಘ್ರವಾಗಿ ಪ್ರತಿದಿನ ಸುಮಾರು 5000 ಮೆಟ್ರಿಕ್ ಟನ್ ತಲುಪುವ ಸಾಧ್ಯತೆಯಿರುತ್ತದೆ. ಈ ರೀತಿಯಾಗಿ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು, ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000 ರಂತೆ ಸಮರ್ಪಕವಾಗಿ ಸಂಸ್ಕರಿಸಿ, ಮರುಬಳಕೆ ವಸ್ತುಗಳನ್ನು ಬೇರ್ಪಡಿಸಿ ಅಂತಿಮ ಉಳಿಕೆಯನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಜವಾಬ್ದಾರಿಯು ಪಾಲಿಕೆಯದಾಗಿರುತ್ತದೆ.

ಹಾಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ಸಂಸ್ಕರಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕೇವಲ ಮೂರು ತ್ಯಾಜ್ಯ ಘಟಕಗಳಿದ್ದು, ಹಲವಾರು ಕಾರಣಗಳಿಂದ ಸದರಿ ಘಟಕಗಳು ಪೂರ್ಣ ಸಾಮರ್ಥ್ಯಕ್ಕೆ ಅನುಗುಣವಾಗಿ ತ್ಯಾಜ್ಯ ಸಂಸ್ಕರಿಸಲು ಸಾಧ್ಯವಾಗುತ್ತಿಲ್ಲ ಇದರಿಂದ ಪಾಲಿಕೆಯು ಸಾರ್ವಜನಿಕರಿಂದ ಮತ್ತು ಮಾಧ್ಯಮಗಳಿಂದ ಟೀಕೆಗೆ ಗುರಿಯಾಗುತ್ತಿದೆ.

ಈ ಮಧ್ಯೆ ರಾಜ್ಯ ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ಉದ್ಯೋಗಮಿತ್ರ ವ್ಯವಸ್ಥಾಪಕ ನಿರ್ದೇಶಕರವರು ದಿನಾಂಕ:25-05-2012 ರಂದು ಪತ್ರ ಬರೆದು ಸದರಿ ಯೋಜನೆಗೆ ಅವಶ್ಯವಿರುವ ಜಾಗ ಹಾಗೂ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯ ಒದಗಿಸಿ, ಸದರಿ ಸಂಸ್ಥೆಯು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಸಹಕಾರ ನೀಡಲು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಸಂಸ್ಥೆಯು ದಿನಾಂಕ:07-06-2012 ರಲ್ಲಿ ಕರ್ನಾಟಕ ಸರ್ಕಾರ ಆಯೋಜಿಸಿದ್ದ Global investors meet (Gim) ನಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಒಡಂಬಡಿಕೆ ಕೂಡ ಮಾಡಿಕೊಂಡಿರುತ್ತಾರೆ.

ಸದರಿ ಯೋಜನೆಗೆ ಅವಶ್ಯವಿರುವ ಜಾಗವನ್ನು ಮೆ॥ ಸತಾರಂ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ತಾವೇ ಹೊಂದಿರುವುದರಿಂದ, ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಸದರಿ ಸಂಸ್ಥೆಗೆ ಪಾಲಿಕೆ ವತಿಯಿಂದ ಸರಬರಾಜು ಮಾಡಲು ಒಪ್ಪಿಗೆ ನೀಡಬೇಕಾಗಿರುತ್ತದೆ. ಸದರಿ ಘಟಕ ಕಾರ್ಯಾರಂಭಗೊಂಡ ನಂತರ, ಘಟಕದ ಕಾರ್ಯ ಕ್ಷಮತೆ ಆಧರಿಸಿ, ತಜ್ಞರ ಸಮಿತಿ ರಚಿಸಿ ಟಿಪ್ಪಿಂಗ್ ಫೀ ದರವನ್ನು ನಿಗಧಿಗೊಳಿಸಲು ಸೂಕ್ತ ತೀರ್ಮಾನ ತೆಗೆದುಕೊಳ್ಳಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮೆ॥ ಸತಾರಂ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಬಗ್ಗೆ ಈ ಕೆಳಕಂಡ ಅಂಶಗಳನ್ನು ಅನುಮೋದನೆ ಕೋರಿದೆ.

1. ಮೆ॥ ಸತಾರಂ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರಿಗೆ ನೇರವಾಗಿ ಯಾವುದೇ ಟೆಂಡರ್ ಇಲ್ಲದೇ 1000 ಮೆಟ್ರಿಕ್ ಟನ್ ಸಾಮರ್ಥ್ಯವುಳ್ಳ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಅನುಮೋದನೆ.

2. ಮೆ॥ ಸತಾರಂ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಗ್ರಾಮದ ಸರ್ವೆ ನಂ.30, 31, 32 ಮತ್ತು 33 ರಲ್ಲಿ ಸ್ಥಾಪಿಸುವ ಜಾಗಕ್ಕೆ ಪಾಲಿಕೆಯಿಂದ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡಿ ಒದಗಿಸಲು ಅನುಮೋದನೆ.

..................3

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 18-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ ಸತಾರೆಂ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ರೂ.230.00 ಕೋಟಿಗಳ ಬಂಡವಾಳದೊಂದಿಗೆ ಸ್ಥಾಪಿಸಲು ಆಸಕ್ತಿ ಹೊಂದಿದ್ದು, ಸದರಿ ಪ್ರಸ್ತಾವನೆಯನ್ನು ಘನ ಸರ್ಕಾರವು ದಿನಾಂಕ:16-12-2011 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ "State high level committee" ಯಲ್ಲಿ ಅನುಮೋದನೆ ಸಂಖ್ಯೆ:G.O.No.C1263SPI, 2011 ರಂತೆ ಅನುಮೋದನೆ ನೀಡಿ, ಸದರಿ ಸಂಸ್ಥೆಗೆ ವಿದ್ಯುತ್ ಘಟಕ ಸ್ಥಾಪಿಸಲು ಅವಶ್ಯಕವಿರುವ 25 ಎಕರೆಗಳ ಜಾಗವನ್ನು ಹಾಗೂ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಒದಗಿಸಲು ಕ್ರಮವಹಿಸುವಂತೆ ಪಾಲಿಕೆಗೆ ತಿಳಿಸಲಾಗಿರುತ್ತದೆ. ಮುಂದುವರೆದಂತೆ, ದಿನಾಂಕ:07-06-2012 ರಲ್ಲಿ ಕರ್ನಾಟಕ ಸರ್ಕಾರ ಆಯೋಜಿಸಿದ್ದ Global investors meet (Gim) ನಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಒಡಂಬಡಿಕೆ ಕೂಡ ಮಾಡಿಕೊಂಡಿರುತ್ತಾರೆ.

ಆದುದರಿಂದ, ಮೆ॥ ಸತಾರೆಂ ಎಂಟರ್‌ಪ್ರೈಸೆಸ್ ಲಿಮಿಟೆಡ್ ಸಂಸ್ಥೆರವರಿಗೆ ನೇರವಾಗಿ ಯಾವುದೇ ಟೆಂಡರ್ ಇಲ್ಲದೇ 1000 ಮೆಟ್ರಿಕ್ ಟನ್ ಸಾಮರ್ಥ್ಯವುಳ್ಳ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಹಾಗೂ ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಗ್ರಾಮದ ಸರ್ವೆ ನಂ.30, 31, 32 ಮತ್ತು 33 ರಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕದ ಜಾಗಕ್ಕೆ ಪಾಲಿಕೆಯಿಂದ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡುವ ಸಂಬಂಧ ಅನುಮೋದನೆ ನೀಡುವುದೆಂದು ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (198) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮಾನ್ಯ ಆಯುಕ್ತರ ಆದೇಶದ ಸಂಖ್ಯೆ: ಆ/ಪಿಎಸ್ಆರ್/5338/2011-12, ದಿನಾಂಕ: 07-12-2011 ರಂತೆ ಒಟ್ಟು 07 ಪ್ಯಾಕೇಜ್‌ಗಳಂತೆ (ಆರ್-1 ರಿಂದ ಆರ್-7), ದಿನಾಂಕ:13-12-2011 ರಂದು ಮತ್ತು ಮೆಕ್ಯಾನಿಕಲ್ ಸ್ವೀಪಿಂಗ್ ಸೇವೆಗೆ 01 ಪ್ಯಾಕೇಜ್‌ನಂತೆ (ಎಂಎಸ್) ದಿನಾಂಕ:13-12-2011 ರಂತೆ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ಮಾನ್ಯ ಆಯುಕ್ತರ ಕಛೇರಿ ಆದೇಶದ ಸಂಖ್ಯೆ: ಪಿಎಸ್ಆರ್/ಪಿಆರ್/5338/12-13, ದಿನಾಂಕ:21-04-2012 ರ ಮೇರೆಗೆ ದಿನಾಂಕ:23-04-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿದೆ.

| ಕ್ರ ಸಂ. | ಪ್ಯಾಕೇಜ್ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ಉಪವಿಭಾಗ | ಭಾಗವಹಿಸಿದ ಬಿಡ್ಡ್‌ದಾರರು ಹೆಸರು | ಷರಾ |
|---|---|---|---|---|
| 1 | ಆರ್-1 | 129 (ಜ್ಞಾನಭಾರತಿ ಮತ್ತು 160 (ರಾಜರಾಜೇಶ್ವರಿನಗರ), ರಾಜರಾಜೇಶ್ವರಿನಗರ ಉಪವಿಭಾಗ | 1. ಶ್ರೀ.ಸಿ.ಎಸ್.ಸುರೇಶ್ (ಶ್ರೀ ಚಾಮುಂಡೇಶ್ವರಿ ಎಂಟರ್‌ಪ್ರೈಸಸ್) | |
| | | | 2. ಶ್ರೀಮತಿ.ಮುನಿಲಕ್ಷ್ಮಮ್ಮ | |
| | | | 3. ಶ್ರೀ.ಪಿ.ಪುರಂದರ ರೆಡ್ಡಿ | |
| 2 | ಆರ್-2 | 69 (ಲಗ್ಗೆರೆ) ಮತ್ತು 73 (ಕೊಟ್ಟಿಗೆಪಾಳ್ಯ), ಲಗ್ಗೆರೆ ಉಪವಿಭಾಗ | 1. ಶ್ರೀ.ಮಾಯಣ್ಣಗೌಡ ಎಂ.ಎನ್. | |
| | | | 2. ಶ್ರೀಮತಿ.ವೀಣಾ ಎಸ್. (ಆರ್.ಕೆ.ಟ್ರ್ಯಾನ್ಸ್‌ಪೋರ್ಟ್) | |
| 3 | ಆರ್-3 | 38 (ಹೆಚ್.ಎಂ.ಟಿ.) ಮತ್ತು 42 (ಲಕ್ಷ್ಮೀದೇವಿನಗರ), ಗೊರುಗುಂಟೆಪಾಳ್ಯ ಉಪವಿಭಾಗ | 1. ಶ್ರೀ.ಪಿ.ವಿದ್ಯಾನಾಥ್ ರೆಡ್ಡಿ | |
| | | | 2. ಶ್ರೀ.ತಮ್ಮಣ್ಣ ಎಲ್. | |
| 4 | ಆರ್-4 | 16 (ಜಾಲಹಳ್ಳಿ) ಮತ್ತು 17 (ಜೆ.ಪಿ. ಪಾರ್ಕ್), ಯಶವಂತಪುರ ಉಪವಿಭಾಗ | 1. ಶ್ರೀ.ಸಿ.ಆರ್.ವೀರ ನಾರಾಯಣಾಚಾರಿ | |
| | | | 2. ಶ್ರೀ.ರಮೇಶ್. ಹೆಚ್. | |
| 5 | ಆರ್-5 | 37 (ಯಶವಂತಪುರ), ಯಶವಂತಪುರ ಉಪವಿಭಾಗ | 1. ಶ್ರೀ.ಎಂ.ವೇಲು ನಾಯಕರ್ | |
| | | | 2. ಶ್ರೀ.ವೆಂಕಟರಾಮು | |
| 6 | ಆರ್-6 | 40 (ದೊಡ್ಡಬಿದಿರಕಲ್ಲು) ಮತ್ತು 72 (ಹೇರೋಹಳ್ಳಿ), ಹೇರೋಹಳ್ಳಿ ಉಪವಿಭಾಗ | 1. ಶ್ರೀ.ಸಿ.ಎಸ್. ಸುರೇಶ್ (ಶ್ರೀ ಚಾಮುಂಡೇಶ್ವರಿ ಎಂಟರ್‌ಪ್ರೈಸಸ್) | |
| | | | 2. ಶ್ರೀ.ಹೆಚ್.ಟಿ.ಜಗದೀಶ | |
| | | | 3. ಶ್ರೀ.ವಿನೋದ್ ಕುಮಾರ್ (ನಿರ್ಮಲ್ ಎನ್ವಿರೋ ಸಲೂಷನ್ಸ್ ಪ್ರೈ.ಲಿ.) | |
| 7 | ಆರ್-7 | 130 (ಉಲ್ಲಾಳು), 159 (ಕೆಂಗೇರಿ) ಮತ್ತು 198 (ಹೆಮ್ಮಿಗೆಪುರ), ಕೆಂಗೇರಿ ಉಪವಿಭಾಗ | 1. ಶ್ರೀ.ಕೆ.ಎನ್.ಸೌಂದಿರನ್ | |
| 8 | ಎಂ.ಎಸ್. | | 1. ಶ್ರೀ.ಸಿ.ಸೋಮಶೇಖರ ರೆಡ್ಡಿ | |
| | | | 2. ಶ್ರೀ.ಪನತಿ ಗೋಪಿನಾಥ ರೆಡ್ಡಿ (ಎಸ್.ಆರ್.ಪಿ.ಕ್ಲೀನ್ ಎನ್ವಿರೊ ಎಂಜಿನಿಯರ್ಸ್ ಪ್ರೈ.ಲಿ.) | |

.................2

ಮಾನ್ಯ ಆಯುಕ್ತರ ಕಛೇರಿ ಆದೇಶದ ಸಂಖ್ಯೆ:ಪಿಎಸ್ಆರ್/ಪಿಆರ್/5338/12-13, ದಿನಾಂಕ: 21-04-2012 ರಂತೆ ಟೆಂಡರ್ ಮೌಲ್ಯಮಾಪನ ಸಮಿತಿ ರಚಿಸಲಾಗಿದ್ದು, ಅಪರ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಸಮಿತಿಯ ಸದಸ್ಯರುಗಳನ್ನಾಗಿ ನೇಮಿಸಲಾಗಿದೆ.

1. ಮುಖ್ಯ ಅಭಿಯಂತರರು.
2. ಅಧೀಕ್ಷಕ ಅಭಿಯಂತರರು.
3. ಕಾರ್ಯಪಾಲಕ ಅಭಿಯಂತರರು (ಯೋಜನೆ).
4. ಸಹಾಯಕ ನಿಯಂತ್ರಕರು (ಹಣಕಾಸು).

ದಿನಾಂಕ:22-05-2012 ರಂದು ಮೌಲ್ಯಮಾಪನ ಸಭೆಯಲ್ಲಿ ಈ ಟೆಂಡರ್‌ಗಳ ತಾಂತ್ರಿಕ ಮೌಲ್ಯಮಾಪನ ಮಾಡಲಾಗಿದೆ. ಈ ಟೆಂಡರ್‌ಗಳ ತಾಂತ್ರಿಕ ಮೌಲ್ಯಮಾಪನ ನಂತರ ಒಟ್ಟು 07 ಪ್ಯಾಕೇಜ್‌ಗಳ ಪೈಕಿ ಪ್ಯಾಕೇಜ್ ಸಂಖ್ಯೆ: ಆರ್-2, ಆರ್-6 ಮತ್ತು ಆರ್-7 ಗಳಲ್ಲಿ ಭಾಗವಹಿಸಿರುವ ಬಿಡ್ಡುದಾರರು ತಾಂತ್ರಿಕ ಅರ್ಹತೆಯಿಲ್ಲದೆ, ಸದರಿ 03 ಪ್ಯಾಕೇಜ್‌ಗಳನ್ನು ರದ್ದುಪಡಿಸಲು ಟೆಂಡರ್ ಮೌಲ್ಯಮಾಪನ ಸಮಿತಿಯು ತೀರ್ಮಾನ ಕೈಗೊಂಡಿರುತ್ತದೆ.

ಮುಂದುವರೆದಂತೆ, ಅಪರ ಆಯುಕ್ತರು (ಯೋಜನೆ) ರವರ ಕಛೇರಿ ಆದೇಶದ ಸಂಖ್ಯೆ: ಅ.ಆ.(ಯೋ)/ಪಿಆರ್/495/12-13, ದಿನಾಂಕ:05-06-2012 ರಂತೆ ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್ಡುದಾರರುಗಳ ಪ್ಯಾಕೇಜ್‌ಗಳನ್ನು ಟೆಂಡರ್ ಮೌಲ್ಯಮಾಪನ ಸಮಿತಿ ತೀರ್ಮಾನದಂತೆ ಬಿಡ್‌ದಾರರ ಆರ್ಥಿಕ ಬಿಡ್ಡನ್ನು ದಿನಾಂಕ:07-06-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿದೆ.

| ಕ್ರ. ಸ. | ಪ್ಯಾಕೇಜ್ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ಉಪವಿಭಾಗ | ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ ಬಿಡ್ಡದಾರರ ಹೆಸರು | ಮೌಲ್ಯಮಾಪನದ ಮೊತ್ತ/ತಿಂಗಳಿಗೆ (ರೂ.) | ಬಿಡ್ಡುದಾರರು ನಮೂದಿಸಿರುವ ಮೊತ್ತ/ತಿಂಗಳಿಗೆ (ರೂ.) | ವ್ಯತ್ಯಾಸದ ಮೊತ್ತ/ ತಿಂಗಳಿಗೆ (ರೂ.) | ಶೇಕಡವಾರು |
|---|---|---|---|---|---|---|---|
| 1 | ಆರ್-1 | 129 (ಜ್ಞಾನಭಾರತಿ) ಮತ್ತು 160 (ರಾಜರಾಜೇಶ್ವರಿನಗರ), ರಾಜರಾಜೇಶ್ವರಿನಗರ ಉಪವಿಭಾಗ | ಶ್ರೀ.ಪಿ.ಪುರಂದರ ರೆಡ್ಡಿ (L1) | 38,39,189 | 78,66,380 | 40,27,191 | 104.90% (ಅಧಿಕ) |
| 2 | ಆರ್-3 | 38 (ಹೆಚ್.ಎಂ.ಟಿ.) ಮತ್ತು 42 (ಲಕ್ಷ್ಮೀದೇವಿನಗರ), ಗೊರುಗುಂಟೆಪಾಳ್ಯ ಉಪವಿಭಾಗ | ಶ್ರೀ.ಎಲ್.ತಮ್ಮಣ್ಣ (L1) | 32,29,596 | 33,99,100 | 1,69,504 | 5.25% (ಅಧಿಕ) |
| | | | ಶ್ರೀ.ಪಿ.ವಿದ್ಯಾನಾಥ್ ರೆಡ್ಡಿ (L2) | | 64,43,560 | | |
| 3 | ಆರ್-4 | 16 (ಜಾಲಹಳ್ಳಿ) ಮತ್ತು 17 (ಜೆ.ಪಿ.ಪಾರ್ಕ್), ಯಶವಂತಪುರ ಉಪವಿಭಾಗ | ಶ್ರೀ.ಹೆಚ್.ರಮೇಶ (L1) | 29,25,029 | 26,03,000 | 3,22,029 | (-) 11.01% (ಕಡಿಮೆ) |
| | | | ಶ್ರೀ.ಸಿ.ಆರ್.ವೀರ ನಾರಾಯಣಾಚಾರಿ (L2) | | 52,07,400 | | |
| 4 | ಆರ್-5 | 37 (ಯಶವಂತಪುರ) ಯಶವಂತಪುರ ಉಪವಿಭಾಗ | ಶ್ರೀ.ಎಂ.ವೇಲು ನಾಯಕರ್ (L1) | 11,54,802 | 13,28,000 | 1,73,198 | 15.00% (ಅಧಿಕ) |
| 5 | ಎಂ.ಎಸ್. | | ಶ್ರೀ.ಪನತಿ ಗೋಪಿನಾಥ ರೆಡ್ಡಿ (ಎಸ್.ಆರ್.ಪಿ. ಕ್ಲೀನ್ ಎನ್ವಿರೊ ಎಂಜಿನಿಯರ್ಸ್ ಪ್ರೈ.ಲಿ.) (L1) | 19,34,214 | 33,37,117 | 14,02,903 | 72.53% (ಅಧಿಕ) |

.................3

ಅಪರ ಆಯುಕ್ತರು (ಯೋಜನೆ) ರವರ ಕಛೇರಿ ಟಿಪ್ಪಣಿ ಸಂಖ್ಯೆ: ಮು.ಅ. (ಪ.ಕೋ)/ಪಿಆರ್/495/12-13, ದಿನಾಂಕ:13-06-2012 ರಂತೆ ದರ ಸಂಧಾನ ಪ್ರಕ್ರಿಯೆಗೆ ದಿನಾಂಕ:18-06-2012 ರಂದು L1 ಬಿಡ್ಡ್‌ದಾರರು ಹಾಜರಾಗಿದ್ದು, ಸದರಿ ಬಿಡ್ಡುದಾರರು ಸಂಧಾನದ ನಂತರ ನೀಡಿರುವ ದರಗಳ ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ಪ್ಯಾಕೇಜ್ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ಉಪವಿಭಾಗ | L1 ಬಿಡ್ಡದಾರರ ಹೆಸರು | ಬಿಡ್ಡುದಾರರು ನಮೂದಿಸಿರುವ ಮೊತ್ತ/ ತಿಂಗಳಿಗೆ (ರೂ.) | ದರ ಸಂಧಾನದ ನಂತರ ನಮೂದಿಸಿರುವ ಮೊತ್ತ/ ತಿಂಗಳಿಗೆ (ರೂ.) | ವ್ಯತ್ಯಾಸದ ಮೊತ್ತ/ ತಿಂಗಳಿಗೆ (ರೂ.) | ಶೇಕಡವಾರು ದರಗಳು |
|---|---|---|---|---|---|---|---|
| 1 | ಆರ್-1 | 129 (ಜ್ಞಾನಭಾರತಿ) ಮತ್ತು 160(ರಾಜರಾಜೇಶ್ವರಿ ನಗರ), ರಾಜರಾಜೇಶ್ವರಿನಗರ ಉಪವಿಭಾಗ | ಶ್ರೀ.ಪಿ.ಪುರಂದರ ರೆಡ್ಡಿ | 78,66,380 | - | - | ಸಂಧಾನದ ಸಮಯದಲ್ಲಿ ದರವನ್ನು ಕಡಿಮೆ ಮಾಡಲು ಒಪ್ಪಿರುವುದಿಲ್ಲ. ಟೆಂಡರ್ ಮೊತ್ತವು ಶೇ.104.9% ಅಧಿಕ |
| 2 | ಆರ್-3 | 38(ಹೆಚ್ ಎಂ ಟಿ) ಮತ್ತು 42 (ಲಕ್ಷ್ಮೀದೇವಿನಗರ), ಗೊರುಗುಂಟೆಪಾಳ್ಯ ಉಪವಿಭಾಗ | ಶ್ರೀ.ಎಲ್.ತಮ್ಮಣ್ಣ | 33,99,100 | - | - | ಸಂಧಾನದ ಸಮಯದಲ್ಲಿ ದರವನ್ನು ಕಡಿಮೆ ಮಾಡಲು ಒಪ್ಪಿರುವುದಿಲ್ಲ. ಆದರೆ ಟೆಂಡರ್ ಮೊತ್ತವು ಶೇ.5.25% ಮಾತ್ರ ಅಧಿಕ ವಾಗಿದೆ. |
| 3 | ಆರ್-4 | 16 (ಜಾಲಹಳ್ಳಿ) ಮತ್ತು 17 (ಜೆ.ಪಿ. ಪಾರ್ಕ್), ಯಶವಂತಪುರ ಉಪವಿಭಾಗ | ಶ್ರೀ.ಹೆಚ್. ರಮೇಶ | 26,03,000 | - | - | ಸಂಧಾನದ ಸಮಯದಲ್ಲಿ ದರವನ್ನು ಕಡಿಮೆ ಮಾಡಲು ಒಪ್ಪಿರುವುದಿಲ್ಲ ಮತ್ತು ಟೆಂಡರ್ ದರವು ಮೌಲ್ಯಮಾಪನ ದರಕ್ಕೆ ಶೇ. (-)11.01% ಕಡಿಮೆ ಇದೆ. |
| 4 | ಆರ್-5 | 37 (ಯಶವಂತರಪುರ), ಯಶವಂತಪುರ ಉಪವಿಭಾಗ | | 13,28,000 | 13,16,400 | 11,600 | ಸಂಧಾನದ ಸಮಯದಲ್ಲಿ ರೂ.11600 ಗಳನ್ನು ಕಡಿಮೆ ಮಾಡಲು ಒಪ್ಪಿರುತ್ತಾರೆ. ಅಂತಿಮ ದರವು ಮೌಲ್ಯಮಾಪನ ದರಕ್ಕಿಂತ ಶೇ.14% ಅಧಿಕ ಇದೆ. |
| 5 | ಎಂ.ಎಸ್. | | ಶ್ರೀ.ಪನತಿ ಗೋಪಿನಾಥ ರೆಡ್ಡಿ (ಎಸ್ ಆರ್ ಪಿ ಕ್ಲೀನ್ ಎನ್ವಿರೊ ಎಂಜಿನಿಯರ್ಸ್ ಪ್ರೈ.ಲಿ.) | 33,37,117 | - | - | ಸಂಧಾನದ ಸಮಯದಲ್ಲಿ ದರವನ್ನು ಕಡಿಮೆ ಮಾಡಲು ಒಪ್ಪಿರುವುದಿಲ್ಲ. ಟೆಂಡರ್ ಮೊತ್ತವು ಶೇ.72.53% ಅಧಿಕ |

ಪ್ಯಾಕೇಜ್ ಸಂಖ್ಯೆ: ಆರ್-3, ಆರ್-4 ಮತ್ತು ಆರ್-5 ಇವುಗಳು ಮೌಲ್ಯಮಾಪನ ವೆಚ್ಚಕ್ಕೆ ಹತ್ತಿರದ ದರಗಳಾಗಿದ್ದು ಇವುಗಳನ್ನು ಅಂಗೀಕರಿಸಬಹುದು. ಆದರೆ ಪ್ಯಾಕೇಜ್ ಸಂಖ್ಯೆ: ಆರ್-1 ಮತ್ತು ಎಂಎಸ್ ಪ್ಯಾಕೇಜ್ ಇವುಗಳ ಟೆಂಡರ್ ದರಗಳು ಮೌಲ್ಯಮಾಪನ ದರಕ್ಕಿಂತ ಬಹಳ ಹೆಚ್ಚಾಗಿದ್ದು, ಒಪ್ಪುವ ಅಥವಾ ತಿರಸ್ಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:07-07-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮಾನ್ಯ ಆಯುಕ್ತರ ಆದೇಶದ ಸಂಖ್ಯೆ:

ಆ/ಪಿಎಸ್‌ಆರ್/5338/2011-12, ದಿನಾಂಕ: 07-12-2011 ರಂತೆ ಒಟ್ಟು 07 ಪ್ಯಾಕೇಜ್‌ಗಳಂತೆ (ಆರ್-1 ರಿಂದ ಆರ್-7) ಟೆಂಡರ್ ಸಂಖ್ಯೆ:EE(P)RRN/SWM/TEND/E-PROC/01/2011-12, Dated: 13-12-2011 ರಲ್ಲಿ ಮತ್ತು ಮೆಕ್ಯಾನಿಕಲ್ ಸ್ವೀಪಿಂಗ್ ಸೇವೆಗೆ 01 ಪ್ಯಾಕೇಜ್‌ನಂತೆ (ಎಂಎಸ್) ಟೆಂಡರ್ ಸಂಖ್ಯೆ:EE(P)/RRN/SWM/TEND/E-PROC/02/2011-12, Dated:13-12-2011 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ಮಾನ್ಯ ಆಯುಕ್ತರ ಕಛೇರಿ ಆದೇಶದ ಸಂಖ್ಯೆ:ಪಿಎಸ್‌ಆರ್/ಪಿಆರ್/5338/12-13, ದಿನಾಂಕ:21-04-2012 ರ ಮೇರೆಗೆ ದಿನಾಂಕ: 23-04-2012 ರಂದು ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ದಿನಾಂಕ:22-05-2012 ರಂದು ಮೌಲ್ಯಮಾಪನ ಸಮಿತಿಯು ಪ್ಯಾಕೇಜ್ ಸಂಖ್ಯೆ: ಆರ್-2, ಆರ್-6 ಮತ್ತು ಆರ್-7 ಗಳಲ್ಲಿ ಭಾಗವಹಿಸಿರುವ ಬಿಡ್ಡುದಾರರು ತಾಂತ್ರಿಕ ಅರ್ಹತೆ ಇಲ್ಲದೇ ಇರುವುದರಿಂದ ರದ್ದುಪಡಿಸಲು ಪ್ಯಾಕೇಜ್ ಸಂಖ್ಯೆ: ಆರ್-1 ಮತ್ತು ಎಂಎಸ್ ಪ್ಯಾಕೇಜ್ ಇವುಗಳ ಟೆಂಡರ್ ದರಗಳು ಮೌಲ್ಯಮಾಪನ ದರಕ್ಕಿಂತ ಬಹಳ ಹೆಚ್ಚಾಗಿರುತ್ತವೆ. ಪ್ಯಾಕೇಜ್ ಸಂಖ್ಯೆ: ಆರ್-3, ಆರ್-4 ಮತ್ತು ಆರ್-5 ಇವುಗಳು ಮೌಲ್ಯಮಾಪನಾ ದರಕ್ಕೆ ಹತ್ತಿರದ ದರಗಳಾಗಿದ್ದು, ಇವುಗಳನ್ನು ಅಂಗೀಕರಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಈ ಮೇರೆಗೆ, ಆರ್-1, ಆರ್-2, ಆರ್-6, ಆರ್-7 ಮತ್ತು ಎಂಎಸ್ ಪ್ಯಾಕೇಜ್‌ಗಳ ಟೆಂಡರ್ ಅನ್ನು ಅತಿ ಜರೂರಾಗಿ ಕರೆಯಲು ಕ್ರಮವಹಿಸುವುದು ಹಾಗೂ ಪ್ಯಾಕೇಜ್ ಸಂಖ್ಯೆ: ಆರ್-3, ಆರ್-4 ಮತ್ತು ಆರ್-5 ಇವುಗಳು ಮೌಲ್ಯಮಾಪನಾ ದರಕ್ಕೆ ಹತ್ತಿರದ ದರಗಳಾಗಿರುವುದರಿಂದ ಅನುಮೋದನೆ ನೀಡಲು ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಟೆಂಡರ್‌ಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ನ್ಯಾಯಾಲಯದ ಅಂತಿಮ ತೀರ್ಮಾನದ ನಂತರ ಕಡತವನ್ನು ಸಭೆಗೆ ಮಂಡಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಟೆಂಡರ್‌ಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ನ್ಯಾಯಾಲಯದ ಅಂತಿಮ ತೀರ್ಮಾನದ ನಂತರ ಕಡತವನ್ನು ಸಭೆಗೆ ಮಂಡಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30–08–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 11 (227) / 2012–13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, Solid waste management services ಗೆ ಸಂಬಂಧಿಸಿದ ಟೆಂಡರಿನ ಪ್ಯಾಕೇಜ್ ಎಸ್–7 ಅನ್ನು ದಿನಾಂಕ:23–09–2011 ರಂದು 2ನೇ ಬಾರಿ ಟೆಂಡರ್ ಅನ್ನು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿತ್ತು. ಪ್ಯಾಕೇಜ್ ಸಂಖ್ಯೆ:ಎಸ್–7ಗೆ ಏಕಮಾತ್ರ ಬಿಡ್ ನಮೂದಿಸಲಾಗಿರುತ್ತದೆ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ದಿನಾಂಕ:30–11–2011 ರಂದು ತೆರಯಲಾಗಿ ಅನುಮೋದನೆ ಪಡೆದು ಆರ್ಥಿಕ ಬಿಡ್‌ಗಳನ್ನು ದಿನಾಂಕ:09–12–2011 ರಂದು ತೆರೆಯಲಾಗಿ, ಶ್ರೀ.ಎಂ.ಎನ್.ಶ್ರೀರಾಮುಲು ರವರು ಪ್ರತಿ ಮಾಹೆ ರೂ.27,68,513/– ಗಳನ್ನು ನಮೂದಿಸಿರುತ್ತಾರೆ. ದಿನಾಂಕ:12–12–2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.26,85,457/– ಗಳಿಗೆ ಒಪ್ಪಿರುತ್ತಾರೆ. ಈ ಕೆಳಕಂಡ ಅಂಶಗಳನ್ನು ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಅವಗಾಹನೆಗಾಗಿ ಸಲ್ಲಿಸಿದೆ.

1. ಟೆಂಡರ್ ಪ್ರಕಟಣೆಯಲ್ಲಿ ಕರಾರಿನ ಅವಧಿಯನ್ನು 2 ವರ್ಷಗಳೆಂದು ಪರಿಗಣಿಸಲಾಗಿದೆ. ಕೆ.ಎಂ.ಸಿ. ಕಾಯ್ದೆ 1976ರ ಕಲಂ–176 ರಂತೆ ಮಾನ್ಯ ಆಯುಕ್ತರು ಎರಡು ವರ್ಷಗಳ ಕಾಲಾವಧಿಗೆ ಮೀರದಂತೆ ವಹಿಸಿಕೊಟ್ಟಿದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಸ್ಥಾಯಿ ಸಮಿತಿಯ ಮುಂದೆ 15 ದಿನಗಳೊಳಗಾಗಿ ಅವಗಾಹನೆಗಾಗಿ ತರಬೇಕಾಗಿರುತ್ತದೆ.
2. ಎಸ್–7 ಟೆಂಡರ್ ಮೊತ್ತವು ಎರಡು ವರ್ಷಗಳಿಗೆ ರೂ.6,44,50,968/– ಗಳಾಗಿರುತ್ತದೆ. ಆದರೆ, ದಿನಾಂಕ:25–01–2010ರ ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳಂತೆ ಟೆಂಡರ್ ಮುಖಾಂತರ ವಹಿಸುವ ಕಾಮಗಾರಿಗಳ ಮೊತ್ತವು ರೂ.5.00 ಕೋಟಿಗಳಿಗೆ ಮೀರಿದರೆ ಸಂಬಂಧಪಟ್ಟ ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆದು, ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಹಾಗೂ ಪಾಲಿಕೆಯ ಶಿಫಾರಸ್ಸಿನೊಂದಿಗೆ, ಘನ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಆದರೆ, ಈ ಮಧ್ಯೆ ಶ್ರೀ. ಎಂ.ಎನ್.ಶ್ರೀರಾಮುಲು, ಗುತ್ತಿಗೆದಾರರು ದಿನಾಂಕ:29–04–2012 ರಂದು ಮಾನ್ಯ ಆಯುಕ್ತರವರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ, ಎಸ್–7 ಪ್ಯಾಕೇಜ್‌ಗೆ ನ್ಯಾಯಾಲಯದ ತಡಯಾಜ್ಞೆ ಇರುವುದಿಲ್ಲವೆಂದು ಪ್ರಮಾಣೀಕರಿಸಿ ಕಾರ್ಯಾದೇಶ ನೀಡಲು ಕೋರಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿನ ಆದೇಶದಂತೆ ಕಾರ್ಯಾದೇಶವನ್ನು ಹಿಂಪಡೆಯುವ / ರದ್ದುಗೊಳಿಸುವ ಷರತ್ತನ್ನು ಒಪ್ಪಿಕೊಂಡಿರುತ್ತಾರೆ. ಈ ಬಗ್ಗೆ ಪಾಲಿಕೆಯ ಉಪ ಕಾನೂನು ಅಧಿಕಾರಿರವರು ದಿನಾಂಕ:23–07–2011 ರ ಟೆಂಡರ್ ಪ್ರಕ್ರಿಯೆಗಳ ಬಗ್ಗೆ ಪ್ಯಾಕೇಜ್–ಎಸ್7 ಗೆ ಕಾರ್ಯಾದೇಶ ನೀಡುವ ಬಗ್ಗೆ ಮಾನ್ಯ ಆಯುಕ್ತರವರ ಆದೇಶ ಕೋರಬಹುದಾಗಿದೆಯೆಂದು ಅಭಿಪ್ರಾಯಿಸುತ್ತಾ, ನಿಯಮಾನುಸಾರ ಕ್ರಮ ತೆಗೆದುಕೊಳ್ಳಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ದಿನಾಂಕ:12–03–2012 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ:ಸಾಆಸ್ಥಾಸ/51/2011–12 ರಲ್ಲಿ ನಿರ್ಣಯಿಸಿದಂತೆ ಘನ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ W.P.No.90-121/2012 c/w W.P.No.2/2012 and W.P.No.29-58/2012 and W.P.No.59-89/2012 ರ ಪ್ರಕರಣಗಳಲ್ಲಿ (ಎಸ್–7 ಮತ್ತು ಎಸ್–9 ಪ್ಯಾಕೇಜ್‌ಗಳನ್ನು ಹೊರತುಪಡಿಸಿ ಉಳಿದ 89 ಪ್ಯಾಕೇಜ್‌ಗಳಿಗೆ ಸಂಬಂಧಿಸಿದಂತೆ) ನ್ಯಾಯಾಲಯದ ತೀರ್ಪಿನ ನಂತರ ಮರು ಮಂಡಿಸಲು ತೀರ್ಮಾನಿಸಲಾಗಿದೆ.

ದಿನಾಂಕ:25-05-2012ರ ಟಿಪ್ಪಣಿಯಂತೆ ಈ ಎಸ್-7 ಮತ್ತು ಎಸ್-9ರ ಪ್ರಕರಣಗಳಿಗೆ ನ್ಯಾಯಾಲಯದ ಯಾವುದೇ ತಡೆಯಾಜ್ಞೆ ಇರುವುದಿಲ್ಲ (ಟೆಂಡರ್ ನಂ.15). ಹಾಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಕಡತವನ್ನು ಕಾರ್ಯಾದೇಶ ನೀಡುವ ಬಗ್ಗೆ ಮಂಡಿಸಿ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಬಹುದೆಂದು ಮಾನ್ಯ ಕಾನೂನು ಕೋಶದ ಮುಖ್ಯಸ್ಥರು ಹಾಗೂ ಉಪ ಕಾನೂನು ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಗುತ್ತಿಗೆದಾರರಾದ ಶ್ರೀ. ಎಂ.ಎನ್.ಶ್ರೀರಾಮುಲು ರವರು ಪ್ರಮಾಣ ಪತ್ರವನ್ನು ಸಲ್ಲಿಸಿ ಸದರಿ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವುದನ್ನು ಪರಿಗಣಿಸಲು ಹಾಗೂ ಪ್ರಕರಣವು ಇನ್ನೂ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇರುವ ಕಾರಣ, ಕಾನೂನುರನ್ವಯ ಕ್ರಮ ಕೈಗೊಳ್ಳಲು ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ಟೆಂಡರ್ ಅನ್ನು ಅನುಮೋದಿಸುವ ಬಗ್ಗೆ ಹಾಗೂ ಘನ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸೂಕ್ತ ತೀರ್ಮಾನಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:22-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಘನ ತ್ಯಾಜ್ಯ ವಸ್ತು ವಿಲೇವಾರಿ ಮಾಡುವ ಸಂಬಂಧ ದಿನಾಂಕ:23-09-2011 ರಂದು 2ನೇ ಬಾರಿ ಟೆಂಡರ್ ಅನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದ್ದು, ಪ್ಯಾಕೇಜ್ ಸಂಖ್ಯೆ: ಎಸ್-7 ಗೆ ಶ್ರೀ.ಎಂ.ಎನ್.ಶ್ರೀರಾಮುಲು ಏಕಮಾತ್ರ ಬಿಡ್ ನಮೂದಿಸಿದ್ದು, ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ದಿನಾಂಕ:30-11-2011 ರಂದು ಮತ್ತು ಆರ್ಥಿಕ ಬಿಡ್ ಅನ್ನು ದಿನಾಂಕ:09-12-2011 ರಂದು ತೆರೆಯಲಾಗಿ ಶ್ರೀ. ಎಂ.ಎನ್.ಶ್ರೀರಾಮುಲು ರವರು ಪ್ರತಿ ಮಾಹೆ ರೂ.27,68,513/- ಗಳನ್ನು ನಮೂದಿಸಿರುತ್ತಾರೆ. ದಿನಾಂಕ:12-12-2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಲಾಗಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.26,85,457/- ಗಳಿಗೆ ಒಪ್ಪಿರುತ್ತಾರೆ.

ದಿನಾಂಕ:12-03-2012 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ನಡವಳಿ ವಿಷಯದ ಸಂಖ್ಯೆ: ಸಾಆಸ್ಥಾಸ/51/2011-12 ರಲ್ಲಿ ನಿರ್ಣಯಿಸಿದಂತೆ ಘನ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ W.P.No.90-121/2012 c/w W.P.No.2/2012 and W.P.No.29-58/2012 and W.P.No.59-89/2012 ರ ಪ್ರಕರಣಗಳಲ್ಲಿ ಮಧ್ಯಂತರ ಆದೇಶ / ತಡೆಯಾಜ್ಞೆ ನೀಡಲಾಗಿರುವುದರಿಂದ ಘನ ಉಚ್ಛ ನ್ಯಾಯಾಲಯದ ತೀರ್ಪಿನ ನಂತರ ಮರು ಮಂಡಿಸಲು ತೀರ್ಮಾನಿಸಲಾಗಿದೆ.

ಆದರೆ, ಈ ಮಧ್ಯೆ ಶ್ರೀ.ಎಂ.ಎನ್.ಶ್ರೀರಾಮುಲು, ಗುತ್ತಿಗೆದಾರರು ದಿನಾಂಕ:29-04-2012 ರಂದು ಮಾನ್ಯ ಆಯುಕ್ತರವರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ, ಎಸ್-7 ಪ್ಯಾಕೇಜ್‌ಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದಿಲ್ಲವೆಂದು ಪ್ರಮಾಣೀಕರಿಸಿ ಕಾರ್ಯಾದೇಶ ನೀಡಲು ಕೋರಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿನ ಆದೇಶದಂತೆ ಕಾರ್ಯಾದೇಶವನ್ನು ಹಿಂಪಡೆಯುವ / ರದ್ದುಗೊಳಿಸುವ ಷರತ್ತನ್ನು ಒಪ್ಪಿಕೊಂಡಿರುತ್ತಾರೆ.

ದಿನಾಂಕ:25-05-2012 ರಂದು ಉಪ ಕಾನೂನು ಅಧಿಕಾರಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು, ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಿಂದ ಯಾವುದೇ ತಡೆಯಾಜ್ಞೆ ಇರುವುದು ಕಂಡು ಬಂದಿರುವುದಿಲ್ಲ. ಒಟ್ಟಾರೆ 91 ಪ್ಯಾಕೇಜ್‌ಗಳ ಪೈಕಿ ಉಳಿದಂತೆ 89 ಪ್ಯಾಕೇಜ್‌ಗಳಿಗೆ ಮಾತ್ರ ಹೊಸದಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸದರಿ 89 ಪ್ಯಾಕೇಜ್‌ಗಳಿಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದು ಕಂಡು ಬರುತ್ತದೆ ಹಾಗೂ ನ್ಯಾಯಲಯಗಳ ಇತ್ತೀಚಿನ ಆದೇಶಗಳಂತೆ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ಸೂಚಿಸಿ ಯಾವುದೇ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಮುನ್ನ ಮಾನ್ಯ ನ್ಯಾಯಾಲಯಕ್ಕೆ ಮಾಹಿತಿಗಳನ್ನು ಸಲ್ಲಿಸುವಂತೆ ಆದೇಶಿಸಿರುವುದು ಕಂಡು ಬರುತ್ತದೆ. ಸದರಿ ಟೆಂಡರ್‌ನ ಗುತ್ತಿಗೆದಾರರು ಪ್ರಮಾಣಪತ್ರ ಸಲ್ಲಿಸಿ ಟೆಂಡರ್ ನಂ.15, ಪ್ಯಾಕೇಜ್ ನಂ.ಎಸ್-7 ಗಳಿಗೆ ಕಾರ್ಯಾದೇಶ ನೀಡಲು ಹಾಗೂ ಮಾನ್ಯ ಉಚ್ಛ ನ್ಯಾಯಾಲಯದ ಆದೇಶಗಳಿಗೆ ಬದ್ಧರಾಗಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಮಾನ್ಯ ಆಯುಕ್ತರು ರವರ ಆದೇಶ ಕೋರಿ ಮುಂದಿನ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಬಹುದಾಗಿದೆಂದು ಅಭಿಪ್ರಾಯ ನೀಡಿರುತ್ತಾರೆ.

ಆದುದರಿಂದ, ಟೆಂಡರ್ ನಂ.15, ಪ್ಯಾಕೇಜ್ ನಂ.ಎಸ್-7 ಗೆ ಸಂಬಂಧಿಸಿದಂತೆ, ದಿನಾಂಕ: 25-05-2012 ರಂದು ಉಪ ಕಾನೂನು ಅಧಿಕಾರಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಿಂದ ಯಾವುದೇ ತಡೆಯಾಜ್ಞೆ ಇರುವುದು ಕಂಡು ಬಂದಿರುವುದಿಲ್ಲ. ನ್ಯಾಯಾಲಯದ ಇತ್ತೀಚಿನ ಆದೇಶದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ಸೂಚಿಸಿ ಯಾವುದೇ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಮುನ್ನ ಮಾನ್ಯ ನ್ಯಾಯಾಲಯಕ್ಕೆ ಮಾಹಿತಿಗಳನ್ನು ಸಲ್ಲಿಸುವಂತೆ ಆದೇಶಿಸಿರುವುದು ಕಂಡು ಬರುತ್ತದೆಂದು ಅಭಿಪ್ರಾಯ ನೀಡಿರುವ ಮೇರೆಗೆ ಶ್ರೀ. ಎಂ.ಎನ್.ಶ್ರೀರಾಮುಲು, ಗುತ್ತಿಗೆದಾರರು ಪ್ಯಾಕೇಜ್ ನಂ.ಎಸ್-7 ಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸಿ, ಕಾರ್ಯಾದೇಶ ನೀಡಲು ಹಾಗೂ ಮಾನ್ಯ ಉಚ್ಛ ನ್ಯಾಯಾಲಯದ ಆದೇಶಗಳಿಗೆ ಬದ್ಧರಾಗಿರುವುದಾಗಿ ತಿಳಿಸಿರುವ ಹಿನ್ನಲೆಯಲ್ಲಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯವನ್ನು ಒಪ್ಪುತ್ತಾ, ಘನ ಉಚ್ಚ ನ್ಯಾಯಾಲಯದಲ್ಲಿ ಅನುಮತಿ ಪಡೆದು ಕಾರ್ಯದೇಶ ನೀಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯವನ್ನು ಒಪ್ಪುತ್ತಾ, ಘನ ಉಚ್ಚ ನ್ಯಾಯಾಲಯದಲ್ಲಿ ಅನುಮತಿ ಪಡೆದು ಕಾರ್ಯದೇಶ ನೀಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 12 (228) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, Solid waste management services ಗೆ ಸಂಬಂಧಿಸಿದ ಟೆಂಡರಿನ ಪ್ಯಾಕೇಜ್-ಎಸ್9 ಅನ್ನು ದಿನಾಂಕ:23-09-2011 ರಂದು 2ನೇ ಬಾರಿ ಟೆಂಡರ್ ಅನ್ನು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿತ್ತು. ಪ್ಯಾಕೇಜ್ ಸಂಖ್ಯೆ:ಎಸ್-9ಗೆ ಏಕಮಾತ್ರ ಬಿಡ್ ನಮೂದಿಸಲಾಗಿರುತ್ತದೆ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ದಿನಾಂಕ:30-11-2011 ರಂದು ತೆರೆಯಲಾಗಿ ಅನುಮೋದನೆ ಪಡೆದು ಆರ್ಥಿಕ ಬಿಡ್‌ಗಳನ್ನು ದಿನಾಂಕ:09-12-2011 ರಂದು ತೆರೆಯಲಾಗಿ, ಶ್ರೀ. ಎಂ.ಶಿವಕುಮಾರ್ ರವರು ಪ್ರತಿ ಮಾಹೆ ರೂ.24,16,788/- ಗಳನ್ನು ನಮೂದಿಸಿರುತ್ತಾರೆ. ದಿನಾಂಕ: 12-12-2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.23,44,285/- ಗಳಿಗೆ ಒಪ್ಪಿರುತ್ತಾರೆ. ಈ ಕೆಳಕಂಡ ಅಂಶಗಳನ್ನು ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಅವಗಾಹನೆಗಾಗಿ ಸಲ್ಲಿಸಿದೆ.

1. ಟೆಂಡರ್ ಪ್ರಕಟಣೆಯಲ್ಲಿ ಕರಾರಿನ ಅವಧಿಯನ್ನು 2 ವರ್ಷಗಳೆಂದು ಪರಿಗಣಿಸಲಾಗಿದೆ. ಕೆ.ಎಂ.ಸಿ. ಕಾಯ್ದೆ 1976ರ ಕಲಂ-176 ರಂತೆ ಮಾನ್ಯ ಆಯುಕ್ತರು ಎರಡು ವರ್ಷಗಳ ಕಾಲಾವಧಿಗೆ ಮೀರದಂತೆ ವಹಿಸಿಕೊಟ್ಟಿದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಸ್ಥಾಯಿ ಸಮಿತಿಯ ಮುಂದೆ 15 ದಿನಗಳೊಳಗಾಗಿ ಅವಗಾಹನೆಗಾಗಿ ತರಬೇಕಾಗಿರುತ್ತದೆ.

2. ಎಸ್-9 ಟೆಂಡರ್ ಮೊತ್ತವು ಎರಡು ವರ್ಷಗಳಿಗೆ ರೂ.5,62,62,840/- ಗಳಾಗಿರುತ್ತದೆ. ಆದರೆ, ದಿನಾಂಕ:25-01-2010ರ ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳಂತೆ ಟೆಂಡರ್ ಮುಖಾಂತರ ವಹಿಸುವ ಕಾಮಗಾರಿಗಳ ಮೊತ್ತವು ರೂ.5.00 ಕೋಟಿಗಳಿಗೆ ಮೀರಿದರೆ ಸಂಬಂಧಪಟ್ಟ ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆದು, ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಹಾಗೂ ಪಾಲಿಕೆಯ ಶಿಫಾರಸ್ಸಿನೊಂದಿಗೆ, ಘನ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಆದರೆ, ಈ ಮಧ್ಯೆ ಶ್ರೀ. ಎಂ.ಶಿವಕುಮಾರ್, ಗುತ್ತಿಗೆದಾರರು ದಿನಾಂಕ:29-04-2012 ರಂದು ಮಾನ್ಯ ಆಯುಕ್ತರವರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ, ಎಸ್-9 ಪ್ಯಾಕೇಜ್‌ಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದಿಲ್ಲವೆಂದು ಪ್ರಮಾಣೀಕರಿಸಿ ಕಾರ್ಯಾದೇಶ ನೀಡಲು ಕೋರಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿನ ಆದೇಶದಂತೆ ಕಾರ್ಯಾದೇಶವನ್ನು ಹಿಂಪಡೆಯುವ / ರದ್ದುಗೊಳಿಸುವ ಷರತ್ತನ್ನು ಒಪ್ಪಿಕೊಂಡಿರುತ್ತಾರೆ. ಈ ಬಗ್ಗೆ ಪಾಲಿಕೆಯ ಉಪ ಕಾನೂನು ಅಧಿಕಾರಿರವರು ದಿನಾಂಕ:23-07-2011 ರ ಟೆಂಡರ್ ಪ್ರಕ್ರಿಯೆಗಳ ಬಗ್ಗೆ ಪ್ಯಾಕೇಜ್-ಎಸ್9 ಗೆ ಕಾರ್ಯಾದೇಶ ನೀಡುವ ಬಗ್ಗೆ ಮಾನ್ಯ ಆಯುಕ್ತರವರ ಆದೇಶ ಕೋರಬಹುದಾಗಿದೆಯೆಂದು ಅಭಿಪ್ರಾಯಿಸುತ್ತಾ, ನಿಯಮಾನುಸಾರ ಕ್ರಮ ತೆಗೆದುಕೊಳ್ಳಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ದಿನಾಂಕ:12-03-2012 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ:ಸಾಆಸ್ಥಾಸ/50/2011-12 ರಲ್ಲಿ ನಿರ್ಣಯಿಸಿದಂತೆ ಘನ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ W.P.No.90-121/2012 c/w W.P.No.2/2012 and W.P.No.29-58/2012 and W.P.No.59-89/2012 ರ ಪ್ರಕರಣಗಳಲ್ಲಿ (ಎಸ್-7 ಮತ್ತು ಎಸ್-9 ಪ್ಯಾಕೇಜ್‌ಗಳನ್ನು ಹೊರತುಪಡಿಸಿ ಉಳಿದ 89 ಪ್ಯಾಕೇಜ್‌ಗಳಿಗೆ ಸಂಬಂಧಿಸಿದಂತೆ) ನ್ಯಾಯಾಲಯದ ತೀರ್ಪಿನ ನಂತರ ಮರು ಮಂಡಿಸಲು ತೀರ್ಮಾನಿಸಲಾಗಿದೆ.

ದಿನಾಂಕ:25-05-2012ರ ಟಿಪ್ಪಣಿಯಂತೆ ಈ ಎಸ್-7 ಮತ್ತು ಎಸ್-9ರ ಪ್ರಕರಣಗಳಿಗೆ ನ್ಯಾಯಾಲಯದ ಯಾವುದೇ ತಡೆಯಾಜ್ಞೆ ಇರುವುದಿಲ್ಲ (ಟೆಂಡರ್ ನಂ.15). ಹಾಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಕಡತವನ್ನು ಕಾರ್ಯಾದೇಶ ನೀಡುವ ಬಗ್ಗೆ ಮಂಡಿಸಿ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಬಹುದೆಂದು ಮಾನ್ಯ ಕಾನೂನು ಕೋಶದ ಮುಖ್ಯಸ್ಥರು ಹಾಗೂ ಉಪ ಕಾನೂನು ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಗುತ್ತಿಗೆದಾರರಾದ ಶ್ರೀ. ಎಂ.ಶಿವಕುಮಾರ್ ರವರು ಪ್ರಮಾಣ ಪತ್ರವನ್ನು ಸಲ್ಲಿಸಿ ಸದರಿ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವುದನ್ನು ಪರಿಗಣಿಸಲು ಹಾಗೂ ಪ್ರಕರಣವು ಇನ್ನೂ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇರುವ ಕಾರಣ, ಕಾನೂನುರನ್ವಯ ಕ್ರಮ ಕೈಗೊಳ್ಳಲು ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ಟೆಂಡರ್ ಅನ್ನು ಅನುಮೋದಿಸುವ ಬಗ್ಗೆ ಹಾಗೂ ಘನ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸೂಕ್ತ ತೀರ್ಮಾನಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:22-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಘನ ತ್ಯಾಜ್ಯ ವಸ್ತು ವಿಲೇವಾರಿ ಮಾಡುವ ಸಂಬಂಧ ದಿನಾಂಕ:23-09-2011 ರಂದು 2ನೇ ಬಾರಿ ಟೆಂಡರ್ ಅನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದ್ದು, ಪ್ಯಾಕೇಜ್ ಸಂಖ್ಯೆ: ಎಸ್-9 ಗೆ ಶ್ರೀ. ಎಂ.ಶಿವಕುಮಾರ್ ಏಕಮಾತ್ರ ಬಿಡ್ ನಮೂದಿಸಿದ್ದು, ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ದಿನಾಂಕ:30-11-2011 ರಂದು ಮತ್ತು ಆರ್ಥಿಕ ಬಿಡ್ ಅನ್ನು ದಿನಾಂಕ:09-12-2011 ರಂದು ತೆರೆಯಲಾಗಿ ಶ್ರೀ.ಎಂ.ಶಿವಕುಮಾರ್ ರವರು ಪ್ರತಿ ಮಾಹೆ ರೂ.24,16,788/- ಗಳನ್ನು ನಮೂದಿಸಿರುತ್ತಾರೆ. ದಿನಾಂಕ:12-12-2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಲಾಗಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.23,44,285/- ಗಳಿಗೆ ಒಪ್ಪಿರುತ್ತಾರೆ.

ದಿನಾಂಕ:12-03-2012 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ನಡವಳಿ ವಿಷಯದ ಸಂಖ್ಯೆ: ಸಾಆಸ್ಥಾಸ/51/2011-12 ರಲ್ಲಿ ನಿರ್ಣಯಿಸಿದಂತೆ ಘನ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ W.P.No.90-121/2012 c/w W.P.No.2/2012 and W.P.No.29-58/2012 and W.P.No.59-89/2012 ರ ಪ್ರಕರಣಗಳಲ್ಲಿ ಮಧ್ಯಂತರ ಆದೇಶ / ತಡೆಯಾಜ್ಞೆ ನೀಡಲಾಗಿರುವುದರಿಂದ ಘನ ಉಚ್ಚ ನ್ಯಾಯಾಲಯದ ತೀರ್ಪಿನ ನಂತರ ಮರು ಮಂಡಿಸಲು ತೀರ್ಮಾನಿಸಲಾಗಿದೆ.

ಆದರೆ, ಈ ಮಧ್ಯೆ ಶ್ರೀ. ಎಂ.ಶಿವಕುಮಾರ್, ಗುತ್ತಿಗೆದಾರರು ದಿನಾಂಕ:29-04-2012 ರಂದು ಮಾನ್ಯ ಆಯುಕ್ತರವರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ, ಎಸ್-9 ಪ್ಯಾಕೇಜ್‌ಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದಿಲ್ಲವೆಂದು ಪ್ರಮಾಣೀಕರಿಸಿ ಕಾರ್ಯಾದೇಶ ನೀಡಲು ಕೋರಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿನ ಆದೇಶದಂತೆ ಕಾರ್ಯಾದೇಶವನ್ನು ಹಿಂಪಡೆಯುವ / ರದ್ದುಗೊಳಿಸುವ ಷರತ್ತನ್ನು ಒಪ್ಪಿಕೊಂಡಿರುತ್ತಾರೆ.

ದಿನಾಂಕ:25-05-2012 ರಂದು ಉಪ ಕಾನೂನು ಅಧಿಕಾರಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು, ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಿಂದ ಯಾವುದೇ ತಡೆಯಾಜ್ಞೆ ಇರುವುದು ಕಂಡು ಬಂದಿರುವುದಿಲ್ಲ. ಒಟ್ಟಾರೆ 91 ಪ್ಯಾಕೇಜ್‌ಗಳ ಪೈಕಿ ಉಳಿದಂತೆ 89 ಪ್ಯಾಕೇಜ್‌ಗಳಿಗೆ ಮಾತ್ರ ಹೊಸದಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸದರಿ 89 ಪ್ಯಾಕೇಜ್‌ಗಳಿಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದು ಕಂಡು ಬರುತ್ತದೆ ಹಾಗೂ ನ್ಯಾಯಲಯಗಳ ಇತ್ತೀಚಿನ ಆದೇಶಗಳಂತೆ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ಸೂಚಿಸಿ ಯಾವುದೇ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಮುನ್ನ ಮಾನ್ಯ ನ್ಯಾಯಾಲಯಕ್ಕೆ ಮಾಹಿತಿಗಳನ್ನು ಸಲ್ಲಿಸುವಂತೆ ಆದೇಶಿಸಿರುವುದು ಕಂಡು ಬರುತ್ತದೆ. ಸದರಿ ಟೆಂಡರ್‌ನ ಗುತ್ತಿಗೆದಾರರು ಪ್ರಮಾಣಪತ್ರ ಸಲ್ಲಿಸಿ ಟೆಂಡರ್ ನಂ.15, ಪ್ಯಾಕೇಜ್ ನಂ.ಎಸ್-9 ಗಳಿಗೆ ಕಾರ್ಯಾದೇಶ ನೀಡಲು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳಿಗೆ ಬದ್ಧರಾಗಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಮಾನ್ಯ ಆಯುಕ್ತರು ರವರ ಆದೇಶ ಕೋರಿ ಮುಂದಿನ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಬಹುದಾಗಿದೆಂದು ಅಭಿಪ್ರಾಯ ನೀಡಿರುತ್ತಾರೆ.

ಆದುದರಿಂದ, ಟೆಂಡರ್ ನಂ.15, ಪ್ಯಾಕೇಜ್ ನಂ.ಎಸ್–9 ಗೆ ಸಂಬಂಧಿಸಿದಂತೆ, ದಿನಾಂಕ:25–05–2012 ರಂದು ಉಪ ಕಾನೂನು ಅಧಿಕಾರಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಿಂದ ಯಾವುದೇ ತಡೆಯಾಜ್ಞೆ ಇರುವುದು ಕಂಡು ಬಂದಿರುವುದಿಲ್ಲ. ನ್ಯಾಯಾಲಯದ ಇತ್ತೀಚಿನ ಆದೇಶದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ಸೂಚಿಸಿ ಯಾವುದೇ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಮುನ್ನ ಮಾನ್ಯ ನ್ಯಾಯಾಲಯಕ್ಕೆ ಮಾಹಿತಿಗಳನ್ನು ಸಲ್ಲಿಸುವಂತೆ ಆದೇಶಿಸಿರುವುದು ಕಂಡು ಬರುತ್ತದೆಂದು ಅಭಿಪ್ರಾಯ ನೀಡಿರುವ ಮೇರೆಗೆ ಶ್ರೀ.ಎಂ.ಶಿವಕುಮಾರ್, ಗುತ್ತಿಗೆದಾರರು ಪ್ಯಾಕೇಜ್ ನಂ.ಎಸ್–9 ಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸಿ, ಕಾರ್ಯಾದೇಶ ನೀಡಲು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳಿಗೆ ಬದ್ಧರಾಗಿರುವುದಾಗಿ ತಿಳಿಸಿರುವ ಹಿನ್ನಲೆಯಲ್ಲಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 16–07–2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16–07–2012ರ ನಿರ್ಣಯವನ್ನು ಒಪ್ಪುತ್ತಾ, ಘನ ಉಚ್ಚ ನ್ಯಾಯಾಲಯದಲ್ಲಿ ಅನುಮತಿ ಪಡೆದು ಕಾರ್ಯದೇಶ ನೀಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16–07–2012ರ ನಿರ್ಣಯವನ್ನು ಒಪ್ಪುತ್ತಾ, ಘನ ಉಚ್ಚ ನ್ಯಾಯಾಲಯದಲ್ಲಿ ಅನುಮತಿ ಪಡೆದು ಕಾರ್ಯದೇಶ ನೀಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 13 (161) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:93, ವಸಂತನಗರ ಮಿಲ್ಲರ್ ಕೆರೆ ಅಂಗಳದಲ್ಲಿ 100X50 ಅಡಿಗಳ ನಿವೇಶನದಲ್ಲಿರುವ 80X40 ಅಡಿಗಳ ಗೋಡೌನ್ ಕಟ್ಟಡವನ್ನು ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಮಾಸಿಕ ಬಾಡಿಗೆ ರೂ.925/- ರಂತೆ ದಿ:09-06-1980 ರಿಂದ 11 ತಿಂಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ತದನಂತರ ದಿನಾಂಕ:01-05-1981 ರಿಂದ 31-07-1999 ರವರೆಗೆ 219 ತಿಂಗಳ ಅವಧಿಗೆ, ಅಂದಿನ ಮಾರುಕಟ್ಟೆ ದರದಂತೆ ಮಾಸಿಕ ಗುತ್ತಿಗೆ ಮೊತ್ತ ರೂ.99,454.50/- ಗಳು ನಿಗಧಿಪಡಿಸಿ ದಿನಾಂಕ:14-07-2003 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ನಿಗಧಿಪಡಿಸಿರುವ ಗುತ್ತಿಗೆ ಮೊತ್ತವನ್ನು ಪಾವತಿಸದೇ ಸಂಸ್ಥೆಯು ನಷ್ಟದಲ್ಲಿರುವುದಾಗಿ ತಿಳಿಸಿ, ನಿಗಧಿಪಡಿಸಿರುವ ಮೊತ್ತವನ್ನು ಪಾವತಿಸಲು ಶಕ್ತನಾಗಿಲ್ಲವೆಂದು ಗುತ್ತಿಗೆ ಮೊತ್ತವನ್ನು ಈ ತಹಲ್‌ವರೆವಿಗೂ ಪಾವತಿಸಿರುವುದಿಲ್ಲ.

ಈ ಮಧ್ಯೆ ಅಧ್ಯಕ್ಷರು, ಡಾ॥ ಜಗಜೀವನ್ ರಾಮ್ ಧರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ರವರು ದಿನಾಂಕ:24-01-1012 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ 99 ವರ್ಷಗಳ ದೀರ್ಘಾವಧಿ ಗುತ್ತಿಗೆ ಅಥವಾ ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ನೀಡುವಂತೆ ಕೋರಿದ್ದು, ದಿನಾಂಕ:25-01-2012 ರಂದು ಆಸ್ತಿ ಶಾಖೆಯಿಂದ ಆಂತರಿಕ ಕಛೇರಿ ಟಿಪ್ಪಣಿ ನೀಡಲಾಗಿದ್ದು, ಸಹ ಕಂದಾಯ ಅಧಿಕಾರಿ (ವಸಂತನಗರ) ರವರು ವರದಿ ಮಾಡಿರುವಂತೆ 100X50 ಅಡಿಗಳ ನಿವೇಶನದಲ್ಲಿ 80X40 ಅಡಿ ಅಳತೆ ಗೋಡೌನ್ ಕಟ್ಟಡ ಹಾಗೂ ಈ ನಿವೇಶನಕ್ಕೆ ಹೊಂದಿಕೊಂಡಂತೆ ಹೆಚ್ಚುವರಿಯಾಗಿ 2 ಭದ್ರತಾ ಕೊಠಡಿ ಶೆಡ್‌ಗಳು ಇದ್ದು, ವಿಸ್ತೀರ್ಣ 25X30 ಚದರ ಅಡಿಗಳಾಗಿದ್ದು, ಒಟ್ಟಾರೆ 5750 ಚದರ ಅಡಿ ಆಗಿರುತ್ತದೆಂದು, ಸದರಿ ಜಾಗವನ್ನು ಗುತ್ತಿಗೆ ಅಥವಾ ಕ್ರಯಕ್ಕೆ ಮಾರುಕಟ್ಟೆ ಬೆಲೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನ ಕೋರಿ ಆಸ್ತಿ ಶಾಖೆಗೆ ಕಡತ ಮಂಡಿಸಿರುತ್ತಾರೆ.

ಪ್ರಸಕ್ತ ಸಾಲಿನ ಮಾರುಕಟ್ಟೆ ದರವು ಚದರ ಅಡಿ 1ಕ್ಕೆ ರೂ.4,500/- ಗಳಿದ್ದು, ವಾಣಿಜ್ಯಕ್ಕೆ ಶೇ.40% ರಷ್ಟು ಸೇರಿಸಿದಾಗ ಚದರ ಅಡಿ 1ಕ್ಕೆ ರೂ.6,300/-ಗಳಾಗಲಿದ್ದು, 5750 ಚದರ ಅಡಿಗಳಿಗೆ (5750X6,300=3,62,25,000/-) ಲೆಕ್ಕ ಹಾಕಲಾಗಿ ರೂ.3,62,25,000/- ಗಳಾಗುತ್ತದೆ. ಸ್ವತ್ತಿನ ಮೌಲ್ಯದ ಶೇ.10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ.36,22,500/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.3,01,875/- ಗಳಾಗುತ್ತದೆ.

ಇದು ರಾಜ್ಯ ಸರ್ಕಾರದ ಸಂಸ್ಥೆಯಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರ ಏಳಿಗೆಗಾಗಿ ನಡೆಸಲಾಗುತ್ತಿರುವ ಸಂಸ್ಥೆಯಾಗಿದ್ದು, ಇದಕ್ಕೆ ಮಾಸಿಕ ಗುತ್ತಿಗೆ ರೂ.99,454.50/- ಪೈಸೆ ನಿಗಧಿಪಡಿಸಿರುವುದು ಅವೈಜ್ಞಾನಿಕವಾಗಿರುತ್ತದೆ. ಇಂತಹ ಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ಗುತ್ತಿಗೆ ನಿಗಧಿಪಡಿಸುವ ಅವಕಾಶ ಇರುವ ಹಿನ್ನಲೆಯಲ್ಲಿ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ಪತ್ರ ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಮತ್ತು ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಮುಂದಿನ 30 ವರ್ಷಗಳ ಅವಧಿಗೆ ಪ್ರತ್ಯೇಕ ಪ್ರತ್ಯೇಕವಾಗಿ ದರ ನಿಗಧಿಪಡಿಸಿ ಗುತ್ತಿಗೆ ನವೀಕರಿಸಲು ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆ ಮುಖಾಂತರ ಸರ್ಕಾರಕ್ಕೆ ಪ್ರಸ್ತಾಪನೆ ಸಲ್ಲಿಸುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28-02-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-03-2012ರ ನಿರ್ಣಯ ಹಾಗೂ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕರ್ನಾಟಕ ಚರ್ಮ

ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರು ಹಿಂದಿನಿಂದ ಗುತ್ತಿಗೆ ಮೊತ್ತವನ್ನು ಪಾವತಿಸದೇ ಉಳಿಸಿಕೊಂಡಿರುವ ಮೊತ್ತವನ್ನು ಸದರಿ ಸಂಸ್ಥೆಯಿಂದ ಪಾವತಿಸಿಕೊಳ್ಳುವ ಅಥವಾ ಸರ್ಕಾರದ ಇತರೇ ಇಲಾಖೆಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಪಾವತಿಸುವಂತಹ ಮೊತ್ತಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೊಳಪಟ್ಟು ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟು ಒಪ್ಪಿಗೆ ದೊರೆತ ನಂತರ ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಮಾಸಿಕ ರೂ.3,01,875/– ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ, ಗುತ್ತಿಗೆಗೆ ನೀಡುವ ಮಾರ್ಪಾಡಿನೊಂದಿಗೆ ದಿನಾಂಕ:06–03–2012ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20–06–2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20–06–2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20–06–2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 14 (164) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಆರ್ಥಿಕವಾಗಿ ಹಿಂದುಳಿದವರು ಈಜೀಪುರ ಕೋರಮಂಗಲದಲ್ಲಿ 1512 ಸಂಖ್ಯೆ ತಾತ್ಕಾಲಿಕ ಶೆಡ್ ಅನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಖಾಲಿ ಜಾಗದಲ್ಲಿ ಹಾಕಿದ್ದು, ಮೆ॥ ಮೇವರಿಕ್ ಹೋಲ್ಡಿಂಗ್ಸ್ ರವರಿಗೆ ಜಂಟಿ ಸಹಭಾಗಿತ್ವದಲ್ಲಿ 1512 ಸಂಖ್ಯೆಯ ಮನೆಯ ವಾಸಸ್ಥರಿಗೆ ಬಹು ಅಂತಸ್ತಿನ ಕಟ್ಟಡವನ್ನು ಅವರ ಖರ್ಚಿನಲ್ಲೇ ಕಟ್ಟಲು ಕರ್ನಾಟಕ ಉಚ್ಚ ನ್ಯಾಯಾಲಯ, ಕರ್ನಾಟಕ ಸರ್ಕಾರ ಮತ್ತು ಕೌನ್ಸಿಲ್ ಸಭೆಯಲ್ಲಿ ನಿರ್ಣಯವಾಗಿರುತ್ತದೆ.

ಈ ಹಿಂದೆ ಪಾಲಿಕೆಯ ವತಿಯಿಂದ ಆನೇಕಲ್ ತಾಲ್ಲೂಕು ಇಗ್ಗಲೂರು ಗ್ರಾಮದ 40.28 ಎಕರೆ ಗುಂಟೆ ಜಾಗದಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡಲು ಉದ್ದೇಶಿಸಿದ್ದ ಪ್ರಸ್ತಾವನೆಯನ್ನು ಕನಕಪುರ ತಾಲ್ಲೂಕು ಹಾರೋಹಳ್ಳಿ ಸಮೀಪಕ್ಕೆ ಸ್ಥಳಾಂತರಿಸಲಾಗಿದೆ.

ಈಗ ಇರುವ 1512 ಸಂಖ್ಯೆ ತಾತ್ಕಾಲಿಕ ಶೆಡ್‌ಗಳನ್ನು ಮೆ॥ ಮೇವರಿಕ್ ಹೋಲ್ಡಿಂಗ್ಸ್ ರವರು ಬಹುಮಹಡಿ ಕಟ್ಟಡ ಕಟ್ಟಲು ಅನುವು ಮಾಡಿಕೊಡುವ ಸಲುವಾಗಿ, ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿರುವ ಜಾಗವನ್ನು ತೆರವುಗೊಳಿಸಿ ಖಾಲಿ ಸೈಟ್ ಅನ್ನು ಮೆ॥ ಮೇವರಿಕ್ ಹೋಲ್ಡಿಂಗ್ಸ್ ರವರಿಗೆ ಹಸ್ತಾಂತರಿಸುವ ಜವಾಬ್ದಾರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರ ಮೇಲಿದೆ. ಆದ್ದರಿಂದ ಸದರಿ 1512 ಸಂಖ್ಯೆ ತಾತ್ಕಾಲಿಕ ಶೆಡ್‌ದಾರರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ, ಇಗ್ಗಲೂರು ಗ್ರಾಮದ 40.28 ಎಕರೆ ಗುಂಟೆ ಜಾಗದಲ್ಲಿ ಕೂಡಲೇ ಸ್ಥಳಾಂತರಿಸಲು ಅನುವಾಗುವಂತೆ ಇಗ್ಗಲೂರು ಗ್ರಾಮದಲ್ಲಿ ತಾತ್ಕಾಲಿಕ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ ಸದರಿ ಸ್ಥಳದಲ್ಲಿ 5 ಎಕರೆ ಪ್ರದೇಶದಲ್ಲಿನ ಒಂದು ಭಾಗವನ್ನು ಗುರುತಿಸಿ ಬಳಸಿಕೊಳ್ಳುವ ಪ್ರಸ್ತಾವನೆಗೆ ಪಾಲಿಕೆಯ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23-06-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:23-06-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:23-06-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 16 (97) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ನೆ.ಲ.ನರೇಂದ್ರಬಾಬು, ವಿಧಾನಸಭಾ ಸದಸ್ಯರು ಮತ್ತು ಶ್ರೀಮತಿ.ಪದ್ಮಾವತಿ ಶ್ರೀನಿವಾಸ್, ನಗರ ಪಾಲಿಕೆ ಸದಸ್ಯರು ರವರುಗಳು ಮನವಿ ಸಲ್ಲಿಸಿ ವಾರ್ಡ್ ನಂ.74 ರಲ್ಲಿ ಇರುವ "ಶಂಕರ್‌ನಾಗ್ ಬಸ್ ನಿಲ್ದಾಣ" ವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸುಸಜ್ಜಿತವಾಗಿ ನಿರ್ಮಿಸಲು ಪ್ರಸ್ತುತ ಜಾಗವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) ಹಸ್ತಾಂತರಿಸುವಂತೆ ಕೋರಿರುತ್ತಾರೆ.

ಸದರಿ ಜಾಗವು ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಸಾಣೆಗುರುವನಹಳ್ಳಿ ಗ್ರಾಮದ ಸರ್ವೆ ನಂ.30ರಲ್ಲಿನ ಸರ್ಕಾರಿ ಗೋಮಾಳ 09 ಎಕರೆ 28 ಗುಂಟೆ ಪ್ರದೇಶದ ಜಮೀನಾಗಿದ್ದು, ದಿನಾಂಕ:23-06-2010ರ ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ಪತ್ರದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರವಾಗಿರುತ್ತದೆ. ಇದರಲ್ಲಿ ಹಾಲಿ ಬಸ್ ನಿಲ್ದಾಣಕ್ಕಾಗಿ ಉಪಯೋಗಿಸುತ್ತಿರುವ (19.51 ಗುಂಟೆ) ಆದರೆ 1974.33 ಚದರ ಮೀಟರ್ (21251.51) ಚದರ ಅಡಿಗಳು ಜಾಗವನ್ನು ಬಸ್ ನಿಲ್ದಾಣದ ಅಭಿವೃದ್ಧಿಗಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (BMTC) ಹಸ್ತಾಂತರಿಸುವ ಬಗ್ಗೆ ಅಪರ ಆಯುಕ್ತರು (ಪಶ್ಚಿಮ) ರವರು ಪ್ರಸ್ತುತ ಜಾಗವನ್ನು ಅಳತೆ ಮಾಡಿ ನಕ್ಷೆ ತಯಾರಿಸಿದ್ದು, ಸದರಿ ಜಾಗವನ್ನು ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) ಹಸ್ತಾಂತರಿಸಬಹುದೆಂದು ತಮ್ಮ ವರದಿ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 21251.51 ಚದರ ಅಡಿಗಳಾಗಿದ್ದು, ಈ ಪ್ರದೇಶದ ಮಾರುಕಟ್ಟೆ ದರವು ದಿನಾಂಕ:21-09-2011ರ ಸರ್ಕಾರದ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ.1800/- ಗಳಾಗಿದ್ದು, ವಾಣಿಜ್ಯ ಉದ್ದೇಶಕ್ಕಾಗಿ ಶೇ 40% ರಷ್ಟು ಹೆಚ್ಚಿಸಿದಾಗ ರೂ.2520/- ಗಳಾಗುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 2520x21251.51 = ರೂ.5,35,53,805.2/- ಗಳಾಗುತ್ತದೆ.

**ಸರ್ಕಾರದ ಆದೇಶ ಸಂ:ನಅಇ 129 ಟಿಎಂಡಿ 2002, ಬೆಂಗಳೂರು,**

**ದಿನಾಂಕ:02-06-2003 (ಇ) ರಲ್ಲಿ**

iii) ಈ ಕೆಳಕಂಡ ಸಂಸ್ಥೆಗಳಿಗೆ ಜಮೀನು ಮಂಜೂರಾತಿಯ ಮಾರುಕಟ್ಟೆ ದರದಲ್ಲಿ ಶೇ 50% ರಿಯಾಯಿತಿ ಇರುತ್ತದೆ.

ಇ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಮಂಡಳಿಗಳಿಗೆ/ಪಾಲಿಕೆಗಳಿಗೆ ಕಛೇರಿಗಳ/ಮಾರುಕಟ್ಟೆಗಳ/ಬಸ್ ನಿಲ್ದಾಣಗಳ/ವಿದ್ಯುತ್ ಮಂಡಳಿಗಳ, ಮತ್ತಿತರ ಸಾರ್ವಜನಿಕ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಎಂಬುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಶಂಕರ್‌ನಾಗ್ ಬಸ್ ನಿಲ್ದಾಣದ ಜಾಗವನ್ನು ಸುಸಜ್ಜಿತವಾದ ಬಸ್ ನಿಲ್ದಾಣವನ್ನಾಗಿ ಮಾಡಲು ಬಿಎಂಟಿಸಿ ರವರಿಗೆ ಹಸ್ತಾಂತರಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:27-02-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ

ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-03-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಮಾನ್ಯ ವಿಶೇಷ ಆಯುಕ್ತರ ದಿನಾಂಕ:27-02-2012ರ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯ ನಿರ್ಣಯದಂತೆ ಮರುಪರಿಶೀಲಿಸಿ, ಸದರಿ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 17 (99) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ:110 (ಹಳೇ ವಾರ್ಡ್-77) ರ ವ್ಯಾಪ್ತಿಯ ಕಸ್ತೂರಬಾ ರಸ್ತೆ, ಹಾಗೂ ಕಬ್ಬನ್ ಪಾರ್ಕ್ ಬಳಿ ಇರುವ ದ್ವಿಚಕ್ರ ವಾಹನ ನಿಲ್ದಾಣದ ಬಳಿ ಇರುವ ನಗರಪಾಲಿಕೆಯ 5x5 ಅಡಿಗಳ ನಿವೇಶನವನ್ನು ಅಂಗವಿಕಲರಾದ ಶ್ರೀ ಆರ್.ನಾಗರಾಜ್ ರವರಿಗೆ ಸಾರ್ವಜನಿಕ ದೂರವಾಣಿ ಬೂತ್ ಒಂದನ್ನು ಗುತ್ತಿಗೆ ಆಧಾರದ ಮೇಲೆ ನಡೆಸುವ ಸಲುವಾಗಿ ಈ ಹಿಂದೆ 4 ಬಾರಿ ಪ್ರತಿ ಬಾರಿ 3 ವರ್ಷಗಳಂತೆ ನೀಡಲಾಗಿರುತ್ತದೆ. ಪ್ರಥಮವಾಗಿ ದಿನಾಂಕ:19-06-1997 ರಿಂದ (ಮಾಸಿಕ ಹಣ ರೂ.250/- ಗಳಂತೆ), ನಂತರ ನವೀಕರಿಸುತ್ತಾ ದಿನಾಂಕ:18-10-2000 ದಿಂದ (ಮಾಸಿಕ ಹಣ ರೂ.400/- ಗಳಂತೆ), ನಂತರ ಪುನರ್ ನವೀಕರಣದ ಮೂಲಕ ದಿನಾಂಕ:12-10-2003 ರಿಂದ ಮಾಸಿಕ ಗುತ್ತಿಗೆ ಹಣ ರೂ.800/- ಗಳಂತೆ ಪ್ರಸ್ತಾಪಿಸಲಾಗಿದ್ದು, ಅದನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರಪಾಲಿಕೆ ಸಭೆಯು ಸದರಿಯವರು ಅಂಗವಿಕಲರಾದ ಪ್ರಯುಕ್ತ ಪರಿಗಣಿಸಿ ಗುತ್ತಿಗೆ ದರವನ್ನು ರೂ.400/- ಗಳಾಗಿ ನಿಗಧಿಪಡಿಸಿದ್ದು, ತದನಂತರ, ದಿನಾಂಕ:17-11-2000 ರಿಂದ (ಮಾಸಿಕ ರೂ.400/-)ರಂತೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ:16-11-2009 ರಲ್ಲಿ ಮುಕ್ತಾಯಗೊಂಡಿದ್ದು, ಸದರಿಯವರು ದಿನಾಂಕ:07-11-2009 ಮತ್ತು 20-03-2010 ರಂತೆ ಮನವಿಗಳನ್ನು ಸಲ್ಲಿಸಿ ಪುನರ್ ನವೀಕರಣವನ್ನು ಕೋರಿರುತ್ತಾರೆ.

ಸದರಿ ಗುತ್ತಿಗೆ ಜಾಗವು ಕಸ್ತೂರ್‌ಬಾ ರಸ್ತೆ ಪ್ರದೇಶದ ಅಗಲೀಕರಣದ ಕಾಮಗಾರಿ ಪ್ರಯುಕ್ತ ಹಾಗೂ ಮಾನ್ಯ ಆಯುಕ್ತರುರವರ ಸುತ್ತೋಲೆ ಮೇರೆಗೆ ಗುತ್ತಿಗೆ ದರದ ವ್ಯವಹಾರಗಳನ್ನು ಹರಾಜಿನ ಮೂಲಕವೇ ವಿಲೇವಾರಿ ಮಾಡಲು ಆದೇಶಿಸಿರುವ ಪ್ರಯುಕ್ತ ಸದರಿ ಗುತ್ತಿಗೆದಾರರವರ ಮನವಿಗಳನ್ನು ಪರಿಗಣಿಸಲು ಸಾಧ್ಯವಿಲ್ಲದೆ, ಸದರಿಯವರಿಗೆ ಅದರಂತೆ ಸೂಕ್ತ ಹಿಂಬರಹವನ್ನು ದಿನಾಂಕ:01-02-2010 ಮತ್ತು 19-08-2010 ರಲ್ಲಿ ಅನುಕ್ರಮವಾಗಿ ತಿಳಿಯಪಡಿಸಲಾಗಿರುತ್ತದೆ.

ಸದರಿ ಗುತ್ತಿಗೆದಾರರು ಈಗಾಗಲೇ ಅರ್ಜಿಯೊಂದನ್ನು ದಿನಾಂಕ:25-02-2011 ರಂದು ಮಾನ್ಯ ಅಧ್ಯಕ್ಷರು, ಅಪೀಲುಗಳ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಲ್ಲಿಸಿದ್ದು, ಸಮಿತಿಯು ಸದರಿ ಗುತ್ತಿಗೆದಾರರೊಡನೆ ದಿನಾಂಕ:26-02-2011 ರಂದು ವಿಚಾರಣೆ ನಡೆಸಿ ಹಾಗೂ ಅವರ ಹೇಳಿಕೆಯನ್ನು ಸಹ ಪಡೆದು ಇದರೊಂದಿಗೆ ಸದರಿ ಸಮಿತಿಯು ಸದರಿ ಗುತ್ತಿಗೆದಾರರ ಅಂಗವಿಕಲತೆ ಮತ್ತು ಪೊಲೀಸ್ ಹಾಗೂ ವಾರ್ಡಿನ ನಗರಸಭಾ ಸದಸ್ಯರ ನಿರಾಪೇಕ್ಷಣಾ ಮತ್ತು ಯಾರಿಂದಲೂ ಆಕ್ಷೇಪಣೆ ಇಲ್ಲದಿರುವ ಕಾರಣ, ಸದರಿ ಬೂತ್ ನಡೆಸಲು ಗುತ್ತಿಗೆ ಅವಧಿ ಮುಂದುವರೆಸಲು ಮತ್ತೊಂದು ವರ್ಷದ ಅವಧಿಗೆ ತೀರ್ಮಾನ ನೀಡಿರುತ್ತದೆ. ಆದರೆ, ಗುತ್ತಿಗೆ ದರದ ಬಗ್ಗೆ ಯಾವ ಸೂಚನೆಯು ಇರುವುದಿಲ್ಲ.

ಮಾನ್ಯ ಉಪ ಆಯುಕ್ತರು (ಆಸ್ತಿಗಳು) ರವರು ಸದರಿ ವಿಷಯದ ಬಗ್ಗೆ ಪರಿಶೀಲಿಸುತ್ತಾ, ಮೂಲ ಕಡತದೊಂದಿಗೆ ಮಾರುಕಟ್ಟೆ ದರದೊಂದಿಗೆ ಟಿಪ್ಪಣಿ ಪ್ರಸ್ತಾವನೆ ಸಲ್ಲಿಸಲು ಆದೇಶ ನೀಡಿರುತ್ತಾರೆ. ಅರ್ಜಿದಾರರು ಕೋರಿರುವ ನಕ್ಷೆಯಂತೆ ಸದರಿ ಸ್ಥಳವು ಕಬ್ಬನ್ ಪಾರ್ಕ್‌ಗೆ ಹೋಗುವ ದ್ವಿಚಕ್ರ ವಾಹನದ ನಿಲುಗಡೆಯ ಪಕ್ಕದಲ್ಲಿ ನವೀಕರಣಕ್ಕಾಗಿ ಕೋರಿದ್ದು, ಈ ಸ್ವತ್ತಿನ ಮಾರುಕಟ್ಟೆ ಮೌಲ್ಯ ಚದರಡಿ 1ಕ್ಕೆ ರೂ.6,000/- ಗಳಿದ್ದು, ಸ್ವತ್ತಿನ ಮೌಲ್ಯ ರೂ.1,50,000/- ಗಳಾಗುತ್ತದೆ. ವಾಣಿಜ್ಯಕ್ಕೆ ಶೇ:40%ರಷ್ಟು ಸೇರಿಸಿದಾಗ ರೂ.60,000/- ಗಳಾಗಲಿದ್ದು, ಸ್ವತ್ತಿನ ಒಟ್ಟು ಮೌಲ್ಯ ರೂ.2,10,000/- ಗಳಾಗುತ್ತದೆ. ಶೇ:10%ರಂತೆ ಪರಿಗಣಿಸಿದಲ್ಲಿ ವಾರ್ಷಿಕ ರೂ.21,000/- ಗಳಾಗಲಿದ್ದು ಹಾಗೂ ಮಾಸಿಕ ರೂ.1,750/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಗುತ್ತಿಗೆಯ ಕುರಿತಂತೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 23-02-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.800/- (ಎಂಟು ನೂರು) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಮಾನ್ಯ ಆಯುಕ್ತರ ದಿನಾಂಕ:23-02-2012ರ ಟಿಪ್ಪಣಿಯನ್ನು ಕೌನ್ಸಿಲ್ ಸಭೆಯ ನಿರ್ಣಯದಂತೆ ಮರುಪರಿಶೀಲಿಸಿ, ಶ್ರೀ ಆರ್.ನಾಗರಾಜ್ (ಅಂಗವಿಕಲರು) ರವರಿಗೆ ಮೂರು ವರ್ಷಗಳವರೆಗೆ ಗುತ್ತಿಗೆ ಅವಧಿಯನ್ನು ನವೀಕರಿಸುವಂತೆ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ : 18 (100) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ:155, ಹನುಮಂತನಗರದ ಲಕ್ಷ್ಮಿಪುರ ಪಾಲಿಕೆ ನೌಕರರ ವಸತಿಗೃಹಗಳ ನಿವೇಶನ ಸಂಖ್ಯೆ:33ರ ಪಕ್ಕದ ನಿವೇಶನವನ್ನು ಮಂಜೂರು ಮಾಡಲು ಪಾಲಿಕೆಯ ನಾಲ್ಕನೇ ದರ್ಜೆ ನೌಕರರಾದ ಶ್ರೀಮತಿ.ಕೆ.ಎಸ್.ಪದ್ಮಾವತಿರವರು ಕೋರಿದ್ದು, ಸ್ಥಾಯಿ ಸಮಿತಿ ಮುಂದೆ ತರಲು ಅಭಿಪ್ರಾಯಿಸಲಾಗಿರುತ್ತದೆ.

ಈ ಬಗ್ಗೆ ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ ಸ್ಥಳದಲ್ಲಿ 15x15 ಅಡಿಗಳ ಖಾಲಿ ನಿವೇಶನವಿರುತ್ತದೆ ಮತ್ತು ಈ ಸ್ಥಳವನ್ನು ಹಿಂದೆ ಪಾಲಿಕೆ ನೌಕರರು ಮಂಜೂರು ಮಾಡಲು ಕೋರಿದ್ದು, ತಿರಸ್ಕರಿಸಿ ಹಿಂಬರಹ ನೀಡಲಾಗಿರುತ್ತದೆಂದು ವರದಿ ನೀಡಿದ್ದು, ಆದೇಶಕ್ಕಾಗಿ ಪ್ರಸ್ತಾಪಿಸಿರುತ್ತಾರೆ. ಸ್ಥಳೀಯ ಪಾಲಿಕೆ ಸದಸ್ಯರ ಕೋರಿಕೆ ಮೇರೆಗೆ ಈ ಪ್ರಸ್ತಾವನೆ ಸ್ಥಾಯಿ ಸಮಿತಿ ಮುಂದೆ ತರಲು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21-09-2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿಗೆ ಚದರ ಅಡಿ ಒಂದಕ್ಕೆ ರೂ.2,000-/-ಗಳಿದ್ದು, ಅರ್ಜಿದಾರರು ಕೋರಿರುವ ಜಾಗವು 225 ಚ.ಅಡಿಗಳಾಗುತ್ತದೆ. ಇದರಂತೆ 2000x225=ರೂ.4,50,000/- ಗಳಾಗುತ್ತದೆ. ಸರ್ಕಾರಿ ಆದೇಶದಂತೆ ಶೇ:20%ರಷ್ಟು ಹೆಚ್ಚಿಸಲಾದರೆ ರೂ 5,40,000/- ಗಳಾಗುತ್ತದೆ.

ಈ ಪ್ರದೇಶದಲ್ಲಿ ಹಿಂದೆ ಸರ್ಕಾರದ ದಿನಾಂಕ:17-02-2004ರ ಆದೇಶದ ಸಂಖ್ಯೆ:ನಅಇ/20/ ಎಂಎನ್‌ಜಿ/99 ರ ಮಾರ್ಗಸೂಚಿಯಂತೆ 600 ಚದರಡಿ ಮೀರಿದ ನಿವೇಶನಗಳಿಗೆ ಚದರಡಿ 1ಕ್ಕೆ ರೂ.25/- ನಿಗಧಿಪಡಿಸಿ ಕ್ರಯಪತ್ರ ನೀಡಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ-176ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02-06-2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ/222/ಎಂ.ಎನ್.ವೈ/2008, ದಿನಾಂಕ:03-09-2009ರ ಅನುಸಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನಲ್ಲಿ ಬರುವ ಸಾರ್ವಜನಿಕ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲಿ ಅಥವಾ ಮಾರಾಟ ಮಾಡುವ ಬದಲಾಗಿ ಸರ್ಕಾರವೇ ಸೂಕ್ತವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸಲಹೆ ನೀಡಲು ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ.ಕೆ.ಎಸ್.ಪದ್ಮಾವತಿ ರವರಿಗೆ ಈ ನಿವೇಶನವನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾವನೆ ಕಳುಹಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03-01-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ

..........2

ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಮಾನ್ಯ ಆಯುಕ್ತರ ದಿನಾಂಕ:03-01-2012ರ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯ ನಿರ್ಣಯದಂತೆ ಮರುಪರಿಶೀಲಿಸಿ, ಬಹಿರಂಗ ಹರಾಜು ಮೂಲಕ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸರ್ಕಾರದ ಅನುಮೋದನೆಯೊಂದಿಗೆ ಪ್ರಸ್ತಾಪಿತ ಸ್ಥಳವನ್ನು ಮಾರುಕಟ್ಟೆ ದರಗಳಿಗೆ ಅರ್ಜಿದಾರರಿಗೆ ಮಂಜೂರು ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸರ್ಕಾರದ ಅನುಮೋದನೆಯೊಂದಿಗೆ ಪ್ರಸ್ತಾಪಿತ ಸ್ಥಳವನ್ನು ಮಾರುಕಟ್ಟೆ ದರಗಳಿಗೆ ಅರ್ಜಿದಾರರಿಗೆ ಮಂಜೂರು ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (101) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್-90, ಸ್ವತ್ತಿನ ಸಂಖ್ಯೆ: 'ಸಿ' ನಂ.2, ಸ್ಟ್ರೀಟ್, ಅಲಸೂರು ಸಿವಿಲ್ ಸ್ಟೇಷನ್, ಬೆಂಗಳೂರು ಇಲ್ಲಿನ 515 ಚದರ ಅಡಿಗಳ ಜಾಗವನ್ನು ಲೇ॥ ಎಸ್.ದೊರೈಸ್ವಾಮಿ ಹೆಡ್ ಗ್ಯಾಂಗ್‌ಮೆನ್ ಕಾಮಗಾರಿ ಇಲಾಖೆ ರವರಿಗೆ ವಾಸದ ಉಪಯೋಗಕ್ಕಾಗಿ ಖಾಲಿ ನಿವೇಶನವನ್ನು 40 ವರ್ಷಗಳ ಅವಧಿಗೆ (ದಿನಾಂಕ:21-08-1959 ರಿಂದ 20-08-1999) ಮಾಸಿಕ ನೆಲಬಾಡಿಗೆ ರೂ.1/- ರಂತೆ ವಿಧಿಸಿ ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿ ಮುಗಿದ ಕಾರಣ ಸಹ ಕಂದಾಯ ಅಧಿಕಾರಿ (ಶಿವಾಜಿನಗರ) ರವರ ಕಛೇರಿಯಿಂದ ದಿನಾಂಕ:02-12-2009, 18-01-2010, 24-05-2010 ನೋಟೀಸ್ ಜಾರಿ ಮಾಡಿ ಪುನ: ದಿನಾಂಕ:29-07-2010 ರಂತೆ ಕೆ.ಪಿ.ಪಿ. ಕಾಯ್ದೆಯನ್ವಯ 4(1) ಹಾಗೂ 5(1) ನೋಟೀಸ್ ಜಾರಿ ಮಾಡಲಾಗಿದೆಯೆಂದು ವರದಿ ಮಾಡಿರುತ್ತಾರೆ.

ತದನಂತರ ಗುತ್ತಿಗೆದಾರ ಶ್ರೀ.ಎಸ್.ದೊರೈಸ್ವಾಮಿ ರವರ ಮೊಮ್ಮಗಳು ಶ್ರೀಮತಿ. ವಿಜಯಲಕ್ಷ್ಮೀ ಹಾಲಿ ಸ್ಥಳದಲ್ಲಿ ವಾಸಿಸುತ್ತಿರುವ ಇವರು ಮನವಿ ಸಲ್ಲಿಸಿ, ಶ್ರೀ.ಎಸ್.ದೊರೈಸ್ವಾಮಿಯವರು ದಿನಾಂಕ:09-10-1984 ರಲ್ಲಿ ಮರಣ ಹೊಂದಿರುವುದಾಗಿ ಮರಣ ಸಮರ್ಥನಾ ಪತ್ರ, ಗುತ್ತಿಗೆ ಕರಾರು ಪತ್ರದ ಪ್ರತಿ, ತೆರಿಗೆ ಪಾವತಿ ರಸೀದಿಯ ಪ್ರತಿಗಳನ್ನು ಲಗತ್ತಿಸಿ ನಾನು ದೊರೈಸ್ವಾಮಿಯವರ ಮೊಮ್ಮಗಳೆಂದು ಗುತ್ತಿಗೆಗೆ ನೀಡಿರುವ ಮನೆಯಲ್ಲಿ ವಾಸಿಸುತ್ತಿರುವುದಾಗಿ ತಿಳಿಸಿ, ತಮಗೆ ಬೇರೆ ಮನೆಯಿಲ್ಲವೆಂದು ಸದರಿ ಜಾಗವನ್ನು ಗುತ್ತಿಗೆ ನವೀಕರಿಸುವಂತೆ ಅಥವಾ ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ.

ಗುತ್ತಿಗೆ ನವೀಕರಿಸುವಂತೆ ಕೋರಿರುವ ಸ್ವತ್ತಿನ ಅಳತೆ 515 ಚದರ ಅಡಿಗಳಾಗಿದ್ದು ನೋಂದಾಣಿ ಮತ್ತು ಮುದ್ರಾಂಕ ಇಲಾಖೆ ಅಧಿಸೂಚನೆ 19-04-2007ರ ಮಾರ್ಗಸೂಚಿ ದರದಂತೆ ಪ್ರಸ್ತುತ ಆಸ್ತಿಯ ಮಾರುಕಟ್ಟೆ ಮೌಲ್ಯ ಚದರ ಅಡಿ 1ಕ್ಕೆ ರೂ.1500/-ಗಳಿದ್ದು, ಸ್ವತ್ತಿನ ಮಾರುಕಟ್ಟೆ ಮೌಲ್ಯ (1500x515=7,72,500) ರೂ.7,72,500/- ಗಳಾಗುತ್ತದೆ. ಸ್ವತ್ತಿನ ಮಾರುಕಟ್ಟೆ ಮೌಲ್ಯದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ರೂ.77,250/- ಗಳಾಗಲಿದ್ದು, ಮಾಸಿಕ ರೂ.6438/- ಗಳಾಗುತ್ತದೆ.

ಆದುದರಿಂದ, ಮೂಲ ಗುತ್ತಿಗೆದಾರರಾದ ಶ್ರೀ.ಎಸ್.ದೊರೈಸ್ವಾಮಿ ರವರ ಮೊಮ್ಮಗಳ ಹೆಸರಿಗೆ ಗುತ್ತಿಗೆ ವರ್ಗಾವಣೆ ಮಾಡಿ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ಪತ್ರ ನೊಂದಾಯಿಸುವ ದಿನಾಂಕದವರೆವಿಗೂ ಹಳೆಯ ದರದಂತೆ, ಹೊಸದಾಗಿ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಮಾರುಕಟ್ಟೆ ಬೆಲೆಯ ಶೇ 10% ರಂತೆ ಮಾಸಿಕ ರೂ.6438/-ಗಳಂತೆ ಗುತ್ತಿಗೆ ವಿಧಿಸಿ ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ನಿರ್ಣಯದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅನುಮೋದನೆ ಪಡೆಯಬೇಕಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಟಿಪ್ಪಣಿ ಮಂಡಿಸಲಾಗಿ, ವಿಷಯದ ಸಂಖ್ಯೆ:35(57)2011-12 ದಿನಾಂಕ:28-06-2011 ರಂದು ಪಾಲಿಕೆ ಸಭೆಯಲ್ಲಿ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಮರುಮಂಡಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಹಿಂದಿರುಗಿಸಲಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ನಯೋಅಸ್ಥಾಸ/101/2010-11, ದಿನಾಂಕ:02-08-2011 ರಂದು ದಿನಾಂಕ:10-03-2011ರ ಆಯುಕ್ತರ ಟಿಪ್ಪಣಿಯನ್ನು ತಿರಸ್ಕರಿಸುತ್ತಾ ಸ್ವತ್ತನ್ನು ಪಾಲಿಕೆ ವಶಕ್ಕೆ ತೆಗೆದುಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಈ ವಿಷಯದ ಬಗ್ಗೆ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ಬಿಬಿಎಂಪಿ ರವರು ದಿನಾಂಕ:19-09-2011 ರಂದು ಪತ್ರ ಬರೆದು ಸಮಿತಿಯ ಮುಂದೆ ಸೂಕ್ತ ತೀರ್ಮಾನ ಕೈಗೊಳ್ಳಲು ಮರು ಮಂಡಿಸಲು ಕೋರಿರುವುದರಿಂದ ಎಸ್.ದೊರೈಸ್ವಾಮಿ, ಹೆಡ್ ಗ್ಯಾಂಗ್‌ಮೆನ್ ರವರ ಮೊಮ್ಮಗಳ ಹೆಸರಿಗೆ ಗುತ್ತಿಗೆ ವರ್ಗಾಯಿಸಿ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-01-2012ರ ಟಿಪ್ಪಣಿ ಹಾಗೂ ಮಾನ್ಯ ಆಯುಕ್ತರ ದಿನಾಂಕ: 21-01-2012ರ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ, ಎಸ್.ದೊರೈಸ್ವಾಮಿ, ಹೆಡ್ ಗ್ಯಾಂಗ್‌ಮೆನ್ ರವರ ಮೊಮ್ಮಗಳು ಶ್ರೀಮತಿ. ವಿಜಯಲಕ್ಷ್ಮೀ ರವರ ಹೆಸರಿಗೆ ಗುತ್ತಿಗೆ ವರ್ಗಾಯಿಸಿ, 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 07-02-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.1,000/- (ಒಂದು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಮಾನ್ಯ ಆಯುಕ್ತರ ದಿನಾಂಕ:21-01-2012ರ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯ ನಿರ್ಣಯದಂತೆ ಮರುಪರಿಶೀಲಿಸಿ, ಎಸ್.ದೊರೈಸ್ವಾಮಿ ಹೆಡ್ ಗ್ಯಾಂಗ್‌ಮೆನ್ ರವರ ಮೊಮ್ಮಗಳು ಶ್ರೀಮತಿ.ವಿಜಯಲಕ್ಷ್ಮೀ ರವರ ಹೆಸರಿಗೆ ಗುತ್ತಿಗೆ ವರ್ಗಾಯಿಸಿ, 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಿ ವಾಸಕ್ಕೆ ಮಾತ್ರ ಉಪಯೋಗಿಸಿಕೊಳ್ಳುವಂತೆ ಷರತ್ತು ವಿಧಿಸಿ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 20 (104) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ:ವನಇ 57 ಎಂಎನ್‌ಜಿ 89, ದಿನಾಂಕ: 18-03-1991ರ ಆದೇಶದಂತೆ ಆಸ್ಟಿನ್‌ಟೌನ್ ಪ್ರದೇಶದಲ್ಲಿ ಜೈರಾಜ್‌ನಗರದ ಹಟ್ಟಿಂಗ್ ಕಾಲೋನಿಯ 135 ನಿವೇಶನಗಳನ್ನು ಪ್ರತಿ ನಿವೇಶನಕ್ಕೆ ನಾಮ ಮಾತ್ರ ಬೆಲೆಯಾದ ರೂ.100/- ಕ್ಕೆ ಗುತ್ತಿಗೆ ಮತ್ತು ಮಾರಾಟದ ಆಧಾರದ ಮೇಲೆ ಅಲ್ಲಿಯ ವಾಸಸ್ಥರಿಗೆ ಹಂಚತಕ್ಕದೆಂದು, ಗುತ್ತಿಗೆ ಅವಧಿ ಮುಗಿದ ನಂತರ ಹಕ್ಕುಪತ್ರ ನೀಡಬೇಕೆಂದಿದೆ. ನಿವೇಶನ ಪರಭಾರೆ ಮಾಡುವುದನ್ನು ತಪ್ಪಿಸುವ ಸಲುವಾಗಿ ಕುಟುಂಬದ ಮಹಿಳೆಯ ಹೆಸರಿನಲ್ಲಿ ಹಂಚಿಕೆ ಮಾಡಬೇಕೆಂದಿದೆ. ಹಂಚಿಕೆದಾರರು ನಿವೇಶನ ಮರು ಗುತ್ತಿಗೆ ಅಥವಾ ಮಾರಾಟ ಮಾಡಿದರೆ ಅಂತಹವರು ಶಾಶ್ವತ ಹಕ್ಕುಪತ್ರ ಪಡೆಯಲು ಅನರ್ಹರಾಗುತ್ತಾರೆಂದಿದೆ.

ಸರ್ಕಾರದಿಂದ ಮಂಜೂರಾದ 135 ನಿವೇಶನಗಳ ಪೈಕಿ 28 ಫಲಾನುಭವಿಗಳು ಮಾತ್ರ ತಾಳೆಯಾಗಿದ್ದು, ಇನ್ನುಳಿದ 107 ಫಲಾನುಭವಿಗಳು ಅನಧಿಕೃತವಾಗಿ ವಾಸಿಸುತ್ತಿದ್ದಾರೆ. ಇದಲ್ಲದೇ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟ 31 ನಿವೇಶನಗಳ ಪೈಕಿ ಇನ್ನು 20 ಮಂದಿ ಅನಧಿಕೃತವಾಗಿ ಈ ಪ್ರದೇಶದಲ್ಲಿ ಸುಮಾರು 10 ವರ್ಷಗಳಿಂದ ವಾಸವಿದ್ದು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ಪಡಿತರ ಚೀಟಿ, ಗುರುತಿನ ಚೀಟಿ ಇತ್ಯಾದಿ ದಾಖಲಾತಿಗಳು ಹೊಂದಿರುತ್ತಾರೆ. ಅತೀ ಬಡವರಾಗಿರುವುದರಿಂದ, ಮೇಲಿನ ಸರ್ಕಾರಿ ಆದೇಶದಂತೆಯೇ ಇವರಿಗೂ ಸಹ ಮಂಜೂರಾತಿ ನೀಡಲು ಸ್ಥಳೀಯ ಅಧಿಕಾರಿಗಳು ಪ್ರಸ್ತಾಪಿಸಿರುತ್ತಾರೆ.

ಮೇಲಿನಂತೆ ಸಲ್ಲಿಸಲಾಗಿರುವ ಪ್ರಸ್ತಾವನೆಯು ಸಮಂಜಸವಾಗಿರುವ ಹಿನ್ನೆಲೆಯಲ್ಲಿ ಫಲಾನುಭವಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವವರನ್ನು ರಿಯಾಯಿತಿ ದರದಲ್ಲಿ ಕುಟುಂಬದ ಹಿರಿಯ ಮಹಿಳೆಯರ ಹೆಸರಿನಲ್ಲಿ ಹಂಚಿಕೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-02-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 11-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ: 29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಕೌನ್ಸಿಲ್ ಸಭೆಯ ನಿರ್ಣಯದಂತೆ ಕಡತವನ್ನು ಮರುಪರಿಶೀಲಿಸಿ, ಮಾನ್ಯ ಆಯುಕ್ತರ ದಿನಾಂಕ:24-02-2012ರ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 21 (107) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ, ವಿದ್ಯಾರಣ್ಯಪುರ ಉಪ ವಿಭಾಗ, ವಾರ್ಡ್ ನಂ.09, ಹೆಚ್.ಎಂ.ಟಿ ಬಡಾವಣೆಯಲ್ಲಿರುವ ಹಾಪ್‌ಕಾಮ್ಸ್ ಪಕ್ಕದಲ್ಲಿನ ಪಾಲಿಕೆ ವತಿಯಿಂದ ನಿರ್ಮಿಸಿರುವ 195.75 ಚದರ ಅಡಿಗಳ 2 ಮಳಿಗೆಗಳನ್ನು ಬಾಡಿಗೆಗಾಗಿ ಹಿರಿಯ ನಾಗರೀಕರ ವೇದಿಕೆ ವಿದ್ಯಾರಣ್ಯಪುರ ಮತ್ತು ಲಯನ್ಸ್ ಸಂಸ್ಥೆ ವಿದ್ಯಾರಣ್ಯಪುರ ಇವರುಗಳು ಬಾಡಿಗೆ ಆಧಾರದ ನೀಡಲು ಅನುಮತಿಯನ್ನು ಕೋರಿರುತ್ತಾರೆ.

ಸದರಿ ಜಾಗದ ಬಗ್ಗೆ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ನಕ್ಷೆಯಲ್ಲಿ ಜಾಗವನ್ನು ಗುರುತಿಸಿ ವರದಿ ಮಂಡಿಸಿರುತ್ತಾರೆ.

ಸದರಿ ಮಳಿಗೆಗೆ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ನಿಯಮಗಳಂತೆ ಪ್ರತಿ ತಿಂಗಳಿಗೆ ರೂ.1874/- ಗಳ ಬಾಡಿಗೆಯನ್ನು ನಿಗಧಿಪಡಿಸಿರುತ್ತಾರೆ. ಸದರಿ ಮಳಿಗೆಗಳಲ್ಲಿ ಒಂದನ್ನು ಹಿರಿಯ ನಾಗರೀಕರ ವೇದಿಕೆಯವರಿಗೆ ಹಾಗೂ ಮತ್ತೊಂದನ್ನು ಲಯನ್ಸ್ ಕ್ಲಬ್ ಆಫ್ ವಿದ್ಯಾರಣ್ಯಪುರ ಬೆಂಗಳೂರು ಇವರಿಗೆ ಬಾಡಿಗೆಗೆ ನೀಡಲು, ಪಾಲಿಕೆ ಹಾಗೂ ಸಾರ್ವಜನಿಕ ಉದ್ದೇಶಕ್ಕೆ ಅವಶ್ಯವೆನಿಸುವ ಅವಧಿಯಲ್ಲಿ ಪಾಲಿಕೆ ವಾಪಸ್ಸು ಪಡೆಯುವ ಷರತ್ತಿನೊಂದಿಗೆ ಇನ್ನಿತರೇ ಷರತ್ತುಗಳನ್ನು ವಿಧಿಸಿ ಕರಾರು ನೊಂದಾಯಿಸುವ ದಿನಾಂಕದಿಂದ 3 ವರ್ಷಗಳ ಅವಧಿಗೆ ಅನುಮತಿ ನೀಡಲು ಸ್ಥಾಯಿ ಸಮಿತಿಗಳ ಅನುಮೋದನೆ ಪಡೆಯಬೇಕಾಗಿದ್ದು, ತತ್ಸಂಬಂಧ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:28-02-2012ರ ಟಿಪ್ಪಣಿ ಹಾಗೂ ಹರಾಜು ಮೂಲಕ ಬಾಡಿಗೆಗೆ ನೀಡಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 11-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಕೌನ್ಸಿಲ್ ಸಭೆಯ ನಿರ್ಣಯದಂತೆ ಕಡತವನ್ನು ಮರುಪರಿಶೀಲಿಸಿ, ಮಾನ್ಯ ಆಯುಕ್ತರ ದಿನಾಂಕ:28-02-2012ರ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

..................2

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 22 (108) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.94(27) ಗಾಂಧಿನಗರ, ಕೆಂಪೇಗೌಡ ವೃತ್ತದ ದ್ವಿಚಕ್ರ ವಾಹನದ ಕಾಂಪೌಂಡ್ ಒಳಗಡೆ 3x3=9 ಅಡಿಗಳ ಜಾಗದಲ್ಲಿ ಟೆಲಿಫೋನ್ ಬೂತ್ ನಡೆಸಲು ದಿನಾಂಕ:04-10-2006 ರಿಂದ 04-10-2011 ರವರೆವಿಗೆ ಮಾಸಿಕ ರೂ.250/- ರಂತೆ 5 ವರ್ಷಗಳ ಅವಧಿಗೆ ಶ್ರೀ. ಎಂ.ಎಸ್.ದೊರೆಸ್ವಾಮಿ, ಅಂಗವಿಕಲರು ಇವರಿಗೆ ಗುತ್ತಿಗೆಗೆ ನೀಡಲಾಗಿದ್ದು, ಸದರಿ ಗುತ್ತಿಗೆ ಅವಧಿಯು ಮುಕ್ತಾಯಗೊಂಡಿರುತ್ತದೆ.

ಸದರಿ ಅರ್ಜಿದಾರರು ಕಾರಣಾಂತರದಿಂದ ನವೀಕರಣ ಮಾಡಿಕೊಂಡಿರುವುದಿಲ್ಲ. ಈಗ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಹಿಂದೆ ನೀಡಿದ ಸ್ಥಳದಲ್ಲಿನ ಟೆಲಿಫೋನ್ ಬೂತ್ ತೆರವುಗೊಳಿಸಿರುವುದರಿಂದ ಇವರ ಅರ್ಜಿಯನ್ನು ಮಾನವೀಯತೆ ದೃಷ್ಟಿಯಿಂದ ಪರಿಗಣಿಸಿ ಕೆಂಪೇಗೌಡ ವೃತ್ತದ ದ್ವಿಚಕ್ರ ವಾಹನದ ಕಾಂಪೌಂಡ್ ಒಳಗಡೆ 3x3 ಅಡಿಗಳ ಜಾಗವನ್ನು ಮಂಜೂರು ಮಾಡಲು ನಕ್ಷೆ ಲಗತ್ತಿಸಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗಾಂಧಿನಗರ ಉಪ ವಿಭಾಗ) ರವರು ಹಾಗೂ ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 3x3=9 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ: 21-09-2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.13000/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 13000x9=ರೂ.1,17,000/- ಒಟ್ಟು ಮೊತ್ತಗಳಾಗುತ್ತದೆ. ಶೇ.10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.11,700/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.975/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ.100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ.ಎಂ.ಎಸ್.ದೊರೆಸ್ವಾಮಿ ಇವರಿಗೆ ನೀಡಿರುವ ಸ್ಥಳದ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಕ್ಕೆ ಜಾಗದ ಹೊಸ ಚಕ್ಕುಬಂದಿಯೊಂದಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-01-2012 ರ ಟಿಪ್ಪಣಿ ಹಾಗೂ ಶ್ರೀ. ಎಂ.ಎಸ್.ದೊರೆಸ್ವಾಮಿ, ಅಂಗವಿಕಲರು ಇವರಿಗೆ 3x3=9 ಅಡಿಗಳ ಜಾಗದಲ್ಲಿ ಟೆಲಿಫೋನ್ ಬೂತ್ ನಡೆಸಲು ನೀಡಲಾಗಿರುವ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಕ್ಕೆ ನವೀಕರಿಸುವ ಮಾನ್ಯ ಆಯುಕ್ತರ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:07-02-2012ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:07-02-2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.300/- (ಮುನ್ನೂರು ಮಾತ್ರ) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು

..............2

ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಮಾನ್ಯ ಆಯುಕ್ತರ ದಿನಾಂಕ:16-01-2012ರ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯ ನಿರ್ಣಯದಂತೆ ಮರುಪರಿಶೀಲಿಸಿ, ಶ್ರೀ. ಎಂ.ಎಸ್.ದೊರೆಸ್ವಾಮಿ, ಅಂಗವಿಕಲರು ಇವರಿಗೆ 3x3=9 ಅಡಿಗಳ ಜಾಗದಲ್ಲಿ ಟೆಲಿಫೋನ್ ಬೂತ್ ನಡೆಸಲು ನೀಡಲಾಗಿರುವ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಕ್ಕೆ ನವೀಕರಿಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 23 (109) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.154, ನಂ.16/ಎ, 8ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಎನ್.ಆರ್.ಕಾಲೋನಿಯಲ್ಲಿನ ಪಾಲಿಕೆಯ 40x90 ಅಡಿಗಳ ಸ್ವತ್ತನ್ನು ಕಾರ್ಯದರ್ಶಿ, ಲಕ್ಷ್ಮಿ ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆ ರವರಿಗೆ ದಿನಾಂಕ:06-04-1961 ರಿಂದ 50 ವರ್ಷಗಳ ಅವಧಿಗೆ ಶಾಲೆಗಾಗಿ ವಾರ್ಷಿಕ ರೂ.24/- ಗಳನ್ನು ನಿಗಧಿಪಡಿಸಿ ಗುತ್ತಿಗೆಗೆ ನೀಡಿದ್ದು, ದಿನಾಂಕ:05-04-2011 ರಂದು ಗುತ್ತಿಗೆ ಅವಧಿ ಮುಗಿದಿರುತ್ತದೆ.

ಗುತ್ತಿಗೆದಾರರು ಅರ್ಜಿ ಸಲ್ಲಿಸಿ, ಈ ಶಾಲೆಯು ಅತ್ಯಂತ ಹಳೆ ಶಾಲೆಯಾಗಿದ್ದು, ಈ ಬಡಾವಣೆಯ ಬಡಮಕ್ಕಳಿಗೋಸ್ಕರ ಈ ಶಾಲೆ ಇದ್ದು, ಬಡಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವುದರಿಂದ, ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳಿಗೆ ಮುಂದುವರೆಸಲು ಕೋರಿರುತ್ತಾರೆ. ವಲಯಾಧಿಕಾರಿಗಳು ನವೀಕರಣದ ಬಗ್ಗೆ ಆದೇಶಕ್ಕಾಗಿ ಕಡತ ಮಂಡಿಸಿರುತ್ತಾರೆ.

ದಿನಾಂಕ:01-03-2002ರ ಆಯುಕ್ತರ ಸುತ್ತೋಲೆ ಕಲಂ-7(4) ರಲ್ಲಿ ಗುತ್ತಿಗೆ ಹಣವು ಸ್ಥಳದ ಹಾಲಿ ಮಾರುಕಟ್ಟೆ ದರದ ಶೇ.10% ರಷ್ಟು ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಲು ಆದೇಶವಿರುತ್ತದೆ. ಶೇ.100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಅಧಿಕಾರವಿರುತ್ತದೆ.

ಸದರಿ ಸ್ಥಳದ ದಿನಾಂಕ:21-09-2011ರ ಸರ್ಕಾರದ ಮಾರ್ಗಸೂಚಿಯಂತೆ ಪ್ರಸಕ್ತ ಮಾರುಕಟ್ಟೆ ದರವು ವಸತಿಗೆ ಚದರ ಅಡಿ ಒಂದಕ್ಕೆ ರೂ.2,300/- ಗಳಿದ್ದು, ಅರ್ಜಿದಾರರು ಕೋರಿರುವ ಜಾಗವು 3600 ಚ.ಅಡಿಗಳಾಗುತ್ತದೆ. ಇದರಂತೆ 2300x3600=ರೂ.82,80,000/- ಗಳಾಗುತ್ತದೆ. ಶೇ.10% ವಾರ್ಷಿಕ ಗುತ್ತಿಗೆ ಹಣ ರೂ.8,28,000/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಹಣ ರೂ.69,000/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಲಕ್ಷ್ಮಿ ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆ ರವರಿಗೆ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ 5 ವರ್ಷಗಳಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03-12-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2011ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2011ರ ನಿರ್ಣಯವನ್ನು ಒಪ್ಪುತ್ತಾ, 5 (ಐದು) ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ಹಾಗೂ ವಾರ್ಷಿಕ ರೂ.25,000/- (ಇಪ್ಪತ್ತೈದು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಮಾನ್ಯ ಆಯುಕ್ತರ ದಿನಾಂಕ:03-12-2011ರ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯ ನಿರ್ಣಯದಂತೆ ಮರುಪರಿಶೀಲಿಸಿ, ಲಕ್ಷ್ಮಿ ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆ ರವರಿಗೆ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ 5 ವರ್ಷಗಳಿಗೆ ನವೀಕರಿಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

.................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 24 (111) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿರುವ ಪ್ರಾಣಿಗಳ ವಧಾಗಾರವನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ಕೋರಿ, ಶ್ರೀ. ಬಿ.ಕೃಷ್ಣಭಟ್‌ರವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ದಾವೆ ಸಂಖ್ಯೆ:5709/1997 (ALT-PIL) ರಲ್ಲಿ ಗೌರವಾನ್ವಿತ ರಾಜ್ಯ ಉಚ್ಚ ನ್ಯಾಯಾಲಯವು ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಪ್ರಾಣಿಗಳ ವಧಾಗಾರಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವಂತೆ ಆದೇಶ ನೀಡಲಾಗಿತ್ತು.

ಟ್ಯಾನರಿ ರಸ್ತೆಯಲ್ಲಿನ ಕಸಾಯಿಖಾನೆಯನ್ನು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ವ್ಯಾಪ್ತಿಗೆ ಒಳಪಡುವ ಕರ್ನಾಟಕ ಸರ್ಕಾರದ ಉದ್ದಿಮೆಯಾದ ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತ, ಬೆಂಗಳೂರು-47 ಸಂಸ್ಥೆಯವರು ನಿರ್ವಹಣೆಯನ್ನು ಮಾಡುತ್ತಿದ್ದು, ಕಸಾಯಿಖಾನೆಯನ್ನು ಬೆಂಗಳೂರು ಹೊರವಲಯಕ್ಕೆ ಸ್ಥಳಾಂತರಿಸಲು ಆನೇಕಲ್ ತಾಲ್ಲೂಕು, ಇಗ್ಗಲೂರು ಗ್ರಾಮದಲ್ಲಿ ಸುಮಾರು 40 ಎಕರೆ 28 ಗುಂಟೆ ಜಾಗವನ್ನು ಗುರುತಿಸಲಾಗಿದ್ದು, ಗುರುತಿಸಲಾದ ಈ ಜಾಗವನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ರೂ.2,90,50,627.00 ಗಳನ್ನು ಪಾವತಿಸಿ ಸ್ವಾಧೀನ ಪ್ರಮಾಣ ಪತ್ರವನ್ನು ಪಡೆಯಲಾಗಿರುತ್ತದೆ. ಸದರಿ ಜಾಗವನ್ನು ಸಂರಕ್ಷಿಸಲು ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ರೂ.96.50 ಲಕ್ಷ ಅಂದಾಜು ಪಟ್ಟಿ ಅನುಮೋದನೆಗೊಂಡಿದ್ದು, ಕಾಮಗಾರಿಯನ್ನು ನಿರ್ವಹಿಸಲಾಗುತ್ತಿರುತ್ತದೆ. ಈ ಮಧ್ಯದಲ್ಲಿ ಕಾಮಗಾರಿಯು ಶೇ.80% ರಷ್ಟು ಪ್ರಗತಿಯಲ್ಲಿದ್ದಾಗ ಶ್ರೀ. ಬಾಲರಾಜ್ ಎಂಬುವವರು ಕೆ.ಐ.ಎ.ಡಿ.ಬಿ.ಗೆ ನೀಡಿರುವ ಜಾಗಕ್ಕೆ ತಮಗೆ ಹಣ ಪಾವತಿ ಮಾಡಿರುವುದಿಲ್ಲವೆಂದು ಕಾಮಗಾರಿಗೆ ತಡೆ ಒಡ್ಡಿರುತ್ತಾರೆ. ಈ ಸಂಬಂಧ ಹಲವು ಬಾರಿ ಕೆ.ಐ.ಎ.ಡಿ.ಬಿ. ಕಛೇರಿಗೆ ಪತ್ರ ಬರೆಯಲಾಗಿತ್ತು. ಆದರೆ, ಇಲ್ಲಿಯವರೆಗೆ ಕೆ.ಐ.ಎ.ಡಿ.ಬಿ. ರವರಿಂದ ಯಾವುದೇ ಉತ್ತರ ಬಂದಿರುವುದಿಲ್ಲ.

ತದನಂತರ ದಿನಗಳಲ್ಲಿ ಇಗ್ಗಲೂರು ಗ್ರಾಮದ ಸಮೀಪ ಕಸಾಯಿಖಾನೆ ನಿರ್ಮಾಣ ಪ್ರಕ್ರಿಯೆಯು ಸ್ಥಳೀಯ ಜನಪ್ರತಿನಿಧಿಗಳಿಂದ ಸದರಿ ಕ್ಷೇತ್ರದ ಶಾಸಕರಿಂದ ಹಾಗೂ ಸಾರ್ವಜನಿಕರ ವಿರೋಧದಿಂದಾಗಿ ಸ್ಥಗಿತಗೊಂಡಿರುತ್ತದೆ. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಕನಕಪುರ ತಾಲ್ಲೂಕು, ಹಾರೋಹಳ್ಳಿ ಕೈಗಾರಿಕಾ ಹೊರವಲಯದ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ. ರವರು ಅಭಿವೃದ್ಧಿಪಡಿಸಿರುವ ಪ್ಲಾಟ್ ನಂ.140 ಮತ್ತು 141 ರಲ್ಲಿ 40 ಎಕರೆ ಜಾಗವನ್ನು ಸೂಕ್ತವೆಂದು ಗುರುತಿಸಿ ಕೆ.ಐ.ಎ.ಡಿ.ಬಿ. ಯಿಂದ ಸ್ವಾಧೀನಪಡಿಸಿಕೊಂಡಿದ್ದು, ಕಸಾಯಿಖಾನೆ ನಿಗಧಿಪಡಿಸಲಾಗಿರುತ್ತದೆ.

ಆಧುನಿಕ ಕಸಾಯಿಖಾನೆ ನಿರ್ಮಾಣಕ್ಕೆ ಆನೇಕಲ್ ತಾಲ್ಲೂಕು, ಇಗ್ಗಲೂರು ಗ್ರಾಮದ ಸಮೀಪ 40.28 ಎಕರೆ ಜಾಗಕ್ಕೆ ಬದಲಿಯಾಗಿ ಕನಕಪುರ ತಾಲ್ಲೂಕು, ಹಾರೋಹಳ್ಳಿ ಸಮೀಪ 40.00 ಎಕರೆ ಬದಲಿ ಜಾಗ ನೀಡಿದ ಹಿನ್ನಲೆಯಲ್ಲಿ ಇಗ್ಗಲೂರು ಗ್ರಾಮದ 40.28 ಎಕರೆ-ಗುಂಟೆ ಜಾಗಕ್ಕೆ ಸಂಬಂಧಪಟ್ಟ ಮೂಲ ಹಂಚಿಕೆ ಪತ್ರ ಮತ್ತು ಸ್ವಾಧೀನ ಪ್ರಮಾಣ ಪತ್ರವನ್ನು ವಾಪಸ್ಸು ನೀಡುವಂತೆ ಕೆ.ಐ.ಎ.ಡಿ.ಬಿ. ಸಂಸ್ಥೆಯವರು ದಿನಾಂಕ: 23-12-2009 ಮತ್ತು 04-03-2010ರ ಪತ್ರಗಳಲ್ಲಿ ಕೋರಿರುತ್ತಾರೆ.

ಇಗ್ಗಲೂರು ಗ್ರಾಮದ 40.28 ಎಕರೆ-ಗುಂಟೆ ಜಾಗದ ಸುತ್ತ ಆಸ್ತಿ ಸಂರಕ್ಷಣೆ ಮಾಡಿರುವ ಜಾಗದಲ್ಲಿ "Institute of urban affairs Training and Research center" ಅನ್ನು ಸ್ಥಾಪಿಸಲು ಜಾಗ ಸೂಕ್ತವೆಂದು ನಿರ್ಣಯಿಸಿ ಹಾಗೂ ಪೂರ್ತಿ ಜಮೀನನ್ನು ಪಾಲಿಕೆಯ ವಶದಲ್ಲಿಯೇ ಉಳಿಸಿಕೊಳ್ಳಲು ಉದ್ದೇಶಿಸಿ ಕೆ.ಐ.ಎ.ಡಿ.ಬಿ.ರವರಿಗೆ ಮಾನ್ಯ ಆಯುಕ್ತರು ದಿನಾಂಕ:09-04-2010 ರಂದು ಪತ್ರ ಬರೆದಿರುತ್ತಾರೆ. ಆದರೆ ಕೆ.ಐ.ಎ.ಡಿ.ಬಿ.ರವರು ಬೋರ್ಡ್ ಮೀಟಿಂಗ್ ದಿನಾಂಕ:18-06-2011 ರಂದು ಈ ಕೆಳಕಂಡ ತೀರ್ಮಾನಗಳನ್ನು ಕೈಗೊಂಡಿರುತ್ತಾರೆ.

..................2

1. ಆನೇಕಲ್ ತಾಲ್ಲೂಕು, ಇಗ್ಗಲೂರು ಗ್ರಾಮದಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ 40.28 ಎಕರೆ-ಗುಂಟೆ ಜಾಗವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಿರುವುದನ್ನು ಹಿಂತಿರುಗಿಸಬೇಕೆಂದು ಹಾಗೂ
2. ಸದರಿ ಇಗ್ಗಲೂರು ಗ್ರಾಮದ 40.28 ಎಕರೆ-ಗುಂಟೆ ಜಾಗದ ಪೈಕಿ 5.00 ಎಕರೆ ಜಾಗವನ್ನು "Institute of urban affairs Training and Research center" ಅನ್ನು ಸ್ಥಾಪಿಸಲು ನೀಡಲಾಗುವುದು ಎಂಬುದಾಗಿ ತೀರ್ಮಾನಿಸಿರುತ್ತಾರೆ.

ಈ ಮಧ್ಯೆದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕೆ.ಐ.ಎ.ಡಿ.ಬಿ.ರವರು ದಿನಾಂಕ:02-07-2011 ಮತ್ತು 19-08-2011 ರಂದು ಮಾನ್ಯ ಆಯುಕ್ತರಿಗೆ ಬರೆದ ಪತ್ರದಲ್ಲಿ ಪಾಲಿಕೆಗೆ ಹಸ್ತಾಂತರಿಸಿರುವ ಜಾಗವನ್ನು ಮರಳಿ ಕೆ.ಐ.ಎ.ಡಿ.ಬಿ.ಗೆ ನೀಡುವಂತೆ ಕೋರಿರುತ್ತಾರೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ "Institute of urban affairs Training and Research center" ಅನ್ನು ಸ್ಥಾಪಿಸಲು 5 ಎಕರೆ ಜಾಗ ನೀಡುವುದಾಗಿ ಹಾಗೂ ಇ.ಎಸ್.ಐ.ಸಿ. ನವರು ಆಸ್ಪತ್ರೆ ನಿರ್ಮಾಣ ಮಾಡಲು 5 ಎಕರೆ ಜಾಗ ನೀಡುವುದಾಗಿ ತಿಳಿಸಿರುತ್ತಾರೆ ಮತ್ತು ಈಗಾಗಲೇ ಸದರಿ ಜಾಗಕ್ಕೆ ಪಾವತಿ ಮಾಡಿರುವ ಹಣವನ್ನು ಹಿಂದಿರುಗಿಸಲಾಗುವುದು ಎಂಬುದಾಗಿ ಸಹ ತಿಳಿಸಿರುತ್ತಾರೆ.

ಮುಂದುವರೆದಂತೆ, ಕೆ.ಐ.ಎ.ಡಿ.ಬಿ. ರವರು ದಿನಾಂಕ:31-10-2011 ಮತ್ತು 04-11-2011 ರಂದು ಬರೆದ ಪತ್ರದಲ್ಲಿ ಜಾಗವನ್ನು ವಾಪಸ್ಸು ನೀಡುವಂತೆ ಕೋರಿದ್ದು, ದಿನಾಂಕ:07-10-2011 ರಂದು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೆ.ಐ.ಎ.ಡಿ.ಬಿ. ರವರಿಗೆ ಸದರಿ ಜಾಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅನುಕೂಲವಾಗುವ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುವ ಹಿನ್ನಲೆಯಲ್ಲಿ ಸದರಿ ಜಾಗವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಾಧೀನದಲ್ಲೇ ಉಳಿಸಿಕೊಳ್ಳಲು ಉದ್ದೇಶಿಸಿರುವುದಾಗಿ ಪತ್ರದ ಮೂಲಕ ತಿಳಿಸಿರುತ್ತಾರೆ.

ದಿನಾಂಕ:29-10-2011 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 5 ಎಕರೆ ಜಾಗವನ್ನು ಇ.ಎಸ್.ಐ.ಸಿ. ನವರು ಆಸ್ಪತ್ರೆ ನಿರ್ಮಾಣಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೊಡಿಸುವುದಾಗಿ ತಿಳಿಸಿದ್ದಾರೆ.

ಈ ಹಿನ್ನಲೆಯಲ್ಲಿ ಹಾಗೂ ಪ್ರಸ್ತುತ ಜಾಗವನ್ನು ರೂ.2.90 ಕೋಟಿಗಳನ್ನು ನೀಡಿ ಈಗಾಗಲೇ ಪಾಲಿಕೆಗೆ ಪಡೆದು ಸಂರಕ್ಷಿಸಲಾಗಿದ್ದು, ಇದರ ಪೈಕಿ 5 ಎಕರೆ ಜಾಗವನ್ನು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆಗಿರುವ ನಿರ್ಧಾರದಂತೆ ಸದರಿ ಜಾಗಕ್ಕೆ ಮಾರ್ಗಸೂಚಿಯಂತೆ ದರ ಪಾವತಿಸಿಕೊಂಡು ಸುತ್ತಮುತ್ತಲಿನ ಬಡ ಜನರಿಗೆ ಉಚಿತ ವೈದ್ಯಕೀಯ ಸವಲತ್ತು ಕಲ್ಪಿಸುವ ಷರತ್ತಿನ ಮೇಲೆ (ಉಭಯತ್ರರರು ಸ್ಥಳ ಪರಿಶೀಲನೆ ನಂತರ) ನಿರ್ಧರಿಸುವ ಪ್ರದೇಶವನ್ನು ಇ.ಎಸ್.ಐ.ಸಿ.ಗೆ ಆಸ್ಪತ್ರೆ ನಿರ್ಮಿಸಲು ಜಾಗವನ್ನು ನೀಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-02-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಕೌನ್ಸಿಲ್ ಸಭೆಯ ನಿರ್ಣಯದಂತೆ ಕಡತವನ್ನು ಮರುಪರಿಶೀಲಿಸಿ, ಮಾನ್ಯ ಆಯುಕ್ತರ ದಿನಾಂಕ:16-02-2012ರ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾಪಿತ ಸ್ಥಳವು ನಗರ ಪಾಲಿಕೆಯ ಉಪಯೋಗಕ್ಕೆ ಬೇಕಾಗುವ ಹಿನ್ನಲೆಯಲ್ಲಿ ಪ್ರಸ್ತಾವನೆಯನ್ನು ಕೈಬಿಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾಪಿತ ಸ್ಥಳವು ನಗರ ಪಾಲಿಕೆಯ ಉಪಯೋಗಕ್ಕೆ ಬೇಕಾಗುವ ಹಿನ್ನಲೆಯಲ್ಲಿ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 25 (112) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರ ಆದೇಶ ಸಂಖ್ಯೆ: ವನಇ 21 ಎಂಎನ್‌ಜಿ 90, ದಿನಾಂಕ: 09-01-1991ರ ಸರ್ಕಾರಿ ಆದೇಶದಲ್ಲಿ 85 ಅನುಭವದಾರರಿಗೆ ಕ್ರಯಪತ್ರ ನೀಡುವ ಬಗ್ಗೆ ಪ್ರತಿ ನಿವೇಶನಕ್ಕೆ ನಾಮಮಾತ್ರ ಬೆಲೆಯಾದ ರೂ.100/-ಕ್ಕೆ ಗುತ್ತಿಗೆ ಹಾಗೂ ಮಾರಾಟ ಆಧಾರದ ಮೇಲೆ ಹಂಚತಕ್ಕದೆಂದು 10 ವರ್ಷಗಳ ಅವಧಿಯ ಗುತ್ತಿಗೆ ಮುಗಿದ ನಂತರ ಹಕ್ಕುಪತ್ರವನ್ನು ಕುಟುಂಬದ ಮಹಿಳೆಯರ ಹೆಸರಿನಲ್ಲಿ ಹಂಚಲು, ಯಾವುದೇ ಹಂಚಿಕೆದಾರರು ನಿವೇಶನ ಮರು ಗುತ್ತಿಗೆ ನೀಡಿದರೆ ಅಥವಾ ಮಾರಾಟ ಮಾಡಿದರೆ ಅಂತಹವರು ಶಾಶ್ವತ ಹಕ್ಕುಪತ್ರ ಪಡೆಯಲು ಅನರ್ಹರಾಗುತ್ತಾರೆಂದಿದೆ.

ಮೇಲಿನ ಆದೇಶದಂತೆ ಗುರ್ತಿಸಲಾದ ಫಲಾನುಭವಿಗಳ ಪೈಕಿ 40 ಫಲಾನುಭವಿಗಳು ಮಾತ್ರ ಸದರಿ ನಿವೇಶನಗಳಲ್ಲಿ ವಾಸವಿದ್ದು 233 ಫಲಾನುಭವಿಗಳು ಅನಧಿಕೃತವಾಗಿ ವಾಸವಿದ್ದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಸದರಿಯವರುಗಳು ಪಡಿತರ ಚೀಟಿ, ಗುರುತಿನ ಚೀಟಿ ಇತ್ಯಾದಿ ದಾಖಲಾತಿಗಳನ್ನು ಹೊಂದಿದ್ದು, ಅತೀ ಬಡವರಾಗಿರುವುದರಿಂದ ಮೇಲಿನ ಸರ್ಕಾರಿ ಆದೇಶದಂತೆಯೇ ಇವರಿಗೂ ಸಹ ಮಂಜೂರಾತಿ ನೀಡಲು ಸ್ಥಳೀಯ ಅಧಿಕಾರಿಗಳು ಪ್ರಸ್ತಾಪಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಸಲ್ಲಿಸಲಾಗಿರುವ ಪ್ರಸ್ತಾವನೆಯು ಸಮಂಜಸವಾಗಿರುವ ಹಿನ್ನೆಲೆಯಲ್ಲಿ ಫಲಾನುಭವಿಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರುವವರನ್ನು ರಿಯಾಯಿತಿ ದರದಲ್ಲಿ ಕುಟುಂಬದ ಹಿರಿಯ ಮಹಿಳೆಯರ ಹೆಸರಿನಲ್ಲಿ ಹಂಚಿಕೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-02-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಕೌನ್ಸಿಲ್ ಸಭೆಯ ನಿರ್ಣಯದಂತೆ ಕಡತವನ್ನು ಮರುಪರಿಶೀಲಿಸಿ, ಮಾನ್ಯ ಆಯುಕ್ತರ ದಿನಾಂಕ:24-02-2012ರ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 26 (113) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಯುಡಿ 161 ಕೆಹೆಚ್‌ಬಿ 94 ದಿನಾಂಕ: 02-09-1994 ರ ಆದೇಶವನ್ನು ಉಲ್ಲೇಖಿಸಿ ಬೆಂಗಳೂರು ಜಿಲ್ಲಾಧಿಕಾರಿಗಳು, ಬೆಂಗಳೂರು ರವರು ಸಂಖ್ಯೆ ಎಲ್‌ಎನ್‌ಡಿ(ಎನ್)/ಪಿಆರ್/350/2005-06, ದಿನಾಂಕ:13-01-2006ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಕೋರಮಂಗಲ, ಸರ್ವೆ ನಂ.36ರಲ್ಲಿನ ಸಮತನಗರವನ್ನು ಬೆಂಗಳೂರು ನಗರದ ಬಡ ಜನ ಸುಧಾರಣಾ ಕಾರ್ಯಕ್ರಮ ಅಡಿಯಲ್ಲಿ 110 ಮನೆಗಳನ್ನು ನಿರ್ಮಿಸಿದ್ದು, ಅದರಲ್ಲಿ ವಾಸಿಸುವವರಿಗೆ ಹಕ್ಕುಪತ್ರ ವಿತರಿಸುವ ಸಂಬಂಧ ಪ್ರಸ್ತಾಪವಿದ್ದು. ಈ ಪ್ರದೇಶ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿರುತ್ತದೆ. ಕೋರಮಂಗಲ ಗ್ರಾಮದ ಸರ್ವೆ ನಂ.36ರಲ್ಲಿ 1 ಎಕರೆ 4 ಗುಂಟೆ ಜಮೀನನ್ನು ಮೇಲೆ ವಿವರಿಸಿದ ಕಾರ್ಯಕ್ರಮ ಅಡಿಯಲ್ಲಿ 110 ಮನೆಗಳನ್ನು ನಿರ್ಮಿಸಲು ಜಮೀನನ್ನು ವರ್ಗಾಯಿಸಿರುತ್ತಾರೆ. ಪಾಲಿಕೆ ವತಿಯಿಂದ ಕುಡಿಯುವ ನೀರಿನ ಸೌಲಭ್ಯ, ಒಳ ಚರಂಡಿ, ರಸ್ತೆ ಸಂಪರ್ಕ ಮತ್ತು ರಸ್ತೆಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಿರುತ್ತದೆ. ದಿನಾಂಕ:22-09-1996ರಲ್ಲಿ ದೃಢೀಕರಿಸಿರುವ ಪಟ್ಟಿಯಂತೆ ಮಹಾನಗರ ಪಾಲಿಕೆಯಿಂದ ಹಕ್ಕುಪತ್ರ ವಿತರಿಸಿ ಖಾತೆ ನೊಂದಾವಣೆಗೆ ಕ್ರಮಕೈಗೊಳ್ಳಲು ಪ್ರಸ್ತಾಪಿಸಿರುತ್ತಾರೆ.

ಬೆಂಗಳೂರು ಜಿಲ್ಲಾಧಿಕಾರಿಗಳು ಸಲ್ಲಿಸಿರುವ 111 ಜನರ ಪೈಕಿ, 41 ಫಲಾನುಭವಿಗಳ ಮಾತ್ರ ಸ್ಥಳದಲ್ಲಿ ವಾಸವಿದ್ದು, 70 ಜನರು ಬೇರೆ ಫಲಾನುಭವಿಗಳು ಸುಮಾರು 10 ವರ್ಷಗಳಿಂದ ವಾಸವಿರುವುದಾಗಿ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು ಪಡಿತರ ಚೀಟಿ, ಗುರುತಿನ ಚೀಟಿ ಇತ್ಯಾದಿ ದಾಖಲಾತಿಗಳು ಹೊಂದಿರುತ್ತಾರೆ. ಅತೀ ಬಡವರಾಗಿರುವುದರಿಂದ ಮೇಲಿನ ಸರ್ಕಾರಿ ಆದೇಶದಂತೆಯೇ ಇವರಿಗೂ ಸಹ ಮಂಜೂರಾತಿ ನೀಡಲು ಸ್ಥಳೀಯ ಅಧಿಕಾರಿಗಳು ಪ್ರಸ್ತಾಪಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸಲ್ಲಿಸಲಾಗಿರುವ ಪ್ರಸ್ತಾವನೆಯು ಸಮಂಜಸವಾಗಿರುವ ಹಿನ್ನೆಲೆಯಲ್ಲಿ ಫಲಾನುಭವಿಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರುವವರನ್ನು ರಿಯಾಯಿತಿ ದರದಲ್ಲಿ ಕುಟುಂಬದ ಹಿರಿಯ ಮಹಿಳೆಯರ ಹೆಸರಿನಲ್ಲಿ ಹಂಚಿಕೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-02-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಕೌನ್ಸಿಲ್ ಸಭೆಯ ನಿರ್ಣಯದಂತೆ ಕಡತವನ್ನು ಮರುಪರಿಶೀಲಿಸಿ, ಮಾನ್ಯ ಆಯುಕ್ತರ ದಿನಾಂಕ:24-02-2012ರ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

..............2

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17–07–2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17–07–2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 27 (114) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪೀಣ್ಯ ಗ್ರಾಮ ಸೇವಾ ಸಹಕಾರ ಸಂಘ (ರಿ) ರವರು ಸಾರ್ವಜನಿಕರ & ಪಡಿತರ ಚೀಟಿದಾರರಿಗೆ ಅಹಾರ ಪದಾರ್ಥ ಮತ್ತು ಸೀಮೆ ಎಣ್ಣೆ ಹಂಚಿಕೆ ಮಾಡುತ್ತಿದ್ದು, ರಾಷ್ಟ್ರೀಯ ಹೆದ್ದಾರಿ-4ರ ರಸ್ತೆ ಅಗಲೀಕರಣಕ್ಕೆ ಸಂಘದವರ ಕಟ್ಟಡ ವಶಪಡಿಸಿಕೊಂಡಿರುವುದರಿಂದ, ವಾರ್ಡ್-38, ಹೆಚ್.ಎಂ.ಟಿ. ವಾರ್ಡ್ ಕಛೇರಿ ಇರುವ ಪಕ್ಕದಲ್ಲಿನ ಪಾಲಿಕೆಯ 720 ಚ.ಅಡಿ ಖಾಲಿ ನಿವೇಶನವನ್ನು ಗುತ್ತಿಗೆ ಆಧಾರ ನೀಡಲು ಕೋರಿರುತ್ತಾರೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ ಇದು ಪಾಲಿಕೆ ಸ್ವತ್ತಾಗಿದ್ದು, ಇದರಲ್ಲಿ 720 ಚ. ಅಡಿ ಮೂಲೆಯ ಖಾಲಿ ನಿವೇಶನವಿದ್ದು, ಹಾಲೀ ಜಮೀನು ಯಾವುದೇ ಉಪಯೋಗಕ್ಕೆ ಬರುವುದಿಲ್ಲವಾದ್ದರಿಂದ, ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ನ್ಯಾಯಬೆಲೆ ಅಂಗಡಿಗೆ ಗುತ್ತಿಗೆಗೆ ನೀಡಲು ಪ್ರಸ್ತಾಪಿಸಿರುತ್ತಾರೆ. ಪಾಲಿಕೆಗೆ ಈ ನಿವೇಶನ ಅಗತ್ಯವಿಲ್ಲದಿದ್ದಲ್ಲಿ ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡಲು ಅಭಿಪ್ರಾಯಿಸಲಾಗಿದೆ.

ಸರ್ಕಾರಿ ಅದೇಶ ಸಂಖ್ಯೆ: ನಅಇ 129 ಟಿಎಂಬಿ 2002, ದಿನಾಂಕ:02-06-2003 ರಲ್ಲಿನ ಸರ್ಕಾರಿ ಆದೇಶದಲ್ಲಿ ಸ್ವತ್ತು ಗುತ್ತಿಗೆಗೆ ನಿಡಲು ಅಥವಾ ಕ್ರಯ ಮಾಡಲು ಸಾರ್ವಜನಿಕ ಹರಾಜು ಮೂಲಕವೇ ಕ್ರಮವಹಿಸಲು ಆದೇಶವಿರುತ್ತದೆ.

ಈ ಹಿನ್ನೆಲೆಯಲ್ಲಿ ಪಾಲಿಕೆ ಸ್ವತ್ತನ್ನು ಹರಾಜು ಮೂಲಕ ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-04-2012ರ ಟಿಪ್ಪಣಿ ಹಾಗೂ ದಿನಾಂಕ:11-04-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ಪಾಲಿಕೆ ಸ್ವತ್ತನ್ನು ಹರಾಜು ಮೂಲಕ ಕ್ರಯ ಮಾಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಮಾನ್ಯ ಆಯುಕ್ತರ ದಿನಾಂಕ:11-04-2012ರ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯ ನಿರ್ಣಯದಂತೆ ಮರುಪರಿಶೀಲಿಸಿ, ಸದರಿ 720 ಚದರ ಅಡಿ ಖಾಲಿ ನಿವೇಶನವನ್ನು ಬಹಿರಂಗ ಹರಾಜು ಮೂಲಕ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17–07–2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 28 (116) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಅರ್ಜಿದಾರರಾದ ಮುನಿಯಮ್ಮ ಎಂಬುವವರ ಮಾವನವರಾದ ಶ್ರೀ.ಲಕ್ಷ್ಮಣ್ ಎಂಬುವವರು 1960ರ ಹಿಂದೆ ಪಾಲಿಕೆಯಲ್ಲಿ ಗ್ಯಾಂಗ್‌ಮೆನ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಬಿನ್ನಿಮಿಲ್‌ನ ಹತ್ತಿರ ದೊಡ್ಡ ಚರಂಡಿಯ ಪಾಯ ತೆಗೆಯುತ್ತಿರುವ ಸಂದರ್ಭದಲ್ಲಿ ಮಣ್ಣು ಕುಸಿದು ಮರಣ ಹೊಂದಿದ್ದ ಪ್ರಯುಕ್ತ ಪರಿಹಾರವಾಗಿ ಆತನ ಹೆಂಡತಿಯಾದ ಶ್ರೀಮತಿ.ಚೆನ್ನಮ್ಮ ರವರ ಹೆಸರಿಗೆ 20X30=600 ಚದರ ಅಡಿಗಳ ಖಾಲಿ ನಿವೇಶನವನ್ನು ಹಂಚಿಕೆ ಮಾಡಿ, ನಿವೇಶನದ ಬೆಲೆ ರೂ.480/- ಗಳನ್ನು ಪಾವತಿ ಮಾಡುವಂತೆ ಪಾಲಿಕೆ ವತಿಯಿಂದ 1967 ರಲ್ಲೇ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ಆ ಸಂದರ್ಭದಲ್ಲಿ ನಿವೇಶನದ ಮೊತ್ತವನ್ನು ಪಾವತಿ ಮಾಡಲು ಸಾಧ್ಯವಾಗದ ಕಾರಣ ಸದರಿ ನಿವೇಶನವನ್ನು ವಾರ್ಷಿಕ ನೆಲಬಾಡಿಗೆ ವರ್ಷಕ್ಕೆ ರೂ.5/-ಗಳ ಆಧಾರದ ಮೇಲೆ 1967 ರಿಂದ 1997 ರವರೆಗೆ 30 ವರ್ಷಗಳಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ನಿವೇಶನದಲ್ಲಿ ಹಂಚಿಕೆದಾರರು ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದು, ದಿನಾಂಕ:25-05-1988 ರಂದು ನಿವೇಶನದ ಮೊತ್ತವನ್ನು ಪಾವತಿ ಮಾಡಿರುತ್ತಾರೆ.

ಅರ್ಜಿದಾರರ ಅತ್ತೆಯವರಾದ ಚೆನ್ನಮ್ಮ ರವರು ಮರಣ ಹೊಂದಿದ್ದು, ಆಕೆಯ ಮಗನಾದ ಶ್ರೀ.ಎಲ್.ಸುಬ್ರಮಣಿ ರವರು ಪಾಲಿಕೆಯಲ್ಲಿ ಪೌರ ಕಾರ್ಮಿಕನಾಗಿ ಕೆಲಸ ನಿರ್ವಹಿಸುತ್ತಿದ್ದು, ಪ್ರಸ್ತಾಪಿತ ಮನೆಯಲ್ಲಿ ವಾಸ ಮಾಡುತ್ತಾ ಬಂದಿರುತ್ತಾರೆ, ಆತನು ಸಹ ದಿನಾಂಕ:01-10-1988 ರಂದು ನಿಧನ ಹೊಂದಿದ್ದು, ಸುಬ್ರಮಣಿ ಇವರ ಪತ್ನಿಯಾದ ಮುನಿಯಮ್ಮ (ಅರ್ಜಿದಾರರು) ಅರ್ಜಿಯನ್ನು ಸಲ್ಲಿಸಿ, ಸದರಿ ನಿವೇಶನದ ಗುತ್ತಿಗೆಯನ್ನು ವರ್ಗಾಯಿಸಲು ಅಥವಾ ನವೀಕರಿಸುವ ಬಗ್ಗೆ ಕೋರಿದ್ದರ ಮೇರೆಗೆ ದಿನಾಂಕ:31-12-2001 ರಂದು ವಲಯ ಉಪ ಆಯುಕ್ತರವರ ಕಛೇರಿಯಿಂದ ಸ್ಥಾಯಿ ಸಮಿತಿಗಳು ಹಾಗೂ ನಗರ ಪಾಲಿಕೆಯ ನಿರ್ಣಯದಲ್ಲಿ ಮುನಿಯಮ್ಮನ ಹೆಸರಿಗೆ ವರ್ಗಾಯಿಸಿ ನವೀಕರಿಸಲು ತೀರ್ಮಾನಿಸಲಾಗಿರುತ್ತದೆ. ಗುತ್ತಿಗೆ ಅವಧಿಯನ್ನು ಎಷ್ಟು ಅವಧಿಗೆ ನವೀಕರಿಸಬೇಕು ಮತ್ತು ಗುತ್ತಿಗೆಯ ಹಣವನ್ನು ಎಷ್ಟು ನಿಗಧಿಪಡಿಸಬೇಕೆಂಬುದರ ಬಗ್ಗೆ ಪ್ರಸ್ತಾಪ ಇರುವುದಿಲ್ಲ.

ದಿನಾಂಕ:24-10-2011 ರಂದು ಪ್ರಸ್ತುತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದ್ದು, ಇದು ಹೆಂಚಿನ ಮನೆ ಆಗಿರುತ್ತದೆ. ಸದರಿ ಸ್ಥಳವನ್ನು 1961 ರಿಂದ ಗುತ್ತಿಗೆ ಆಧಾರದ ಮೇಲೆ ನೀಡಿದ್ದು, ಮೊದಲಿಗೆ ಈ ಸ್ವತ್ತನ್ನು ಶ್ರೀ. ಸುಬ್ರಮಣಿಯವರಿಗೆ ನೀಡಿದ್ದು, ಇವರು ಮರಣ ಹೊಂದಿದ ನಂತರ ಇವರ ಪತ್ನಿಯಾದ ಶ್ರೀಮತಿ. ಮುನಿಯಮ್ಮ ರವರು ಹಾಲಿ ವಾಸವಾಗಿದ್ದು, ಅವರ ಹೆಸರಿಗೆ ಗುತ್ತಿಗೆ ನವೀಕರಿಸುವಂತೆ ಕೋರಿರುತ್ತಾರೆ. ಈ ಮನೆಯು ಭಂಗಿ ಕಾಲೋನಿಯಲ್ಲಿ ಇದ್ದು, ಸಾರ್ವಜನಿಕರು ಉಪಯೋಗಿಸಲು ಯೋಗ್ಯವಾಗಿರುವುದಿಲ್ಲ. ಗುತ್ತಿಗೆ ಮುಂದುವರಿಸಿದ್ದಲ್ಲಿ, ಗುತ್ತಿಗೆ ಮೊತ್ತ ಪಾವತಿ ಮಾಡಲು ಅರ್ಜಿದಾರರು ಒಪ್ಪಿರುತ್ತಾರೆ. ಹಿಂದಿನ ಆಡಳಿತಗಾರರು ಕೈಗೊಂಡ ತೀರ್ಮಾನದಂತೆ the lease being heritable but not transferable ಎಂಬುದಾಗಿರುತ್ತದೆ.

ಪ್ರಸ್ತುತ ಜಾಗದ ವಿಸ್ತೀರ್ಣವು 20X30=600 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21-09-2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರವು ಚದರ ಅಡಿ ಒಂದಕ್ಕೆ ರೂ.1800/- ಗಳಿದ್ದು, ಇದರಂತೆ ಲೆಕ್ಕಾಚಾರ ಮಾಡಲಾಗಿ, 1800x600=ರೂ.10,80,000/- ಗಳಾಗುತ್ತದೆ. ಶೇ.10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.1,08,000/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.9,000/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ.ಮುನಿಯಮ್ಮ, ಇವರ ಹೆಸರಿಗೆ ಪ್ರಸ್ತಾಪಿತ ಜಾಗದ ಗುತ್ತಿಗೆ ಕರಾರು ನೊಂದಾಯಿಸುವ ದಿನಾಂಕದಿಂದ 5 ವರ್ಷದ ಅವಧಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 08-12-2011ರ ಟಿಪ್ಪಣಿ ಹಾಗೂ ಮಾನ್ಯ ಆಯುಕ್ತರ ದಿನಾಂಕ:08-12-2011ರ ಟಿಪ್ಪಣಿಯನ್ನು ಮಾರ್ಪಡಿಸಿ, ಸದರಿಯವರಿಗೆ 1967ರಲ್ಲಿ ಈ ನಿವೇಶನವನ್ನು ಹಂಚಿಕೆ ಮಾಡಿ ರೂ.480/- ಗಳನ್ನು ಪಾವತಿಸಲು ನೋಟಿಸ್‌ನ್ನು ಜಾರಿ ಮಾಡಲಾಗಿತ್ತು. ಆದರೆ ಸದರಿಯವರು ಈ ಮೊತ್ತವನ್ನು ಪಾವತಿ ಮಾಡಲು ಸಾಧ್ಯವಾಗದ ಕಾರಣ ಇಲ್ಲಿಯವರೆಗೆ ಗುತ್ತಿಗೆ ಆಧಾರದ ಮೇಲೆ ನಿವೇಶನವನ್ನು ಪಡೆದು ವಾಸವಿರುತ್ತಾರೆ. ಮಾನವೀಯತೆಯ ದೃಷ್ಟಿಯಿಂದ ಶ್ರೀಮತಿ.ಮುನಿಯಮ್ಮರವರ ಹೆಸರಿಗೆ ಸದರಿ 20X30=600 ಚದರ ಅಡಿಗಳ ಸ್ವತ್ತನ್ನು ಕ್ರಯಕ್ಕೆ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 24-01-2012ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 24-01-2012ರ ನಿರ್ಣಯವನ್ನು ಒಪ್ಪುತ್ತಾ, ಸದರಿ ಸ್ವತ್ತನ್ನು ಶ್ರೀಮತಿ.ಚೆನ್ನಮ್ಮ ಎಂಬುವವರಿಗೆ ಇವರ ಪತಿಯಾದ ಶ್ರೀ ಲಕ್ಷ್ಮಣ್ ರವರು ನಗರ ಪಾಲಿಕೆಯಲ್ಲಿ ಗ್ಯಾಂಗ್‌ಮೆನ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಮಣ್ಣು ಕುಸಿದು ಮರಣ ಹೊಂದಿದ್ದ ಪ್ರಯುಕ್ತ ಪರಿಹಾರವಾಗಿ ನೀಡಲಾದ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ಅರ್ಜಿದಾರರ ವಂಶಜರು ಸುಮಾರು 45 ವರ್ಷಗಳಿಂದ ಅನುಭವಿಸುತ್ತಾ ಬಂದಿರುತ್ತಾರೆ. ಸದರಿ ಸ್ವತ್ತಿಗಾಗಿ ನಿಗಧಿಪಡಿಸಿದ್ದ ರೂ.480/- ಗಳನ್ನು ಸಹ ತಡವಾಗಿ ಅಂದರೆ ದಿನಾಂಕ:22-05-1998 ರಂದು ನಗರ ಪಾಲಿಕೆಗೆ ಪಾವತಿಸಿರುತ್ತಾರೆ. ಸದರಿ ಸ್ವತ್ತು ಕೊಳಚೆ ಪ್ರದೇಶಕ್ಕೆ ಸೇರಿದ್ದು, ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ವಿಧವೆಯಾಗಿರುತ್ತಾರೆ. ಈ ಮೇಲಿನ ಎಲ್ಲಾ ವಿಷಯಗಳನ್ನು ಮಾನವೀಯ ದೃಷ್ಟಿಯಿಂದ ಪರಿಗಣಿಸಿ ಸದರಿ ಸ್ವತ್ತಿರುವ ಪ್ರದೇಶದಲ್ಲಿನ ಅಕ್ಕಪಕ್ಕದ ಆಸ್ತಿಗಳನ್ನು ಯಾವ ಆಧಾರದ ಮೇಲೆ ಪರಭಾರೆ ಮಾಡಲಾಗಿದೆಯೋ ಅದೇ ನಿಯಮಗಳ ಅಡಿಯಲ್ಲಿ ಬೆಲೆಯನ್ನು ನಿಗಧಿಪಡಿಸಿ ಕ್ರಯಕ್ಕೆ ನೀಡುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ದಿನಾಂಕ:08-12-2011ರ ಮಾನ್ಯ ಆಯುಕ್ತರ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯ ನಿರ್ಣಯದಂತೆ ಮರುಪರೀಶಿಲಿಸಿ, ಸದರಿಯವರು ಸುಮಾರು 45 ವರ್ಷಗಳಿಂದ ಈ ಸ್ವತ್ತಿನಲ್ಲಿ ಗುತ್ತಿಗೆ ಆಧಾರದ ಮೇಲೆ ನಿವೇಶನವನ್ನು ಪಡೆದು ವಾಸವಿರುತ್ತಾರೆ. ಮಾನವೀಯತೆಯ ದೃಷ್ಟಿಯಿಂದ ಶ್ರೀಮತಿ. ಮುನಿಯಮ್ಮ ರವರ ಹೆಸರಿಗೆ ಸದರಿ 20x30=600 ಚದರ ಅಡಿಗಳ ಸ್ವತ್ತನ್ನು ಕ್ರಯಕ್ಕೆ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

**(ಡಿ. ವೆಂಕಟೇಶ್ ಮೂರ್ತಿ)**
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 30 (119) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ:172, ಅತ್ತಿಗುಪ್ಪೆ ವ್ಯಾಪ್ತಿಯ ಇಂದಿರಾ ಕಾಲೋನಿ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಫಲಾನುಭವಿಗಳು ಸುಮಾರು ವರ್ಷಗಳಿಂದ ವಾಸ ಮಾಡುತ್ತಿದ್ದು, ನಾಗರೀಕ ಸೌಲಭ್ಯಗಳನ್ನು ಹೊಂದಿದ್ದು, ಪಾಲಿಕೆ ವತಿಯಿಂದ ಹಕ್ಕುಪತ್ರ ನೀಡುವ ವಿಷಯವಾಗಿರುತ್ತದೆ.

ವಲಯಾಧಿಕಾರಿಗಳು ಪರಿಶೀಲನೆ ನಡೆಸಿ, ಇಂದಿರಾ ಕಾಲೋನಿ ಘೋಷಿತ ಕೊಳಚೆ ಪ್ರದೇಶವಾಗಿದ್ದು, ಇದರಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಹುಡ್ಕೋ ಯೋಜನೆಯಡಿ 40 ಮನೆ ನಿರ್ಮಿಸಿ ಹಂಚಿಕೆ ಮಾಡಿದ್ದು, ಇದನ್ನು ಹೊರತುಪಡಿಸಿ, ಇಲ್ಲಿ ಒಟ್ಟು 141 ಫಲಾನುಭವಿಗಳು ವಾಸ ಮಾಡುತ್ತಿರುತ್ತಾರೆ. ಇದರಲ್ಲಿನ 28 ಮಂದಿ ಫಲಾನುಭವಿಗಳ ಪೈಕಿ 12 ಮಂದಿ ಜಿ.ಪಿ.ಎ. ಮೂಲಕ ಕ್ರಯಕ್ಕೆ ನೀಡಿದ್ದು, 5 ಮಂದಿ ಮರಣ ಹೊಂದಿದ್ದು ಮತ್ತು 11 ಮಂದಿ ಭಾವಚಿತ್ರ, ಸೂಕ್ತ ದಾಖಲೆ ಒದಗಿಸಿರುವುದಿಲ್ಲವಾದುದರಿಂದ, ಇದರಲ್ಲಿನ 113 ಜನ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವ ಪ್ರಸ್ತಾವನೆಯನ್ನು ಆದೇಶಕ್ಕಾಗಿ ಸಲ್ಲಿಸಿರುತ್ತಾರೆ ಹಾಗೂ ಸ್ಥಳೀಯ ಪಾಲಿಕೆ ಸದಸ್ಯರು, ಇಲ್ಲಿ ಸಂಪೂರ್ಣ ಮನೆಗಳು ನಿರ್ಮಾಣವಾಗಿದ್ದು, ಬಹುಮಹಡಿ ಕಟ್ಟಲು ಸ್ಥಳ ಇರುವುದಿಲ್ಲ. ಈ ಮನೆಗಳಿಗೆ ಹಕ್ಕುಪತ್ರ ನೀಡಿ ಆಸ್ತಿ ತೆರಿಗೆ ಕ್ರೋಢಿಕರಿಸಬಹುದಾಗಿರುವುದರಿಂದ ಹಕ್ಕುಪತ್ರ ನೀಡಲು ಕೋರಿರುತ್ತಾರೆ.

ಈ ಹಿಂದೆ ಕೊಳಚೆ ಪ್ರದೇಶಗಳಲ್ಲಿ ಹಕ್ಕುಪತ್ರ ನೀಡುವ ಸಂಬಂಧ ಇದ್ದ ಸರ್ಕಾರಿ ಆದೇಶದಲ್ಲಿ ಪ್ರತಿ ಚದರ ಗಜ 1ಕ್ಕೆ ರೂ.200/- ನಂತೆ ವಸೂಲಿ ಮಾಡಿ ನೀಡಬೇಕೆಂದಿತ್ತು. ಕೇಂದ್ರ ಸರ್ಕಾರದ ಆದೇಶದಂತೆ ಬಹುಮಹಡಿ ಕಟ್ಟಡಗಳನ್ನು ಕಟ್ಟಿ ನಿರ್ಮಿತ ಮನೆಗಳಿಗೆ ಹಕ್ಕುಪತ್ರ ನೀಡಬೇಕೆಂದು ಇರುವ ಆದೇಶದ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ಹಕ್ಕುಪತ್ರ ನೀಡಲು ಇದ್ದ ಆದೇಶವನ್ನು ಹಿಂಪಡೆದಿರುತ್ತದೆ. ಈ ಬಗ್ಗೆ ವಸತಿ ಸಚಿವರು ಹಕ್ಕುಪತ್ರ ನೀಡುವ ಸಂಬಂಧ ಈ ಹಿಂದೆ ಇದ್ದ ಆದೇಶವನ್ನು ಪುನರ್ ಜಾರಿ ಮಾಡುವ ಸಂಬಂಧ ಪ್ರಧಾನ ಕಾರ್ಯದರ್ಶಿಗಳು, ವಸತಿ ಇಲಾಖೆರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ವರದಿ ನೀಡಲು ಕೋರಿರುತ್ತಾರೆ. ಕೊಳಚೆ ಪ್ರದೇಶಗಳಲ್ಲಿ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರಿ ಆದೇಶ ಬಂದಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಈ ಪ್ರದೇಶದಲ್ಲಿನ 113 ಜನ ನಿವಾಸಿಗಳಿಗೆ ಹಕ್ಕುಪತ್ರ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:17-02-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06.03.2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 11-04-2012ರ ನಿರ್ಣಯ ಹಾಗೂ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ: 29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯ ಹಾಗೂ ಮಾನ್ಯ ವಿಶೇಷ ಆಯುಕ್ತರ ದಿನಾಂಕ:17-02-2012ರ ಟಿಪ್ಪಣಿಯನ್ನು ಕೌನ್ಸಿಲ್ ನಿರ್ಣಯದಂತೆ ಮರು ಪರಿಶೀಲಿಸಿ, ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಫಲಾನುಭವಿಗಳು ಕನಿಷ್ಠ 15 ವರ್ಷ ಯಾರಿಗೂ ಮಾರಾಟ ಮಾಡದಂತೆ ಷರತ್ತಿಗೆ ಒಳಪಡಿಸಿ ಹಕ್ಕುಪತ್ರ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯ.

.................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 32 (167) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೇಂದ್ರ ಪರಿಹಾರ ಸಮಿತಿಯು ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಕರ್ನಾಟಕ ಭಿಕ್ಷಾಟನಾ ನಿಷೇಧ ಕಾಯಿದೆ-1976 ಸೆಕ್ಷನ್ (3) ರ ಪ್ರಕಾರ ರಾಜ್ಯದಲ್ಲಿ ಭಿಕ್ಷಾಟನೆಯನ್ನು ನಿಷೇಧಿಸಲಾಗಿದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಅಗತ್ಯವಿದ್ದು, ಭಿಕ್ಷಾಟನೆಯನ್ನು ಪ್ರೋತ್ಸಾಹಿಸದಂತೆ ಹಾಗೂ ಭಿಕ್ಷೆಯನ್ನು ನೀಡದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಈ ಕೆಳಕಂಡ ಸ್ಥಳಗಳಲ್ಲಿ 10 ಅಡಿ ಉದ್ದ ಮತ್ತು 12 ಅಡಿ ಅಗಲದ ಜಾಹೀರಾತು ಫಲಕಗಳನ್ನು ಅಳವಡಿಸಲು ಸ್ಥಳಾವಕಾಶಕ್ಕೆ ಅನುಮತಿ ನೀಡುವಂತೆ ಕೋರಿರುತ್ತಾರೆ.

| ಕ್ರ ಸಂ | ಸ್ಥಳಗಳ ವಿವರ | ಕ್ರ ಸಂ | ಸ್ಥಳಗಳ ವಿವರ |
|---|---|---|---|
| 1 | ಜಾಲಹಳ್ಳಿ ಕ್ರಾಸ್, ಜಾಲಹಳ್ಳಿ, ತುಮಕೂರು ರಸ್ತೆ | 16 | ವಸಂತನಗರ ಸರ್ಕಲ್ (ಅಂಬೇಡ್ಕರ್ ಭವನದ ಮುಂದೆ) |
| 2 | ಕೋರಮಂಗಲ ಬಸ್ ನಿಲ್ದಾಣ | 17 | ಬಿ.ಎಂ.ಟಿ.ಸಿ. ಬಸ್ ಸ್ಟ್ಯಾಂಡ್, ಶಾಂತಿನಗರ |
| 3 | ಪದ್ಮನಾಭನಗರದ ಹೆಚ್.ಡಿ.ದೇವೇಗೌಡ ಪೆಟ್ರೋಲ್ ಬಂಕ್ ಸಿಗ್ನಲ್ ಹತ್ತಿರ | 18 | ಮೈಸೂರು ರಸ್ತೆ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ |
| 4 | ಅಣ್ಣಮ್ಮ ದೇವಸ್ಥಾನದ ಮುಂದೆ | 19 | ಹೆಬ್ಬಾಳ ಸರ್ಕಲ್ |
| 5 | ಕಲಾಸಿಪಾಳ್ಯ ಬಸ್ ನಿಲ್ದಾಣ | 20 | ಸಜ್ಜನ್‌ರಾವ್ ಸರ್ಕಲ್ ಮುಂದೆ |
| 6 | ಮೈಸೂರು ಬ್ಯಾಂಕ್ ವೃತ್ತ | 21 | ಗವಿ ಗಂಗಾಧರೇಶ್ವರ ದೇವಸ್ಥಾನದ ಮುಂದೆ |
| 7 | ಕಾರ್ಪೋರೇಷನ್ ಸರ್ಕಲ್ | 22 | ಬಿ.ಇ.ಎಲ್. ಸರ್ಕಲ್ |
| 8 | ಮಹಾತ್ಮ ಗಾಂಧಿ ರಸ್ತೆ | 23 | ಬೆಂಗಳೂರು ರೈಲ್ವೆ ನಿಲ್ದಾಣ |
| 9 | ಬ್ರಿಗೇಡ್ ರಸ್ತೆ | 24 | ಮೆಜೆಸ್ಟಿಕ್ ಬಸ್ ನಿಲ್ದಾಣ |
| 10 | ಲಾಲ್‌ಬಾಗ್ ಮುಖ್ಯದ್ವಾರ | 25 | ಯಲಹಂಕ ಬಸ್ ಸ್ಟ್ಯಾಂಡ್ |
| 11 | ಜಯನಗರ ಬಸ್ ನಿಲ್ದಾಣ | 26 | ಕೋರಮಂಗಲ ಫೋರಂ |
| 12 | ಇಸ್ಕಾನ್ ದೇವಾಲಯ/ಆಂಜನೇಯ ಸ್ವಾಮಿ ದೇವಸ್ಥಾನ, ಮಹಾಲಕ್ಷ್ಮೀ ಲೇಔಟ್ | 27 | ಶಾಸಕರ ಭವನದ ಮುಂದೆ |
| 13 | ರಾಗಿಗುಡ್ಡ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ | 28 | ಸೆಂಟ್ರಲ್ ಸಿಲ್ಕ್ ಬೋರ್ಡ್ |
| 14 | ಡೈರಿ ಸರ್ಕಲ್ ಸಿಗ್ನಲ್ ಮುಂದೆ | 29 | ಹೆಚ್.ಎಸ್.ಆರ್. ಲೇಔಟ್ ಸರ್ಕಲ್ ಸಿಗ್ನಲ್ |
| 15 | ಶಿವಾಜಿನಗರ ಚರ್ಚ್ ಮುಂದೆ | 30 | ಕೆ.ಆರ್.ಸರ್ಕಲ್ |

ನಗರದಲ್ಲಿ ದಿನೇ ದಿನೇ ಭಿಕ್ಷುಕರ ಸಂಖ್ಯೆ ಹೆಚ್ಚುತ್ತಿದೆ ಎಂದು ದೂರುಗಳು ಬರುತ್ತಿರುವ ಹಿನ್ನಲೆಯಲ್ಲಿ, ಭಿಕ್ಷಾಟನಾ ನಿಷೇಧ ಕಾಯಿದೆ ಜಾರಿಯಲ್ಲಿರುವ ಕುರಿತು ಸಾರ್ವಜನಿಕರ ಗಮನಕ್ಕೆ ತರಲು ಜನನಿಬಿಡ ಪ್ರದೇಶಗಳಲ್ಲಿ ಫಲಕಗಳನ್ನು ಅಳವಡಿಸುವುದು ಸೂಕ್ತವಾದ್ದರಿಂದ ಈ ಮೇಲ್ಕಂಡ 30 ಸ್ಥಳಗಳಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

.................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮೇಲ್ಕಂಡ ಸ್ಥಳಗಳಲ್ಲಿ ಉಚಿತವಾಗಿ ಫಲಕಗಳನ್ನು ಅಳವಡಿಸಲು ಅನುಮತಿ ನೀಡುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 26-04-2012ರ ಟಿಪ್ಪಣಿ ಹಾಗೂ ದಿನಾಂಕ:26-04-2012ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ, ಬಿಕ್ಷಾಟನೆ ನಿರ್ಮೂಲನೆ ಮಾಡಲು ಸಾರ್ವಜನಿಕ ಸ್ಥಳಗಳಲ್ಲಿ 10'x12' ಅಡಿಗಳಿಗೆ ಬದಲಾಗಿ 3'x3' ಅಡಿಯ ಜಾಹೀರಾತು ಫಲಕಗಳನ್ನು ಅಳವಡಿಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-06-2012ರ ನಿರ್ಣಯವನ್ನು ಒಪ್ಪುತ್ತಾ, 30 ಸ್ಥಳಗಳ ಬದಲಾಗಿ 15 ಸ್ಥಳಗಳಲ್ಲಿ ಫಲಕಗಳನ್ನು ಅಳವಡಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05-06-2012ರ ನಿರ್ಣಯವನ್ನು ಒಪ್ಪುತ್ತಾ, 30 ಸ್ಥಳಗಳ ಬದಲಾಗಿ 15 ಸ್ಥಳಗಳಲ್ಲಿ ಫಲಕಗಳನ್ನು ಅಳವಡಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 33 (123) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ ಬ್ರಿಗೇಡ್ ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಅಸೋಸಿಯೇಷನ್‌ರವರಿಗೆ ಬ್ರಿಗೇಡ್ ರಸ್ತೆಯಲ್ಲಿ ಎಂ.ಜಿ ರಸ್ತೆಯಿಂದ ರೆಕ್ಸ್ ಚಿತ್ರಮಂದಿರದವರೆಗೂ ಪಾವತಿ ಮತ್ತು ನಿಲುಗಡೆ ಸ್ಥಳದಲ್ಲಿ ನಿಲುಗಡೆ ಶುಲ್ಕ ವಸೂಲು ಮಾಡಲು ಟೆಂಡರ್ ಮುಖಾಂತರ ಕರಾರು ಮಾಡಿಕೊಂಡಿದ್ದು, ದಿನಾಂಕ:01-12-2009 ರಿಂದ 30-11-2010 ರವರೆಗೂ ಒಂದು ವರ್ಷ ಪೂರ್ಣಗೊಳಿಸಿದ್ದು, ಮೆ॥ ಬ್ರಿಗೇಡ್ ಎಸ್ಟಾಬ್ಲಿಷ್‌ಮೆಂಟ್ ಸಂಸ್ಥೆಯವರು ದಿನಾಂಕ:01-09-2009 ರಿಂದ ಯಶಸ್ವಿ ಬಿಡ್‌ದಾರರಾಗಿ ಪ್ರತಿ ತಿಂಗಳಿಗೆ ರೂ.2,25,000/- ರಂತೆ ಇದುವರೆವಿಗೂ ಮಾನ್ಯ ಆಯುಕ್ತರ ಖಾತೆಗೆ ರೂ. 51,75,000/-ಗಳನ್ನು ಜಮಾ ಮಾಡಿರುತ್ತಾರೆ. ಅಂದರೆ ದಿನಾಂಕ:01-12-2009 ರಿಂದ 30-11-2011 ರವರೆಗೆ ಪಾರ್ಕಿಂಗ್ ಶುಲ್ಕವನ್ನು ಪಾವತಿಸಿರುತ್ತಾರೆ. ದಿನಾಂಕ:30-11-2011ಕ್ಕೆ 2 ವರ್ಷ ಅವಧಿ ಪೂರ್ಣಗೊಂಡಿದ್ದು, ಸದರಿ ಸಂಸ್ಥೆಯವರು ಮುಂದಿನ ಒಂದು ವರ್ಷಕ್ಕೆ ಅಂದರೆ ದಿನಾಂಕ:01-12-2011 ರಿಂದ 30-11-2012 ರವರೆಗೆ ನವೀಕರಿಸಲು ಅನುಮತಿ ಕೋರಿ ದಿನಾಂಕ: 10-10-2011 ರಂದು ಅರ್ಜಿ ನೀಡಿರುತ್ತಾರೆ. ಮುಂದುವರೆದಂತೆ ಸದರಿ ಸಂಸ್ಥೆಯವರ ಸೇವೆಯು ತೃಪ್ತಿಕರವಾಗಿರುವುದರಿಂದ ಟೆಂಡರ್ ಕರಾರು ಪತ್ರದ ದಿನಾಂಕ:01-12-2009ರ ಪ್ರಕಾರ ಮುಂದಿನ ವರ್ಷಕ್ಕೆ ನವೀಕರಿಸಲು ಅಥವಾ ಹೊಸದಾಗಿ ಟೆಂಡರ್ ಕರೆಯುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-12-2011ರ ಟಿಪ್ಪಣಿ ಹಾಗೂ ಮಾನ್ಯ ಆಯುಕ್ತರ ದಿನಾಂಕ:21-12-2011ರ ಟಿಪ್ಪಣಿಯನ್ನು ಪರಿಶೀಲಿಸಿ, ಮೆ॥ ಬ್ರಿಗೇಡ್ ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಅಸೋಸಿಯೇಷನ್‌ರವರಿಗೆ ಬ್ರಿಗೇಡ್ ರಸ್ತೆಯಲ್ಲಿ ಎಂ.ಜಿ ರಸ್ತೆಯಿಂದ ರೆಕ್ಸ್ ಚಿತ್ರಮಂದಿರದವರೆಗೂ ಪಾವತಿ ಮತ್ತು ನಿಲುಗಡೆ ಸ್ಥಳದಲ್ಲಿ ನಿಲುಗಡೆ ಶುಲ್ಕ ವಸೂಲು ಮಾಡಲು ದಿನಾಂಕ: 01-12-2011 ರಿಂದ 30-11-2012 ರವರೆಗೆ ಟೆಂಡರ್ ಕರಾರು ಪತ್ರದ ದಿನಾಂಕ:01-12-2009ರ ಪ್ರಕಾರ ಮುಂದಿನ ಒಂದು ವರ್ಷಕ್ಕೆ ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:07-02-2012ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:07-02-2012ರ ನಿರ್ಣಯವನ್ನು ಮಾರ್ಪಡಿಸುತ್ತಾ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಹೊಸದಾಗಿ ಟೆಂಡರ್ ಕರೆಯುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-04-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪರಿಶೀಲನೆಗಾಗಿ ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಳುಹಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪರಿಶೀಲನೆಗಾಗಿ ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 34 (168) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ರಾಜ್ಯ ದಲಿತ ಕ್ರಿಯಾ ಸಮಿತಿ (ರಿ), ರಾಜ್ಯ ಸಮಿತಿ, ಬೆಂಗಳೂರು ರವರು ಮನವಿ ಸಲ್ಲಿಸಿ, ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆ ಪ್ರಾಂಗಣದ ಸುತ್ತಮುತ್ತ ಬಡ ದಲಿತ, ಹಿಂದುಳಿದ, ಅಲ್ಪ ಸಂಖ್ಯಾತರು ಫುಟ್‌ಪಾತ್‌ನಲ್ಲಿ ವ್ಯಾಪಾರಸ್ಥರನ್ನು ಏಕಾಏಕಿ ತೆರವುಗೊಳಿಸಿದ್ದು, ಈ ಹಿನ್ನಲೆಯಲ್ಲಿ ವ್ಯಾಪಾರಸ್ಥರು 10 ರಿಂದ 15 ವರ್ಷಕ್ಕಿಂತಲೂ ಹೆಚ್ಚಾಗಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿರುವುದರಿಂದ ಬಡವರು ತಾತ್ಕಾಲಿಕವಾಗಿ ಯಥಾಸ್ಥಿತಿ ಮುಂದುವರೆಸಿಕೊಂಡು ಹೋಗಲು ಮಾನವೀಯ ಮೌಲ್ಯಾದಾರಗಳಡಿಯಲ್ಲಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಮಾನ್ಯ ಆಯುಕ್ತರವರ ದಿನಾಂಕ:18-01-2011 ಮತ್ತು ದಿನಾಂಕ:14-07-2011ರ ಟಿಪ್ಪಣಿಯಲ್ಲಿ ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆಯ ಪಾದಚಾರಿ ರಸ್ತೆಯಲ್ಲಿ ಫುಟ್‌ಪಾತ್ ವ್ಯಾಪಾರಸ್ಥರು ಸುಮಾರು 400-500 ಮಂದಿ ವ್ಯಾಪಾರ ಮಾಡುತ್ತಿದ್ದು, ಪಾದಚಾರಿಯ ರಸ್ತೆಯಲ್ಲಿ ಓಡಾಡಲು ಸ್ಥಳವನ್ನು ಬಿಟ್ಟು ಉಳಿದ ಜಾಗದಲ್ಲಿನ 4x5 ಅಡಿಗಳ ಜಾಗವನ್ನು ಚೌಕಕಾರವಾಗಿ ವಿಂಗಡಿಸಿ ಪ್ರತಿ ಜಾಗಕ್ಕೂ ಕ್ರಮ ಸಂಖ್ಯೆ ನೀಡಿ ಮೊದಲು ಬಂದವರಿಗೆ ಮೊದಲ ಆದ್ಯತೆ ಅನ್ವಯ ಟೋಕನ್ ಪದ್ಧತಿ ಅಳವಡಿಸಿ, ಬೆಳಿಗ್ಗೆ 8.30 ರಿಂದ ರಾತ್ರಿ 8.30 ರವರೆಗೆ ತಲಾ ರೂ.20/- ಗಳಂತೆ ದರ ನಿಗಧಿಪಡಿಸಿದ್ದಲ್ಲಿ ಸ್ವಚ್ಛತಾ ನಿರ್ವಹಣಾ ವೆಚ್ಚ ಎಂಬುದಾಗಿ ನಗರ ಪಾಲಿಕೆಗೆ ಲಕ್ಷಾಂತರ ಹಣವು ಬರುವ ಹಿನ್ನಲೆಯಲ್ಲಿ ಮಾರುಕಟ್ಟೆ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯನ್ನು ಮಂಡಿಸಿ ತೀರ್ಮಾನಕ್ಕಾಗಿ ಮಂಡಿಸಲಾಗಿರುತ್ತದೆ.

ಮಾನ್ಯ ಆಯುಕ್ತರವರು ದಿನಾಂಕ:18-05-2011 ರಂದು ನಡೆದ ಸಭೆಯಲ್ಲಿ ಸದರಿ ಮಾರುಕಟ್ಟೆ ಪ್ರದೇಶದಲ್ಲಿ ಅನಧಿಕೃತವಾಗಿ ವ್ಯಾಪಾರ ಮಾಡುತ್ತಿರುವ ವ್ಯಾಪಾರಸ್ಥರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಅದರಂತೆ ಅನಧಿಕೃತ ವ್ಯಾಪಾರಸ್ಥರನ್ನು ತೆರವುಗೊಳಿಸಲಾಗಿರುತ್ತದೆ.

ಈ ಕುರಿತು ಕರ್ನಾಟಕ ರಾಜ್ಯ ದಲಿತ ಕ್ರಿಯಾ ಸಮಿತಿ, (ರಿ) ರವರು ದಿನಾಂಕ:20-06-2011 ರಂದು ಅಧ್ಯಕ್ಷರು, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಬೆಂಗಳೂರು ರವರಿಗೆ, ಅನಧಿಕೃತ ವ್ಯಾಪಾರಸ್ಥರನ್ನು ತೆರವುಗೊಳಿಸಿರುವ ಬಗ್ಗೆ ವರದಿಯನ್ನು ನೀಡಲು ಆಯೋಗದ ಮುಖೇನ ಪತ್ರ ಬರೆಯಲಾಗಿರುತ್ತದೆ.

ಅಧ್ಯಕ್ಷರು, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಬೆಂಗಳೂರು ರವರ ವಿಚಾರಣೆ ದಿನಾಂಕ:08-07-2011, ಪ್ರಕರಣ ಸಂಖ್ಯೆ:11/2011ರ ಆಯೋಗ ನಿರ್ದೇಶನದಲ್ಲಿ ಸದರಿ ಪ್ರಕರಣದ ಬಗ್ಗೆ ನಿರ್ಣಯ ಕೈಗೊಳ್ಳಲು ಮಾರುಕಟ್ಟೆ ಸ್ಥಾಯಿ ಸಮಿತಿಗೆ ಕಳುಹಿಸಿದ್ದು, ಈವರೆವಿಗೂ ಮಾರುಕಟ್ಟೆ ಸ್ಥಾಯಿ ಸಮಿತಿಯು ಯಾವುದೇ ನಿರ್ಣಯವನ್ನು ಕೈಗೊಂಡಿರುವುದಿಲ್ಲ. ನಿರ್ಣಯ ಕೈಗೊಳ್ಳುವವರೆಗೆ ಆಯೋಗದ ನಿರ್ದೇಶನದಂತೆ ಯಥಾಸ್ಥಿತಿಯನ್ನು, ಕಾಯ್ದುಕೊಳ್ಳುವುದು. ಅಲ್ಲದೇ ಹಿಂದಿನಿಂದಲೂ ವ್ಯಾಪಾರ ಮಾಡುತ್ತಾ ಬಂದಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವ್ಯಾಪಾರಸ್ಥರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಟ್ಟಿಸಿರುವ ಮಳಿಗೆಗಳನ್ನು ಹಂಚಿಕೆ ಮಾಡಬೇಕು. ಇಲ್ಲವಾದಲ್ಲಿ ಮಳಿಗೆಯನ್ನು ಹೊಸದಾಗಿ ನಿರ್ಮಾಣ ಮಾಡಿ, ವಿತರಣೆ ಮಾಡಲು ಆಯೋಗವು ಸೂಚಿಸಿರುತ್ತದೆ.

ದಿನಾಂಕ:29-08-2011 ರಂದು ನಡೆದ ಮಾರುಕಟ್ಟೆ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ:ಮಾ.ಸ್ಥಾ.ಸ/11/11-12ರ ನಿರ್ಣಯದಲ್ಲಿ ದಿನಾಂಕ:14-07-2011ರ ಆಯುಕ್ತರ ಟಿಪ್ಪಣಿ ಪರಿಶೀಲಿಸದೆ ಪ್ರಸ್ತಾವನೆಯನ್ನು ಮರು ಪರಿಶೀಲಿಸಿ ಪುನರ್ ಮಂಡಿಸಲು ಸಮಿತಿಯು ತೀರ್ಮಾನಿಸಿತು ಎಂದು ಸೂಚಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ, ಕೂಲಂಕುಷವಾಗಿ ಪರಿಷ್ಕೃತ ಟಿಪ್ಪಣಿಯನ್ನು ಸಮಿತಿಯ ಮುಂದೆ ಪುನರ್ ಮಂಡಿಸಿದೆ.

ಪಾಲಿಕೆಗೆ ಸಂಬಂಧಿಸಿದ ಮಾರುಕಟ್ಟೆಗಳಲ್ಲಿ ಮಳಿಗೆಗಳನ್ನು ಹಂಚಿಕೆ ಮಾಡುವ ವಿಧಿ ವಿಧಾನದ ಬಗ್ಗೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ-1976 ರಲ್ಲಿ ಪ್ರತ್ಯೇಕ ನಿಯಮ ಅಥವಾ ಬೈಲಾಗಳನ್ನು ರಚಿಸಿರುವುದು ಕಂಡು ಬಂದಿರುವುದಿಲ್ಲ. ಆ ಕಾಯ್ದೆಯು ಕಲಂ-176ರಲ್ಲಿ ವಿವರಿಸಿರುವಂತೆ ಪಾಲಿಕೆಯ ಸ್ವತ್ತನ್ನು ಗುತ್ತಿಗೆ ಆಧಾರದ ಮೇಲೆ 1 ವರ್ಷದ ಅವಧಿಗೆ ಆಯುಕ್ತರು, 3 ವರ್ಷದ ಅವಧಿಗೆ ಸ್ಥಾಯಿ ಸಮಿತಿ, 5 ವರ್ಷದ ಅವಧಿಗೆ ಪಾಲಿಕೆಯು, 5 ವರ್ಷಕ್ಕೆ ಮೇಲ್ಪಟ್ಟ ಅವಧಿಗೆ ಸರ್ಕಾರದ ಪೂರ್ವಾನುಮೋದನೆ ಅತ್ಯವಶ್ಯಕ ಎಂಬುದಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ನಇ 129 ಟಿಎಂಡಿ 2002, ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡಬೇಕೆಂದಿದೆ.

ಇದರ ಹೊರತು ಕರ್ನಾಟಕ ಪಾರದರ್ಶಕ ಕಾಯ್ದೆ ಅನ್ವಯ ಮಳಿಗೆಗಳನ್ನು ಬಹಿರಂಗವಾಗಿ ಟೆಂಡರ್ ಮತ್ತು ಹರಾಜಿನ ಮೂಲಕ ಹಂಚಿಕೆ ಮಾಡಬೇಕಾಗುತ್ತದೆ.

1. ಗಾಂಧಿನಗರ ಉಪವಲಯದಲ್ಲಿ ಟ್ಯಾಂಕ್ ಬಂಡ್ ರಸ್ತೆಯಲ್ಲಿರುವ ಬಿ.ಟಿ.ಎಸ್. ಬಸ್ ನಿಲ್ದಾಣದ ಪಕ್ಕದಲ್ಲಿನ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಸ್ಥರಿಗೆ ಜನವರಿ 2010 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪರವಾನಗಿಯನ್ನು ಹಂಚಿಕೆ ಮಾಡಿರುವ ಕ್ರಮವು ಸರಿಯಿಲ್ಲವೆಂದು ಶ್ರೀ. ಬಷೀರ್ ಖಾನ್ ಮತ್ತು ಇನ್ನು ಒಟ್ಟು 41 ಜನರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೇಲೆ ಹೂಡಿದ್ದ ದಾವೆಯ ಸಂಖ್ಯೆ: ಡಬ್ಲ್ಯೂಪಿ ನಂ.28799-839/10 ಎಲ್‌ಬಿ-ಬಿಎಂಪಿ) ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:16-10-2010 ರಂದು ಜಾರಿ ಮಾಡಿರುವ ಆದೇಶದ ಮೇರೆಗೆ, ಸದರಿ ವ್ಯಾಪಾರಿಗಳಿಗೆ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡಲು ಜಾಗಗಳನ್ನು ತುರ್ತಾಗಿ ಮರು ಹಂಚಿಕೆ ಮಾಡುವಂತೆ ಸೂಚಿಸಲಾಗಿದೆ.
2. Maharashtra Ekta Hawkers Union Case and Another V/s. Municipal Corporations, Greater Mumbai and others ಪ್ರಕರಣದಲ್ಲಿ ಗೌರವಾನ್ವಿತ ಭಾರತದ ಸರ್ವೋಚ್ಛ ನ್ಯಾಯಾಲಯವು ನೀಡಿರುವ ಮಾರ್ಗಸೂಚಿಗಳು ಕೆಳಕಂಡಂತೆ ವರದಿ ಮಾಡಿದೆ.

   1. ಮನೆಗಳ ಮತ್ತು ಅಂಗಡಿಗಳ ಪ್ರವೇಶಕ್ಕೆ ಅಡ್ಡಿಯಾಗದಂತೆ ಹಾಗೂ ಪಾದಚಾರಿಗಳಿಗೆ ಅಥವಾ ವಾಹನ ಸಂಚಾರಕ್ಕೆ ಅಡ್ಡಿಯಾಗದಂತೆ ಫುಟ್‌ಪಾತ್ (ಪಾದಚಾರಿರಸ್ತೆ)ಯ ಅಂಚಿನಲ್ಲಿ 1x1 ಮೀಟರ್ ವಿಸ್ತೀರ್ಣದ ಜಾಗವನ್ನು ಸಂಚಾರಿ ಮಾರಾಟ ವಲಯವನ್ನು ಗುರುತಿಸುವುದು.
   2. ಬೀದಿ ಬದಿ ವ್ಯಾಪಾರಿಗಳು ಸಂಚಾರಿ ಮಾರಾಟ ವಲಯದಲ್ಲಿ ಯಾವುದೇ ಕಟ್ಟಡ ಅಥವಾ ವಿನ್ಯಾಸವನ್ನು ರಚಿಸುವಂತಿಲ್ಲ.
   3. ಯಾವುದೇ ಪೂಜಾ ಸ್ಥಳಗಳಿಂದ, ಶಾಲಾ ಕಾಲೇಜುಗಳಿಂದ, ಆಸ್ಪತ್ರೆಗಳಿಂದ ನೂರು ಮೀಟರ್ ಸುತ್ತಳತೆಯಲ್ಲಿ ಸಂಚಾರಿ ಮಾರಾಟ ವಲಯ ಸ್ಥಾಪಿಸುವಂತಿಲ್ಲ. ಹಾಗೆಯೇ ರಸ್ತೆ ಮೇಲು ಸೇತುವೆಗಳಲ್ಲಿ ಮತ್ತು ಮುನಿಸಿಪಲ್ ಮಾರುಕಟ್ಟೆಗಳಿಂದ 150 ಮೀಟರ್ ಒಳಗೆ ಬೀದಿ ಬದಿ ವ್ಯಾಪಾರ ನಡೆಸುವಂತಿಲ್ಲ.

..................3

4. ರಸ್ತೆ ಬದಿ ವ್ಯಾಪಾರಿಗಳು ಗ್ರಾಹಕರನ್ನು ಆಕರ್ಷಿಸಲು ಯಾವುದೇ ವಾದ್ಯಗಳನ್ನಾಗಲಿ ಅಥವಾ ಸಂಗೀತವನ್ನಾಗಲೀ ನುಡಿಸತಕ್ಕದಲ್ಲ ಹಾಗೂ ಹೆಚ್ಚು ಗದ್ದಲ ಮಾಡುವಂತಿಲ್ಲ.
5. ರಸ್ತೆ ಬದಿ ವ್ಯಾಪಾರಿಗಳು ಸಿದ್ಧಪಡಿಸಿರುವ ಆಹಾರ ಪದಾರ್ಥಗಳು, ತಿಂಡಿ ತಿನಿಸುಗಳು, ಹೆಚ್ಚಿಟ್ಟ ಹಣ್ಣು ಮುಂತಾದವುಗಳನ್ನು ಸ್ವಚ್ಛತೆ ಕಾಪಾಡಿಕೊಂಡು ಮಾರಬಹುದು.
6. ಬೀದಿ ಬದಿ ವ್ಯಾಪಾರವನ್ನು ಬೆಳಿಗ್ಗೆ 7 ರಿಂದ ರಾತ್ರಿ 10 ಗಂಟೆಯವರೆಗೆ ನಡೆಸಬಹುದು.
7. ಬೀದಿ ಬದಿಯ ವ್ಯಾಪಾರಿಗಳು ತಾವು ನಡೆಸುವ ವ್ಯಾಪಾರದ ಸ್ಥಳದಲ್ಲಿ ನಗರ, ಸ್ಥಳೀಯ ಸಂಸ್ಥೆಯ ಆರೋಗ್ಯ ವಿಭಾಗದೊಂದಿಗೆ ಸ್ವಚ್ಛತೆಯನ್ನು ಕಾಪಾಡಲು ಸಹಕರಿಸುವುದು.
8. 8 ಮೀಟರ್‌ಗಿಂತ ಕಡಿಮೆ ಅಗಲವಿರುವ ರಸ್ತೆಗಳಲ್ಲಿ ಬೀದಿ ಬದಿ ವ್ಯಾಪಾರಕ್ಕೆ ಅನುಮತಿ ನೀಡಬಾರದು. ಹಾಗೆಯೇ ವಾಣಿಜ್ಯ ವ್ಯವಹಾರ ನಿಷೇದಿಸಲ್ಪಟ್ಟಿರುವ ಪೂರ್ಣ ಜನ ವಸತಿ ಪ್ರದೇಶಗಳಲ್ಲಿ ಕೂಡ ಸಂಚಾರಿ ಮಾರಾಟ ವಲಯವನ್ನು ಗುರುತಿಸಬಾರದು.
9. ಬೀದಿ ಬದಿ ವ್ಯಾಪಾರಿಗಳು ಕ್ಯಾಮರ, ಕ್ಯಾಸೆಟ್‌ಗಳು, ದೂರವಾಣಿ ಉಪಕರಣಗಳು, ವಿಡಿಯೋ ಮತ್ತು ಆಡಿಯೋ ಟೇಪ್‌ಗಳು ಮುಂತಾದ ಹೆಚ್ಚಿನ ಮೌಲ್ಯದ ಎಲೆಕ್ಟ್ರಾನಿಕ್ ವಸ್ತುಗಳನ್ನು ಮಾರಬಾರದೆಂದು ನಿಷೇಧಿಸಿದೆ.

ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯ ಸುತ್ತಮುತ್ತ ಸುಮಾರು 2500 ವ್ಯಾಪಾರಸ್ಥರು ಫುಟ್‌ಪಾತ್ ಮೇಲೆ ವ್ಯಾಪಾರ ನಡೆಸುತ್ತಿದ್ದು, ಸ್ಥಳ ಪರಿಶೀಲನೆ ಮಾಡಿದಾಗ ಇವರಲ್ಲಿ ಬಹುತೇಕ ಮಂದಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳಿಗೆ ಸೇರಿದ್ದು, ಆಯೋಗವು ನೀಡಿರುವ 574 ವ್ಯಾಪಾರಸ್ಥರ ಪಟ್ಟಿಯಲ್ಲಿ ಬಹುತೇಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರು ಸೇರಿರುತ್ತಾರೆಂದು ಸ್ಥಳೀಯ ಅಧಿಕಾರಿಗಳು ವರದಿ ನೀಡಿದ್ದಾರೆ.

ಈ ಅನಧಿಕೃತ ವ್ಯಾಪಾರಸ್ಥರು ಕೆ.ಆರ್.ಮಾರುಕಟ್ಟೆಯ ನೂತನ ಕಟ್ಟಡ ಮತ್ತು ಹಳೆಯ ಕಟ್ಟಡ ಆವರಣದೊಳಗೆ ಇದ್ದು, ಇದರ ಹೊರತಾಗಿ ಸುಮಾರು 2000 ಅನಧಿಕೃತ ವ್ಯಾಪಾರಸ್ಥರು ಮಾರುಕಟ್ಟೆಯ ಸುತ್ತಮುತ್ತಲಿನ ರಸ್ತೆ ಮತ್ತು ಪಾದಚಾರಿ ಪ್ರದೇಶದಲ್ಲಿ ನಡೆಸುತ್ತಿದ್ದು, ಕಂಡು ಬಂದಿರುತ್ತದೆ. ಇಲ್ಲಿನ ಸಮಸ್ಯೆಯ ಬಗ್ಗೆ ಬಿ.ಎಂ.ಟಿ.ಎಫ್ ಅಧಿಕಾರಿಗಳು ಮಾರುಕಟ್ಟೆಯ ಒಳಗಿನ ಹಾಗೂ ಹೊರಗಿನ ಜನ ಸಂದಣಿಯ ವಾತಾವರಣವನ್ನು ಗಮನಿಸಿ ಅಲ್ಲಿ ಸಂಭವಿಸಬಹುದಾದಂತಹ ಅನಾಹುತ ಗಮನಿಸಿ ಇಲ್ಲಿ ಯಾವುದೇ ಹೆಚ್ಚಿನ ಹಂಚಿಕೆಗಳನ್ನು ಮಾಡಬಾರದೆಂದು ಸೂಚಿಸಿರುತ್ತಾರೆ.

ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ದಿನಾಂಕ:01-06-2011 ರಂದು ಡಬ್ಲ್ಯೂಪಿ ಸಂಖ್ಯೆ: 2604-2607/2011 ರಲ್ಲಿ ಹೊರಡಿಸಿರುವ ಆದೇಶದಲ್ಲಿ ಮಾರುಕಟ್ಟೆಯ 'ಜಿ' ಪ್ಲಾನ್‌ಗೆ ವ್ಯತಿರಿಕ್ತವಾಗಿ ಮೇಲಿನ ಬೇಸ್‌ಮೆಂಟ್ ಮಹಡಿಯಲ್ಲಿ ಯಾವುದೇ ಖಾಲಿ ಜಾಗಗಳಲ್ಲಿ ಹಂಚಿಕೆ ಮಾಡಕೂಡದೆಂಬುದಾಗಿ ಆದೇಶಿಸಿರುತ್ತದೆ.

ನಿರ್ಣಯ: ಮುಂದುವರೆದಂತೆ ದಿನಾಂಕ:30-03-2012 ರಂತೆ ಮಾರುಕಟ್ಟೆ ಸ್ಥಾಯಿ ಸಮಿತಿಯಲ್ಲಿ ತೆಗೆದುಕೊಂಡ ನಿರ್ಣಯದಲ್ಲಿ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಆಧರಿಸಿ, ನಗರ ಪಾಲಿಕೆಯ ಕಾನೂನು ಕೋಶವು ವಿವರಿಸಿರುವಂತೆ ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆ ಒಳ ಮತ್ತು ಹೊರ ಫುಟ್‌ಪಾತ್ ವ್ಯಾಪಾರಿಗಳ ತೊಂದರೆಯನ್ನು ನಿವಾರಿಸಲು ಈ ಹಿಂದೆ ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ: ಡಿ.ಸಿ.ಹೆಚ್.ಪಿ.ಆರ್/(2)170/10-11, ದಿನಾಂಕ:25-05-2010 ರಲ್ಲಿ ನೀಡಿರುವ ಕೆಲವು ಅಂಶಗಳನ್ನು ಗಣನೆಗೆ ತೆಗೆದುಕೊಂಡು (ಇವರು ಬೀದಿ ವ್ಯಾಪಾರಿಗಳಲ್ಲದೆ ಇರುವುದರಿಂದ), ಈ ಕೆಳಕಂಡಂತೆ ನಿಯಮಗಳನ್ನು ಅನುಸರಿಸಿ, ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

.................4

1. ಬೇರೆ ಅಂಗಡಿಗಳ ಪ್ರವೇಶಕ್ಕೆ ಅಥವಾ ಪಾದಚಾರಿಗಳಿಗೆ ಅಡ್ಡಿಯಾಗದಂತೆ ಅಂಚಿನಲ್ಲಿ 1 ಮೀ x 1 ಮೀ ಜಾಗವನ್ನು ಮಾರಾಟ ಸ್ಥಳವಾಗಿ ಗುರುತಿಸಿ ಸಂಖ್ಯೆಗಳನ್ನು ನೀಡುವುದು.
2. ಈ ವ್ಯಾಪಾರಿಗಳು ಸದರಿ ಸ್ಥಳದಲ್ಲಿ ಯಾವುದೇ ಕಟ್ಟಡ, ಟಾರ್ಪಲ್ ಕಟ್ಟುವುದು ಹಾಗೂ ಇದು ತಮ್ಮ ಸ್ಥಳ ಎಂಬುದನ್ನು ನಿರ್ಭಂದಿಸಿದೆ.
3. ಈ ಸ್ಥಳದಲ್ಲಿ ವ್ಯಾಪಾರ ಮಾಡುವವರು ಗ್ರಾಹಕರನ್ನು ಆಕರ್ಷಿಸಲು ಯಾವುದೇ ರೀತಿಯ ವಾದ್ಯವಾಗಲಿ, ಸಂಗೀತವನ್ನಾಗಲಿ ಮಾಡುವಂತಿಲ್ಲ.
4. ಸಿದ್ಧಪಡಿಸಿರುವ ಆಹಾರ ತಿಂಡಿ ತಿನಿಸುಗಳು, ಹೆಚ್ಚಿಟ್ಟ ಹಣ್ಣುಗಳು ಮುಂತಾದವುಗಳನ್ನು ಸ್ವಚ್ಛತೆ ಕಾಪಾಡಿಕೊಂಡು ಮಾರಬಹುದು.
5. ಈ ಸ್ಥಳದಲ್ಲಿ ಮೊದಲು ಬಂದವರಿಗೆ ಆದ್ಯತೆಯಂತೆ ಒಂದು ಬದಿಯಿಂದ ನೀಡತಕ್ಕದ್ದು.
6. ವ್ಯಾಪಾರ ಮಾಡುವ ವೇಳೆ ಬೆಳಿಗ್ಗೆ 7-00 ರಿಂದ ರಾತ್ರಿ 10-00 ಗಂಟೆಯವರೆಗೆ ನಡೆಸಬಹುದು. ಈ ಸ್ಥಳದಲ್ಲಿ ವ್ಯಾಪಾರ ಮಾಡುವವರು ನಗರ ಪಾಲಿಕೆಯ ಆರೋಗ್ಯ ವಿಭಾಗದೊಂದಿಗೆ ಸ್ವಚ್ಛತೆಯನ್ನು ಕಾಪಾಡಲು ಸಹಕರಿಸಬೇಕು.
7. ಈ ಸ್ಥಳದಲ್ಲಿ ಹಣ್ಣು ತರಕಾರಿಗಳನ್ನು ಹೊರತು ಪಡಿಸಿ ಬೇರೆ ಯಾವುದನ್ನು ಮಾರುವಂತಿಲ್ಲ.

**ಪರವಾನಗಿ ನೀಡುವ ಬಗ್ಗೆ**

1. ಒಂದು ಕುಟುಂಬಕ್ಕೆ ಒಂದಕ್ಕಿಂತ ಹೆಚ್ಚಿನ ಪರವಾನಗಿ ನೀಡುವಂತಿಲ್ಲ.
2. ಪರವಾನಗಿ ಪಡೆಯಲು ಅರ್ಜಿ ಹಾಕಿದವರು ಕನಿಷ್ಠ ಪಕ್ಷ 5 ವರ್ಷವಾದರೂ ಮಾರುಕಟ್ಟೆ ಪರಿಮಿತಿಯಲ್ಲಿ ವ್ಯಾಪಾರ ಮಾಡುತ್ತಿದ್ದವರಾಗಿರಬೇಕು.
3. ಈ ವ್ಯಪಾರವನ್ನಲ್ಲದೇ ಬೇರೆ ವ್ಯಾಪಾರವನ್ನು ಹೊಂದಿರಬಾರದು.
4. ನಗರದಲ್ಲಿ ಸ್ವಂತವಾದ ಅಥವಾ ಬಾಡಿಗೆಗೆ ಯಾವುದೇ ವಾಣಿಜ್ಯ ಮಳಿಗೆಯನ್ನು ಹೊಂದಿರಬಾರದು.
5. ಒಂದು ಅರ್ಜಿಗೆ ಒಂದು ಪರವಾನಗಿಯನ್ನು ಮಾತ್ರ ನೀಡುವುದು.
6. 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಪರವಾನಗಿ ನೀಡದಂತೆ ಎಚ್ಚರಿಕೆ ವಹಿಸಬೇಕು.
7. ಪ್ರತಿ ಪರವಾನಗಿದಾರರು ದಿನವೊಂದಕ್ಕೆ ರೂ.20/- ಗಳಂತೆ ಪರವಾನಗಿ ಶುಲ್ಕವನ್ನು ಪಾಲಿಕೆಗೆ ಪಾವತಿಸಬೇಕು. ಈ ಶುಲ್ಕವನ್ನು ಹೆಚ್ಚು ಅಥವಾ ಕಡಿಮೆ ಮಾಡಲು ಪಾಲಿಕೆಯು ಅಧಿಕಾರವುಳ್ಳದ್ದಾಗಿರುತ್ತದೆ.
8. ವ್ಯಾಪಾರಿ ಹೆಸರು, ವಿಳಾಸ ಭಾವಚಿತ್ರವನ್ನು ಹೊಂದಿರಬೇಕು.
9. ಪರವಾನಗಿಯಲ್ಲಿ ಇರುವ ಭಾವಚಿತ್ರದವರೆ ವ್ಯಾಪಾರ ಮಾಡಬೇಕು.
10. ವ್ಯಾಪಾರಿಯ ಕುಟುಂಬದವರ ಹೆಸರು ಮತ್ತು ವ್ಯಾಪಾರ ಮಾಡುತ್ತಿರುವ ಜಾಗದ ವಿಳಾಸ
11. ಈಗಾಗಲೇ ಪಟ್ಟಿ ಮಾಡಿರುವವರನ್ನು ಹೊರತುಪಡಿಸಿ ಹೊಸದಾಗಿ ಬೇರೆಯವರಿಗೆ ಪರವಾನಗಿ ನೀಡಬಾರದು.

ಮೇಲಿನ ಮಾನ್ಯ ನ್ಯಾಯಾಲಯಗಳ ಆದೇಶ ಬಿ.ಎಂ.ಟಿ.ಎಫ್ ಅಧಿಕಾರಿಗಳ ಹಾಗೂ ಸ್ಥಳೀಯ ಅಧಿಕಾರಿಗಳ ವರದಿಯ ಆಧಾರದ ಮೇಲೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಗಳ ಆಯೋಗದ ನಿರ್ದೇಶನದ ಅನ್ವಯ ಸದರಿ ವಿಷಯವನ್ನು ಅವಗಾಹನೆಗೆ ಇರಿಸಿ, ಮಾರುಕಟ್ಟೆ ಸ್ಥಾಯಿ ಸಮಿತಿಯವರು ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆ ಆವರಣದಲ್ಲಿ 574 ಪಾದಚಾರಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಸ್ಥಳಾವಕಾಶ ಒದಗಿಸುವ ಕುರಿತು ದಿನಾಂಕ:15-02-2012 ಹಾಗೂ 30-03-2012 ರಂದು ನಡೆದಿರುವ ಮಾರುಕಟ್ಟೆ ಸ್ಥಾಯಿ ಸಮಿತಿ ಸಭೆಯ ತೀರ್ಮಾನದ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-06-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

.................5

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 35 (124) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ-130ರ ಉಲ್ಲಾಳು ವ್ಯಾಪ್ತಿಯಲ್ಲಿರುವ ಸೊಣ್ಣೇನಹಳ್ಳಿ ಗ್ರಾಮಕ್ಕೆ ಸಂಪರ್ಕ ರಸ್ತೆ ನಿರ್ಮಿಸಲು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ.1/1 ರ ಜಮೀನಿನಲ್ಲಿ 0.05 ಗುಂಟೆ ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಿಕೊಡುವಂತೆ ಕೋರಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ರಾಜರಾಜೇಶ್ವರಿ ನಗರ ವಲಯ ರವರು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ), ಮುಖ್ಯ ಅಭಿಯಂತರರು, ರಾಜರಾಜೇಶ್ವರಿ ನಗರ ಮತ್ತು ಅಪರ ಆಯುಕ್ತರು, ರಾಜರಾಜೇಶ್ವರಿ ನಗರ ರವರು ಶಿಫಾರಸ್ಸು ಮಾಡಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಸಹಾಯಕ ಅಭಿಯಂತರರು ಹಾಗೂ ಭೂಮಾಪಕರು ಸ್ಥಳ ಪರಿಶೀಲನೆ ಮಾಡಿ ಪ್ರಸ್ತಾಪಿತ ಭೂಸ್ವಾಧೀನ ಸ್ವತ್ತಿನ ನಕ್ಷೆ ತಯಾರಿಸಿ, ದಾಖಲೆಗಳೊಂದಿಗೆ ವರದಿ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ.1/1 ರ ಜಮೀನು ಆರ್.ಟಿ.ಸಿ ಯಂತೆ ಹಿಡುವಳಿ ಜಮೀನಾಗಿದ್ದು, ಇದರ ವಿಸ್ತೀರ್ಣ 8 ಗುಂಟೆ ಖರಾಬು ಸೇರಿ ಒಟ್ಟು 3 ಎಕರೆ 24 ಗುಂಟೆ ಇರುತ್ತದೆ. ಈ ಪೈಕಿ ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ 5 ಗುಂಟೆಯೂ ಸೇರಿದಂತೆ ಒಟ್ಟು 28 ಗುಂಟೆ ಜಮೀನು ಮೂಲತ: ಸೊಣ್ಣೇನಹಳ್ಳಿ ಗ್ರಾಮದ ದಿವಂಗತ ಶ್ರೀ ಪುಟ್ಟಯ್ಯನವರ ಪಿತ್ರಾರ್ಜಿತ ಸ್ವತ್ತಾಗಿದ್ದು, ದಿನಾಂಕ:24-05-2003 ರಂದು ಕುಟುಂಬದ ಸದಸ್ಯರು ಮಾಡಿಕೊಂಡಿರುವ ವಿಭಾಗ ಪತ್ರದಂತೆ ಶ್ರೀ ಪಿ.ರಾಜಣ್ಣರವರ ಭಾಗಕ್ಕೆ ಬಂದಿರುತ್ತದೆ. ಸದರಿ ವಿಭಾಗ ಪತ್ರವು ನೋಂದಾವಣೆಯಾಗಿರುವುದು ದಾಖಲೆಗಳಲ್ಲಿ ಕಂಡು ಬರುವುದಿಲ್ಲ. ಹಾಲಿ ಸದರಿ ಸ್ವತ್ತು ಎಂ.ಆರ್.ನಂ.5/2008-2009 ರಂತೆ ಅವರ ಪತ್ನಿ ಶ್ರೀಮತಿ ಲಕ್ಷ್ಮಮ್ಮರವರ ಹೆಸರಿಗೆ ಖಾತೆಯಾಗಿರುತ್ತದೆ ಹಾಗೂ ಈ ಸ್ವತ್ತಿಗೆ ವಿಶೇಷ ಜಿಲ್ಲಾಧಿಕಾರಿಗಳು (ಕಂದಾಯ), ಬೆಂಗಳೂರು ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಎಲ್ಎನ್(ಎಸ್)ಎಸ್ಆರ್(ಕೆಂ)10/2006-07, ದಿನಾಂಕ:19-01-2009ರ ಆದೇಶದಂತೆ ವ್ಯವಸಾಯೇತರ ವಾಸದ ಉದ್ದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಈ ಬಗ್ಗೆ ಸಲ್ಲಿಸಿರುವ ಆರ್.ಟಿ.ಸಿ. ಪ್ರತಿ, ಎಮ್.ಆರ್.ಪ್ರತಿ, ಭೂಪರಿವರ್ತನಾ ಆದೇಶದ ಪ್ರತಿ, ನೋಂದಾಯಿತವಲ್ಲದ ವಿಭಾಗ ಪತ್ರದ ಪ್ರತಿಗಳನ್ನು ಪರಿಶೀಲಿಸಲಾಗಿದೆ. ಸದರಿ ಜಾಗದಲ್ಲಿ 10 ವರ್ಷದ ಒಂದು ಹುಣಸೆ ಮರ ಮತ್ತು 20 ವರ್ಷದ ಒಂದು ತೆಂಗಿನ ಮರ ಇದ್ದು, ಹುಣಸೆ ಮರದ ಮೌಲ್ಯಮಾಪನವನ್ನು ಖಾತೆದಾರರ ಮನವಿಯ ಮೇರೆಗೆ ಸದರಿ ಮರವು ಅವರ ಸ್ವಂತಕ್ಕೆ ಬೇಕಾದ ಕಾರಣ ಕೈಬಿಡಲಾಗಿದೆ ಹಾಗೂ ತೆಂಗಿನ ಮರದ ಮೌಲ್ಯವನ್ನು ಪಾಲಿಕೆಯ ತೋಟಗಾರಿಕಾ ಅಧೀಕ್ಷಕರು ರವರಿಂದ ಪಡೆಯಲಾಗಿದೆ.

ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ವಿವರ ಈ ಕೆಳಕಂಡಂತಿರುತ್ತದೆ:

ವಾರ್ಡ್ ನಂ.130, ಉಲ್ಲಾಳು

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ಸರ್ವೆ ನಂ. | ಮಾಲೀಕರ/ ಅನುಭವದಾರರ ಹೆಸರು | ಭೂಸ್ವಾಧೀನಕ್ಕೆ ಒಳಪಡುವ ಅಂದಾಜು ವಿಸ್ತೀರ್ಣ ಚ.ಅ.ಗಳಲ್ಲಿ | ಷರಾ |
|---|---|---|---|---|---|
| 1 | ಸೊಣ್ಣೇನಹಳ್ಳಿ | 1/1 | ಶ್ರೀಮತಿ ಲಕ್ಷ್ಮಮ್ಮ ಕೋಂ ಲೇಟ್ ಪಿ.ರಾಜಣ್ಣ | 5445 ಚ.ಅಡಿ (0 ಎಕರೆ 05 ಗುಂಟೆ | ಒಂದು ತೆಂಗಿನಮರ ಹಾಗೂ ಒಂದು ಹುಣಸೆಮರ |

ಮೇಲ್ಕಂಡ ಸ್ವತ್ತು ಪಾಲಿಕೆ ವ್ಯಾಪ್ತಿಯಲ್ಲಿರುವುದರಿಂದ ಹಾಗೂ ಸದರಿ ಸ್ವತ್ತು ಭೂಪರಿವರ್ತನೆಯಾಗಿರುವ ಜಮೀನಾಗಿರುವುದರಿಂದ ಈ ಸ್ವತ್ತಿಗೆ ವಾಸೋಪಯೋಗಿ ನಿವೇಶನಗಳಿಗೆ ನಿಗಧಿಪಡಿಸಲಾಗಿರುವ ದರವನ್ನು ಪರಿಹಾರವಾಗಿ ಪರಿಗಣಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಸರ್ಕಾರದ ದಿನಾಂಕ:21-09-2011 ರ ಕೇಂದ್ರ ಮೌಲ್ಯಮಾಪನ ಸಮಿತಿಯ ಅಧಿಸೂಚನೆ ಸಂಖ್ಯೆ: ಸಿವಿಸಿ/19/2010-11 ರ ಮಾರ್ಗಸೂಚಿ ದರದನ್ವಯ ಪ್ರಸ್ತಾಪಿತ ಸ್ವತ್ತಿಗೆ ಚದರ ಅಡಿ ಒಂದಕ್ಕೆ ರೂ.1,000/- ದಂತೆ ನಿಗಧಿಪಡಿಸಿ ಭೂಪರಿಹಾರ ಮತ್ತು ಇತರೆ ವೆಚ್ಚಗಳನ್ನು ಲೆಕ್ಕಾಚಾರ ಮಾಡಲಾಗಿದ್ದು ವಿವರ ಈ ಕೆಳಕಂಡಂತಿದೆ;

## "ಅ"- ಭೂ ಪರಿಹಾರ ವೆಚ್ಚ

| ಕ್ರ ಸಂ | ವಿವರಣೆ | ಮೊಬಲಗೂ ರೂ. ಗಳಲ್ಲಿ |
|---|---|---|
| 1ಎ | ದಿನಾಂಕ: 21-09-2011ರ ಸರ್ಕಾರದ ಮಾರ್ಗಸೂಚಿ ದರದಂತೆ, ಚ.ಅಡಿ ಒಂದಕ್ಕೆ ರೂ. 1,000/- ರಂತೆ 5445 ಚ.ಅಡಿಗಳಿಗೆ | 54,45,000/- |
| 1ಬಿ | ತೋಟಗಾರಿಕೆ ಇಲಾಖೆ ಮಾಲ್ಕಿ ಲೆಕ್ಕಾಚಾರದ ಪ್ರಕಾರ ಈ ತೆಂಗಿನ ಮರಕ್ಕೆ ಒಟ್ಟು | 8,060/- |
| | **ಒಟ್ಟು (1ಎ+1ಬಿ)** | 54,53,060/- |
| 2 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ 23(2)ರ ಅನ್ವಯ ಶೇಕಡಾ 30ರಂತೆ ಶಾಸನ ಬದ್ಧ ಭತ್ಯೆ | 16,35,918/- |
| 3 | 1894ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 6,54,367/- |
| | **ಒಟ್ಟು (1+2+3)** | **77,43,345/-** |

## "ಆ"-ಇತರೆ ವೆಚ್ಚ

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | - |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | - |
| 6 | ಪ್ರಕಟಣಾ ವೆಚ್ಚ (ಅಂದಾಜು) | 1,00,000/- |
| | **ಒಟ್ಟು (1+2+3+6)** | **78,43,345/-** |

ಷರಾ: ದಿನಾಂಕ:5-9-1963ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ರೂ.ಎಪ್ಪತ್ತೆಂಟು ಲಕ್ಷದ ನಲವತ್ಮೂರು ಸಾವಿರದ ಮುನ್ನೂರ ನಲವತ್ತೈದು ಮಾತ್ರ)**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತನ್ನು ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂ ಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ.78,43,345/- (ರೂ. ಎಪ್ಪತ್ತೆಂಟು ಲಕ್ಷದ ನಲವತ್ಮೂರು ಸಾವಿರದ ಮುನ್ನೂರ ನಲವತ್ತೈದು ಮಾತ್ರ) ಗಳನ್ನು ಪಾಲಿಕೆಯ 2011-12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-12-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯ.

..................3

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-03-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 36 (169) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಟ್ಟು 8 ವಲಯಗಳನ್ನಾಗಿ ವಿಂಗಡಿಸಿದ್ದು, ಇದರ ವ್ಯಾಪ್ತಿಯು ಈ ಹಿಂದೆ ಇದ್ದ ಸುಮಾರು 225 ಚ.ಕಿ.ಮೀ ನಿಂದ 800 ಚ.ಕಿ.ಮಿ. ನಷ್ಟು ವ್ಯಾಪ್ತಿಗೆ ವಿಸ್ತರಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಜನಸಂಖ್ಯೆಯು 2001 ರ ಜನಗಣತಿ ಪ್ರಕಾರ ಸುಮಾರು 60 ಲಕ್ಷದಷ್ಟಿದ್ದು, 2011ರ ಅಂತ್ಯಕ್ಕೆ ಒಂದು ಕೋಟಿ ಮೀರುವ ನಿರೀಕ್ಷೆ ಇದೆ. ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು ನಗರವು ನಿರಂತರವಾಗಿ ಬೆಳೆಯುತ್ತಿದ್ದು, ನಗರದ ಹೊರವಲಯದಲ್ಲಿ ಅನೇಕ ಕೈಗಾರಿಕೆ, ವಾಣಿಜ್ಯ ಹಾಗೂ ಮಾಹಿತಿ ತಂತ್ರಜ್ಞಾನದ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಬೆಂಗಳೂರು ನಗರದ ವಾಹನಗಳ ಸಂಖ್ಯೆಯು ಕೂಡ ಸತತವಾಗಿ ಹೆಚ್ಚುತ್ತಿದ್ದು, 1980ರಲ್ಲಿ ಸುಮಾರು 17 ಲಕ್ಷದಷ್ಟಿದ್ದ ಸಂಖ್ಯೆಯು, 2011ರಲ್ಲಿ ಸುಮಾರು 40.00 ಲಕ್ಷಕ್ಕೆ ಬೆಳೆದಿರುತ್ತದೆ. ಈ ವಾಹನಗಳ ಪೈಕಿ ಹೆಚ್ಚಾಗಿ ದ್ವಿಚಕ್ರವಾಹನಗಳಿದ್ದು, ಇತ್ತೀಚೆಗೆ ಕಾರುಗಳು ಹಾಗೂ ಇತರೆ ವಾಹನಗಳ ಸಂಖ್ಯೆಯು ಸಹ ಅತಿವೇಗವಾಗಿ ಬೆಳೆಯುತ್ತಿದೆ.

ಬೆಂಗಳೂರು ನಗರದಲ್ಲಿನ ಪ್ರಮುಖ ಕಾರಿಡಾರ್‌ಗಳಲ್ಲಿ ಸುಮಾರು 600ಕ್ಕೂ ಹೆಚ್ಚು ಪ್ರಮುಖ ಜಂಕ್ಷನ್‌ಗಳಿದ್ದು, ಇವುಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಜಂಕ್ಷನ್‌ಗಳಲ್ಲಿ ಸಿಗ್ನಲ್‌ಗಳಿದ್ದು, ವಾಹನ ವೇಗದ ಮಿತಿ ಪ್ರತಿ ಗಂಟೆಗೆ ಸರಾಸರಿ 10.00ಕಿ.ಮೀ.ಗಿಂತ ಕಡಿಮೆಯಾಗಿದೆ. ಇಂತಹ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಜಾಮ್ ಆಗುವುದನ್ನು ತಪ್ಪಿಸಲು, ಸಿಗ್ನಲ್ ರಹಿತ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಿದರೆ ವಾಹನ ಸಂಚಾರದ ವೇಗ ಹೆಚ್ಚಿಸಿ ಸುರಕ್ಷಿತ ಸಂಚಾರವನ್ನು ಕಲ್ಪಿಸುವುದಲ್ಲದೇ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿ ಸಾರ್ವಜನಿಕರ ಅಮೂಲ್ಯ ವೇಳೆಯ ಉಳಿತಾಯ ಅಲ್ಲದೆ ಇಂಧನ ಉಳಿಕೆ ಮತ್ತು ವಾಯುಮಾಲಿನ್ಯವನ್ನು ತಕ್ಕಮಟ್ಟಿಗೆ ಕಡಿಮೆಗೊಳಿಸಬಹುದಾಗಿದೆ.

2011-12 ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ 7 ಕಾರಿಡಾರ್‌ಗಳನ್ನು ಸಿಗ್ನಲ್ ಮುಕ್ತಗೊಳಿಸಲು ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಲು ಪ್ರಸ್ತಾಪಿಸಿದ್ದು, ಅವುಗಳಿಗೆ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 7 ಸಿಗ್ನಲ್ ಮುಕ್ತ ಕಾರಿಡಾರ್‌ಗಳಲ್ಲಿ ಗ್ರೇಡ್ ಸೆಪರೇಟರ್ (ಮೇಲ್ಸೇತುವೆ ಮತ್ತು ಅಂಡರ್ ಪಾಸ್‌ಗಳನ್ನು) ನಿರ್ಮಾಣ ಮಾಡಿ ಸಿಗ್ನಲ್ ಮುಕ್ತಗೊಳಿಸಲು ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ | ಕಾರಿಡಾರ್‌ನ ಹೆಸರು | ಜಂಕ್ಷನ್‌ಗಳ ಸಂಖ್ಯೆ | ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವ ಸ್ವತ್ತುಗಳ ಅಂದಾಜು ಒಟ್ಟು ವಿಸ್ತೀರ್ಣ (ಚ.ಮೀ.ಗಳಲ್ಲಿ) |
|---|---|---|---|
| 1 | ಡಾ॥ ರಾಜ್‌ಕುಮಾರ್ ರಸ್ತೆ- ಸರ್ಕಾರಿ ಸೋಪ್ ಕಾರ್ಖಾನೆ ಜಂಕ್ಷನ್‌ನಿಂದ ಮಾಗಡಿ ರಸ್ತೆ ಡೀವಿಯೇಶನ್ ಜಂಕ್ಷನ್‌ವರೆಗೆ | | |
| | ವಿವೇಕಾನಂದ ಜಂಕ್ಷನ್ | 1 | 2275.00 |
| | ಓಕಳಿಪುರಂ ಜಂಕ್ಷನ್ | 1 | 1332.00 |
| | ಒಟ್ಟು | 2 | 3607.00 |

.................2

| | | | |
|---|---|---|---|
| 2 | ಮಾಗಡಿ ರಸ್ತೆ- ಕಾರ್ಡ್ ರಸ್ತೆಯಿಂದ ಹೊರವರ್ತುಲ ರಸ್ತೆ ಜಂಕ್ಷನ್‌ವರೆಗೆ | | |
| | ಜೈಮುನಿರಾವ್ ವೃತ್ತ | 1 | 2723.58 |
| | ಬಸವೇಶ್ವರನಗರ ಜಂಕ್ಷನ್ | 1 | 560.15 |
| | ನಿಗಧಿತ 'ಯು' ತಿರುವು ಪಟ್ಟಾಲಮ್ಮ ದೇವಸ್ಥಾನದ ರಸ್ತೆ | 1 | 1503.49 |
| | ಪಟ್ಟಾಲಮ್ಮ ರಸ್ತೆ ಮತ್ತು ಹೊರವರ್ತುಲ ರಸ್ತೆಯ ಜಂಕ್ಷನ್ ಹತ್ತಿರ 'ಯು' ತಿರುವು. | 1 | 1595.37 |
| | ಒಟ್ಟು | 4 | 6382.59 |
| 3 | ಹೊರವರ್ತುಲ ರಸ್ತೆ- ಮೈಸೂರು ರಸ್ತೆ ಜಂಕ್ಷನ್‌ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ | | |
| | ಕೆ.ಇ.ಬಿ. ಜಂಕ್ಷನ್ ಪಿ.ಇ.ಎಸ್.ಐ.ಟಿ | 1 | 156.22 |
| | ಡಾ॥ ಮುತ್ತುರಾಜ್ ಜಂಕ್ಷನ್ | 1 | 2464.41 |
| | ಫುಡ್‌ವರ್ಲ್ಡ್ ಜಂಕ್ಷನ್ | 1 | 1794.04 |
| | ಡಾಲರ್ಸ್ ಕಾಲೋನಿ ಜಂಕ್ಷನ್ | 1 | 1675.01 |
| | ಒಟ್ಟು | 4 | 6089.68 |
| 4 | ಹೊಸೂರು ಲಷ್ಕರ್ ರಸ್ತೆ – ವೆಲ್ಲಾರ ಜಂಕ್ಷನ್ ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ | | |
| | (ಸಿಮೆಂಟ್ರಿ ರೋಡ್ ಜಂಕ್ಷನ್) ಬನ್ನೇರುಘಟ್ಟ ರಸ್ತೆ | 1 | 1945.88 |
| | ಆಡುಗೋಡಿ ಜಂಕ್ಷನ್ | 1 | 3043.94 |
| | ಲಾಂಗ್‌ಫೋರ್ಡ್ ಜಂಕ್ಷನ್ | 1 | 5937.19 |
| | ವೆಲ್ಲಾರ ಜಂಕ್ಷನ್ | 1 | 1102.64 |
| | ಒಟ್ಟು | 4 | 12029.65 |
| 5 | ಬನ್ನೇರುಘಟ್ಟ ರಸ್ತೆ – ಜೇಡಿಮರ ಜಂಕ್ಷನ್‌ನಿಂದ ಕೋಳಿಫಾರಂ ವರೆಗೆ | | |
| | ಜೇಡಿಮರ ಜಂಕ್ಷನ್ | 1 | 12639.43 |
| | ಬಿಳೇಕಹಳ್ಳಿ ಜಂಕ್ಷನ್ | 1 | 7723.53 |
| | ಅರೆಕೆರೆ ರೋಡ್ ಜಂಕ್ಷನ್ | 1 | 9571.87 |
| | ಹುಳಿಮಾವು ಗೇಟ್ ಜಂಕ್ಷನ್ | 1 | 14459.63 |
| | ಒಟ್ಟು | 4 | 44394.46 |
| 6 | ಹಳೆ ವಿಮಾನ ನಿಲ್ದಾಣ ರಸ್ತೆ- ವೆಲ್ಲಾರ ಜಂಕ್ಷನ್ ನಿಂದ ರಾಜ್ಯ ಹೆದ್ದಾರಿ-35 ರವರೆಗೆ | | |
| | ಹೋಸ್ ಮ್ಯಾಟ್ ಜಂಕ್ಷನ್ | 1 | 4050.00 |
| | ಲೋಯರ್ ಅಗರಂ ಜಂಕ್ಷನ್ | 1 | 11169.00 |
| | ಎ.ಎಸ್.ಸಿ. ಜಂಕ್ಷನ್ | 1 | 3877.00 |
| | ಕಮಾಂಡೋ ಆಸ್ಪತ್ರೆ ಜಂಕ್ಷನ್ | 1 | 4168.00 |
| | ದೊಮ್ಮಲೂರು ಜಂಕ್ಷನ್ | 1 | 3290.00 |
| | ಮಣಿಪಾಲ್ ಆಸ್ಪತ್ರೆ ಜಂಕ್ಷನ್ | 1 | 2655.00 |
| | ವಿಂಡ್-ಟನಲ್ ಜಂಕ್ಷನ್ | 1 | 4136.00 |
| | ಸುರಂಜನ್‌ದಾಸ್ ಜಂಕ್ಷನ್ | 1 | 1888.00 |
| | ನಾಮ್‌ಜೋಶಿ ಜಂಕ್ಷನ್ | 1 | 7462.00 |
| | ಮಾರತ್‌ಹಳ್ಳಿ ಜಂಕ್ಷನ್ | 1 | 7348.00 |
| | ಕುಂದಲಹಳ್ಳಿ ಜಂಕ್ಷನ್ | 1 | 8599.00 |
| | ಒಟ್ಟು | 11 | 58642.00 |

| | | | |
|---|---|---|---|
| 7 | ಮೇಖ್ರಿ ಸರ್ಕಲ್‌ನಿಂದ ಹಳೆ ಮದ್ರಾಸ್ ರಸ್ತೆ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ-207 ವರೆಗೆ | | |
| | ಸಿ.ಐ.ಎಲ್. ಜಂಕ್ಷನ್ | 1 | 8043.00 |
| | ಮುನಿರೆಡ್ಡಿಪಾಳ್ಯ ಜಂಕ್ಷನ್ | 1 | 5126.00 |
| | ಜಯಮಹಲ್ 5ನೇ ಮುಖ್ಯರಸ್ತೆ ಜಂಕ್ಷನ್ | 1 | 4422.00 |
| | ನಂದಿದುರ್ಗ ರಸ್ತೆ ಜಂಕ್ಷನ್ | 1 | 4862.00 |
| | ಹೇನ್ಸ್ ಮತ್ತು ಸೆಪ್ಪಿಂಗ್ಸ್ ರಸ್ತೆ ಜಂಕ್ಷನ್ | 1 | 8694.00 |
| | ಧೋಭಿಘಾಟ್ ರಸ್ತೆ ಜಂಕ್ಷನ್ | 1 | 439.00 |
| | ಥಾಮರಾಯ್ ಕನ್ನನ್ ಮತ್ತು ಹಳೆ ಮದ್ರಾಸ್ ರಸ್ತೆ ಜಂಕ್ಷನ್ | 1 | 10890.00 |
| | ಇಂದಿರಾನಗರ ಡಬಲ್ ರೋಡ್ ಜಂಕ್ಷನ್ | 1 | 8641.00 |
| | ಇಂದಿರಾನಗರ 80 ಅಡಿ ರಸ್ತೆ ರೋಡ್ ಜಂಕ್ಷನ್ | 1 | 4462.00 |
| | ಸುರಂಜನ್ ದಾಸ್ ಜಂಕ್ಷನ್ | 1 | 13194.00 |
| | ವರ್ತೂರು (ಕಗ್ಗದಾಸ ಪುರ) ರಸ್ತೆ ಜಂಕ್ಷನ್ | 1 | 15049.00 |
| | ಹೆಚ್.ಪಿ.ರಸ್ತೆ ಜಂಕ್ಷನ್ | 1 | 2368.00 |
| | ಹೂಡಿ ಮುಖ್ಯರಸ್ತೆ ಜಂಕ್ಷನ್ ( ಮೇಲು ಸೇತುವೆ) | 1 | 12089.00 |
| | ಹೂಡಿ ಮುಖ್ಯರಸ್ತೆ ಜಂಕ್ಷನ್ ( ಅಂಡರ್ ಪಾಸ್) | 1 | 878.00 |
| | ಇ.ಪಿ.ಐ.ಪಿ ಮತ್ತು ಅಗ್ರಹಾರ ರಸ್ತೆ ಜಂಕ್ಷನ್ | 1 | 13168.00 |
| | ಹೋಪ್ ಫಾರಂ ರಸ್ತೆ ಜಂಕ್ಷನ್ | 1 | 2700.00 |
| | ಒಟ್ಟು | 16 | 115475.00 |
| | **ಏಳು ಕಾರಿಡಾರ್‌ಗಳಿಂದ ಒಟ್ಟು** | **45** | **246170.38 ಚ.ಮೀ.** |

ಮೇಲ್ಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಹಿಂದೆ ಟಿ.ಡಿ.ಆರ್. ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿ ಅಧಿಸೂಚನೆಗಳನ್ನು ಹೊರಡಿಸಲಾಗಿತ್ತು. ಆದರೆ, ಸಾರ್ವಜನಿಕರು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅನೇಕ ಸ್ವತ್ತಿನ ಮಾಲೀಕರು ವಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಅಲ್ಲದೆ ಟಿ.ಡಿ.ಆರ್. ನಿಯಮಾವಳಿಯ ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಕಾನೂನಿನ ಅಡಿಯಲ್ಲಿ ಯಾವುದೇ ವ್ಯಕ್ತಿಯನ್ನು ಒತ್ತಾಯಿಸುವಂತಿಲ್ಲ. ಈಗಾಗಲೇ ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಿರುವುದರಿಂದ ಸಾರ್ವಜನಿಕರು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಮುಂದೆ ಬರಲು ನಿಗಧಿತ 15 ದಿನಗಳ ಕಾಲಾವಕಾಶವನ್ನು ನೀಡಿ ತದನಂತರ ಸಾರ್ವಜನಿಕರಿಂದ ಸಾಕಷ್ಟು ಉತ್ತೇಜನ ದೊರಕದಿದ್ದಲ್ಲಿ ಭೂಸ್ವಾಧೀನ ಕಾಯ್ದೆ 1894ರ ಸೆಕ್ಷನ್ 23ರಲ್ಲಿ ನಿಗಧಿಪಡಿಸಲಾದ ದರಗಳ ಅನ್ವಯ ಪರಿಹಾರ ನೀಡಿ ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಬೇಕೆಂಬ ಅಂಶವನ್ನು ಗಮನಿಸಬೇಕಾಗಿರುತ್ತದೆ.

ಮೇಲ್ಕಂಡ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಬೇಕಾಗಿದ್ದಲ್ಲಿ ಕಾಮಗಾರಿ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮುನ್ನ ಎಲ್ಲಾ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ Encumbrance ಮತ್ತು ಮೊಕದ್ದಮೆ ಮುಕ್ತ ಸ್ವತ್ತಾಗಿ ಗುತ್ತಿಗೆದಾರರಿಗೆ ಯೋಜನಾ ಪ್ರದೇಶವನ್ನು ಹಸ್ತಾಂತರ ಮಾಡಿದಲ್ಲಿ, ನಿಗಧಿತ ವೇಳೆಯೊಳಗೆ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು. ಇಲ್ಲದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಗುತ್ತಿಗೆದಾರರು ಕಾಮಗಾರಿಗಳ ಅನುಷ್ಠಾನಕ್ಕೆ ಆಗಿರುವ ಅಡಚಣೆ, ಕಾಲವಿಳಂಬದ ಬಗ್ಗೆ ಹೆಚ್ಚಿನ ಮೊತ್ತವನ್ನು ಕೋರಿರುವ ಉದಾಹರಣೆಗಳು ಈಗಾಗಲೇ ನಮ್ಮ ಮುಂದೆ ಇದ್ದು, ಇದರಿಂದ ಯೋಜನೆಯು ನಿಗಧಿತ ಅವಧಿಯಲ್ಲಿ ಪೂರ್ಣಗೊಳ್ಳದೆ ಸಾರ್ವಜನಿಕರಿಂದ ಸಾಕಷ್ಟು ದೂಷಣೆಗಳು ಬಂದಿರುತ್ತವೆ.

.................4

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 2011-12ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಪ್ರಸ್ತಾಪಿಸಿರುವ 7 ಪ್ರಮುಖ ಸಿಗ್ನಲ್ ಮುಕ್ತ ಕಾರಿಡಾರ್‌ಗಳಲ್ಲಿ ಗ್ರೇಟ್ ಸೆಪರೇಟರ್‌ಗಳನ್ನು ನಿರ್ಮಿಸಲು ಬೇಕಾಗಿರುವ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಸದರಿ ಕಾರಿಡಾರ್‌ಗಳನ್ನು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪಡಿಸಿಕೊಳ್ಳಲು ಕಾಲಾವಕಾಶಗಳನ್ನು ನೀಡಿ ಟಿ.ಡಿ.ಆರ್. ಮುಖೇನವೇ ಭೂಸ್ವಾಧೀನ ಪ್ರಕ್ರಿಯೆಗೆ ಒತ್ತುಕೊಟ್ಟು, ಬೇಕಾಗಿರುವ ಸ್ವತ್ತುಗಳನ್ನು ಪಡೆದುಕೊಳ್ಳಲು ಕ್ರಮವಹಿಸಲಾಗುವುದು. ಈ ಅವಧಿಯಲ್ಲಿಯೂ ಸಹ ಟಿ.ಡಿ.ಆರ್.ಗೆ ಸಾರ್ವಜನಿಕರಿಂದ ಯಾವುದೇ ಸ್ಪಂದನೆ/ಒಪ್ಪಿಗೆ ಸಿಗದೇ ಇದ್ದ ಪಕ್ಷದಲ್ಲಿ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಹಾಗೂ ಸಾರ್ವಜನಿಕರ ಅನಗತ್ಯ ತೊಂದರೆಗಳನ್ನು ನಿವಾರಿಸಲು ಮೇಲ್ಕಂಡ ಸ್ವತ್ತುಗಳನ್ನು 1894ರ ಭೂಸ್ವಾಧೀನ ಕಾಯ್ದೆ ಸೆಕ್ಷನ್ 23ರ ಅನ್ವಯ ಭೂಸ್ವಾಧೀನವನ್ನು ಪ್ರತಿ ಜಂಕ್ಷನ್‌ವರೆಗೆ ಪ್ರಾಮುಖ್ಯತೆ ಮೇರೆಗೆ ಹಂತ ಹಂತವಾಗಿ ಸ್ವತ್ತುಗಳನ್ನು ವಶಪಡಿಸಿಕೊಂಡು ಹಾಗೂ ಅದಕ್ಕೆ ತಗಲುವ ಭೂಪರಿಹಾರ ಹಾಗೂ ಇತರೆ ವೆಚ್ಚಗಳಿಗೆ ಪಾಲಿಕೆಯ ಆಯವ್ಯಯದಲ್ಲಿ ಮೀಸಲಿಡುವ ಅನುದಾನದಿಂದ ಭರಿಸುವ ಬಗ್ಗೆ ಆಯುಕ್ತರಿಗೆ ಅಧಿಕಾರ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-07-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08.03.2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:12-04-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಟಿ.ಡಿ.ಆರ್. ಮುಖಾಂತರ ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಕ್ರಮ ವಹಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಟಿ.ಡಿ.ಆರ್. ಮುಖಾಂತರ ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಕ್ರಮ ವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 37 (170) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:13-01-2012 ಮತ್ತು ದಿನಾಂಕ:16-01-2012 ರಲ್ಲಿನ ಉಚ್ಚ ನ್ಯಾಯಾಲಯದ ಆದೇಶದಂತೆ ದಿನಾಂಕ:22-02-2012 ರಲ್ಲಿ ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ-4) ರವರು ಸಲ್ಲಿಸಿರುವ ಭೂಸ್ವಾಧೀನ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ:110 (ಹಳೆ ವಾರ್ಡ್ ಸಂಖ್ಯೆ:77) ರಲ್ಲಿನ ಪ್ಯಾಲೇಸ್ ರಸ್ತೆಯನ್ನು 30 ಮೀಟರ್ ಗಳಿಗೆ ಅಗಲೀಕರಣಗೊಳಿಸಲು ದಿನಾಂಕ:02-03-2005 ರಂದು ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ 1961 ರ ಸೆಕ್ಷನ್ 14-ಬಿ ರನ್ವಯ ಪ್ರಕಟಣೆ ಹೊರಡಿಸಲಾಗಿರುತ್ತದೆ. ಈ ರಸ್ತೆ ಅಗಲೀಕರಣಕ್ಕೆ ಅವಶ್ಯವಿರುವ ಸ್ವತ್ತುಗಳ ಪಂಕ್ತೀಕರಣ ನಕ್ಷೆಯನ್ನು ಸಿದ್ಧಪಡಿಸಲಾಗಿದ್ದು, ಅದರಂತೆ ಈ ರಸ್ತೆಯಲ್ಲಿ ಬರುವ ಆಸ್ತಿ ಸಂಖ್ಯೆ: 45/1 ರಲ್ಲಿನ ಲಾಲೆಹಜಾರ್ ಅಪಾರ್ಟ್‌ಮೆಂಟ್ ಇರುವ ಜಾಗದಲ್ಲಿ ಸುಮಾರು 416.00 ಚ.ಮೀ ಮತ್ತು 45/2 ರಲ್ಲಿ 306.00 ಚ.ಮೀ ವಿಸ್ತೀರ್ಣ ಅಂದರೆ ಒಟ್ಟು 539.60 ಚ.ಮೀ ಅಥವಾ 5807 ಚ.ಅ ಜಾಗವು ರಸ್ತೆ ಅಗಲೀಕರಣಕ್ಕೆ ಅವಶ್ಯಕವಾಗಿ ಬೇಕಾಗಿರುತ್ತದೆ ಎಂದೂ, ಈ ವಿಸ್ತೀರ್ಣಕ್ಕೆ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರ (ಡಿಆರ್‌ಸಿ) ನೀಡಲು ಶಿಫಾರಸ್ಸು ಮಾಡಿರುತ್ತಾರೆ. ಸ್ವತ್ತುಗಳ ಅನುಭವದಾರರು/ಖಾತೆದಾರರು ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸರಿಯಾದ ಹಕ್ಕು ದಾಖಲೆಗಳನ್ನು ಸಲ್ಲಿಸದೆ ಇದ್ದುದರಿಂದಲೂ ಹಾಗೂ ಆಸ್ತಿಯ ಸಂಖ್ಯೆ:45/2 ರ ಹಕ್ಕಿನ ಬಗ್ಗೆ ಖಾತೆದಾರರಿಗೂ ಮತ್ತು ಹೈ ಪಾಯಿಂಟ್-4 ಓನರ್ಸ್ ಅಸೋಸಿಯೇಷಿಯನ್‌ರವರಿಗೂ ಗಂಭೀರತರನಾದ ವಿವಾದವಿದ್ದುದರಿಂದಲೂ ಖಾತೆದಾರರಿಗೆ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರ ವಿತರಿಸಲಾಗಿರುವುದಿಲ್ಲ. ನಂತರ ರಸ್ತೆ ಅಗಲೀಕರಣಕ್ಕೆ ಅವಶ್ಯವಿರುವ ಸ್ವತ್ತುಗಳನ್ನು ಉಪಯೋಗಿಸಿಕೊಂಡು ಪ್ಯಾಲೇಸ್ ರಸ್ತೆ ಅಗಲೀಕರಣವನ್ನು 2008-09ನೇ ಸಾಲಿನಲ್ಲಿ ನಿರ್ವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಸ್ವತ್ತಿನ ಖಾತೆದಾರರು/ಅನುಭವದಾರರಾದ ಶ್ರೀಮತಿ ಜಹರಾ ಬಾನೋ ಖಲೀಲಿ ಮತ್ತು ಇತರರು ಉಚ್ಚ ನ್ಯಾಯಾಲಯದಲ್ಲಿ 1.ಆಯುಕ್ತರು, ಬಿಬಿಎಂಪಿ ಮತ್ತು 2. ಹೈಪಾಯಿಂಟ್ ಓನರ್ಸ್ ಅಸೋಸಿಯೇಷನ್ ಮತ್ತು ಇತರರುಗಳ ವಿರುದ್ಧ ರಿಟ್ ಅರ್ಜಿ ಸಂಖ್ಯೆ: 38201-206/2010(ಎಲ್-ಆರ್‌ಇಎಸ್) ನ್ನು ರಿಟ್ ಅರ್ಜಿ ಸಲ್ಲಿಸಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಟಿಡಿಆರ್/ಪರಿಹಾರವನ್ನು ಯಾರಿಗೂ ಪಾವತಿಸಬಾರದೆಂದು ನಿರ್ದೇಶನ ನೀಡಲು ಕೋರಿರುತ್ತಾರೆ. ಈ ಮಧ್ಯೆ ನಡುವೆ ಖಾತೆದಾರರು ಪುನಃ ಅರ್ಜಿ ಸಲ್ಲಿಸಿ ಈ ಪ್ರಕರಣದ ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಂಡು ಮಾರ್ಗಸೂಚಿ ಬೆಲೆಯನ್ವಯ ಪರಿಹಾರವನ್ನು ಪಾವತಿಸಲು ಕೋರಿರುತ್ತಾರೆ. ಈ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:13-01-2012 ರಂದು ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

"Keeping in view of the submissions made by the learned counsel on both sides, the writ petitions stand disposed of, directing the 1st and 2nd respondents to consider the claims of the petitioners and the 3rd respondent in the matter of payment of compensation for having made use of a portion of the property of bearing old No.10, New No.45, situated at Palace Road for widening purpose and pass order/award within a period of 4 months from the date a copy of this order becomes available to the 1st respondent. The petitioners and the 3rd respondent are at liberty to file claim statements before the 3rd respondent, who is directed to consider the same and pass order.

Needless to observe that the petitioners and the 3rd respondent should be afforded reasonable opportunity of hearing by the concerned authority prior to taking of decision in the matter".

.................2

ಈ ಪ್ರಕರಣದಲ್ಲಿ ಈಗಾಗಲೇ ಸ್ವತ್ತಗಳನ್ನು ಉಪಯೋಗಿಸಿಕೊಂಡು ರಸ್ತೆ ಅಗಲೀಕರಣ ಕಾಮಗಾರಿ ನಿರ್ವಹಿಸಿರುವುದರಿಂದಲೂ, ಸ್ವತ್ತುಗಳ ಖಾತೆದಾರರು/ಅನುಭವದಾರರು ಅವರ ಸ್ವತ್ತುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಳಸಿಕೊಂಡಿರುವುದಕ್ಕೆ ಬದಲಾಗಿ ಟಿ.ಡಿ.ಆರ್. ಪಡೆಯಲು ನಿರಾಕರಿಸಿರುವುದರಿಂದಲೂ, ಈ ಪ್ರಕರಣದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಂಡು ಭೂಪರಿಹಾರ ಪಾವತಿಸಬೇಕಾಗಿರುತ್ತದೆ.

ಸ್ವತ್ತಿನ ಸಂಖ್ಯೆ: 45/1 ಮತ್ತು 45/2 ರಲ್ಲಿ ಅಪಾರ್ಟ್‌ಮೆಂಟ್ಸ್ ನಿರ್ಮಾಣವಾಗಿದ್ದು, ಅದರಲ್ಲಿನ 211.50 ಚ.ಮೀ (2275.74 ಚ.ಅ.) ಮತ್ತು 328.11 ಚ.ಮೀ. (3530.36 ಚ.ಅ.) ಜಾಗವನ್ನು ರಸ್ತೆ ಅಗಲೀಕರಣಕ್ಕಾಗಿ 2008-09ನೇ ಸಾಲಿನಲ್ಲಿ ಸ್ವಾಧೀನಕ್ಕೆ ಪಡೆದು ರಸ್ತೆ ವಿಸ್ತರಣೆ ಮಾಡಲಾಗಿದ್ದು, ಸ್ವತ್ತಿನ ಸಂಖ್ಯೆ:45/1 ರಲ್ಲಿನ ಲಾಲೆಹಜ್ಞಾರ್ ಅಪಾರ್ಟ್‌ಮೆಂಟ್‌ನಲ್ಲಿರುವ ಒಟ್ಟು 23 ಮನೆಗಳ ಖಾತೆದಾರರಿಗೆ ಹಾಗೂ ಸ್ವತ್ತಿನ ಸಂಖ್ಯೆ: 45/2 ರಲ್ಲಿರುವ ಹೈಪಾಯಿಂಟ್-4 ಅಸೋಸಿಯೇಷನ್‌ರವರಿಗೆ ಸ್ವತ್ತುಗಳ ದಾಖಲೆಗಳನ್ನು ಪಡೆದು ಟಿ.ಡಿ.ಆರ್/ಪರಿಹಾರ ವಿತರಿಸಬೇಕಾಗುತ್ತದೆ. ಆದರೆ ಸ್ವತ್ತಿನ ಸಂಖ್ಯೆ: 45/2 ರ ಮೂಲ ಖಾತೆದಾರರಾದ ಮಹಮ್ಮದ್ ರಹೀಂ ಖಲೀಲಿ ಮತ್ತು ಮಹಮ್ಮದ್ ಸಾದಿಕ್ ಖಲೀಲಿ ರವರ ಜಿ.ಪಿ.ಎ.ದಾರರಾದ ಶ್ರೀ. ಮಹಮ್ಮದ್ ಜ್ಞಾಕಿ ಖಲೀಲಿ ರವರು ಸ್ವತ್ತಿನ ಸಂಖ್ಯೆ: 45/2 ರಲ್ಲಿ ಭೂಸ್ವಾಧೀನಪಡಿಸಿಕೊಂಡಿರುವ ವಿಸ್ತೀರ್ಣವನ್ನು ಬಹಳ ಹಿಂದೆಯೇ ಅಂದರೆ 1974 ರಲ್ಲೇ ರಸ್ತೆ ಅಗಲೀಕರಣಕ್ಕೆ ಗುರುತಿಸಲಾಗಿದ್ದು, ಈ ವಿಸ್ತೀರ್ಣವನ್ನು ಹೈಪಾಯಿಂಟ್-4 ಅಸೋಸಿಯೇಷನ್ ರವರಿಗೆ ಹಸ್ತಾಂತರಿಸಿರುವುದಿಲ್ಲವಾದ್ದರಿಂದ, ಇದಕ್ಕೆ ಸಂಬಂಧಪಟ್ಟ ಪರಿಹಾರವನ್ನು ನಮಗೆ ನೀಡಬೇಕೆಂದು ಕೋರಿರುತ್ತಾರೆ. ಈ ಅಂಶಗಳನ್ನು ಭೂಸ್ವಾಧೀನ ಕಾಯ್ದೆ ಕಲಂ 5 ರನ್ವಯ ನಡೆಯುವ ವಿಚಾರಣೆಯ ಸಮಯದಲ್ಲಿ ಖಚಿತಪಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ನ್ಯಾಯಾಲಯದ ಆದೇಶದಂತೆ ಈ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಂಡು ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಅಭಿಪ್ರಾಯಪಡಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಈ ಪ್ರಕರಣದಲ್ಲಿ ರಸ್ತೆ ಅಗಲೀಕರಣಕ್ಕೆ ಉಪಯೋಗಿಸಿಕೊಂಡಿದ್ದು, ಉಚ್ಚ ನ್ಯಾಯಾಲಯದ ಆದೇಶದನ್ವಯ ಭೂಪರಿಹಾರ ಪಾವತಿಸಲು ಭೂಸ್ವಾಧೀನ ಕಾಯ್ದೆ 1894 ರಂತೆ ಭೂಸ್ವಾಧೀನಪಡಿಸಿಕೊಳ್ಳಬೇಕಾಗಿರುವ ಸ್ವತ್ತುಗಳ ವಿವರ ಮತ್ತು ಸ್ವತ್ತಿಗಳಲ್ಲಿನ ಅಪಾರ್ಟ್‌ಮೆಂಟ್‌ನಲ್ಲಿರುವ ಖಾತೆದಾರರ ವಿವರ ಈ ಕೆಳಕಂಡಂತೆ ಇರುತ್ತದೆ.

.................3

| ಸ್ವತ್ತಿನ ಸಂಖ್ಯೆ | ಸ್ವತ್ತಿನ ಖಾತೆ ಸಂಖ್ಯೆ ಮತ್ತು ಖಾತೆದಾರರ ಹೆಸರು | ಸ್ವತ್ತಿನ ಒಟ್ಟು ವಿಸ್ತೀರ್ಣ | ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ವಿಸ್ತೀರ್ಣ | ತರಹೆ | ಚಕ್ಕುಬಂದಿ |
|---|---|---|---|---|---|
| 45/1 | 1) 45/1: ಮಂದೆಪಂದ ಅಪ್ಪಯ್ಯ ಗಣಪತಿ ಮತ್ತು ವನಿತ ಗಣಪತಿ<br>2) 45/1-1: 1. ಪ್ರಿಯಾ ಚೆಟ್ಟಿ 2. ಮಲ್ಲಿಕಾರ್ಜುನನ್ ರಾಜಗೋಪಾಲ್<br>3) 45/1-2: ಜಿ.ಶ್ವೇತಾ<br>4) 45/1-3:ಜಿ.ಕಿರಿಟಿ<br>5) 45/1-4:ಅತುಲ್‌ಗಾಲ<br>6) 45/1-5:ನಳಿನಿ ಪ್ರಭು<br>7) 45/1-6:ಶ್ರೀಮತಿ ಜಹರಾ ಬಾನೋ ಖಲೀಲಿ<br>8) 45/1-7: ಮಹಮ್ಮದ್ ಸಾದ್ವಿಕ್ ಖಲೀಲಿ<br>9) 45/1-8: ಮಹೇಶ್ ಎನ್. ಮದ್ವಾನಿ<br>10) 45/1-9:ಶ್ರೀಮತಿ.ಅರುಣ ವಸಂತನ್<br>11) 45/1-10: ಜಗದೀಶ್ ಲಚ್ಮನ್‌ದಾಸ್ ಮತ್ತು ಶ್ರೀಮತಿ ದೀಪ.ಜೆ.ಕೆ<br>12) 45/1-11: ಮಹಮ್ಮದ್ ಝಾಕಿ ಖಲೀಲಿ<br>13) 45/1-12:ಗಿರೀಶ್ ಕುಮಾರ್ ಸಿಂಗ್ ಚೌಧರಿ<br>14) 45/1-13:ಎಸ್.ಎಲ್.ಧರ್ಮೇಗೌಡ ಮತ್ತು ಶ್ರೀಮತಿ ಮಮತ.ಎಂ<br>15) 45/1-14: ಶೀಲಾ ವಿ. ಬಂಗೇರ<br>16) 45/1-15:ಶ್ರೀಮತಿ ಸರೋಜಿನಿ ಆರ್.ಪಿಳ್ಳೈ<br>17) 45/1-16: ಶ್ರೀಕುಮಾರ್ ಲಕೋಟಿಯ<br>18) 45/1-17:ಮೆ॥ ಹಾರ್ಮೊನಿ ಸಿಲ್ಕ್ಸ್ ಪ್ರೈವೇಟ್ ಲಿಮಿಟೆಡ್.<br>19) 45/1-18: ಸುಹೈಲ್ ಸೈಯದ್ ಮತ್ತು ಮರಿಯಮ್ ಸುಹೈಲ್<br>20)45/1-19: ಮೊಯೀನ್ ಖಲೀಲಿ<br>21) 45/1-19-1: ಎ.ಎನ್. ಜಯರಾಂ ಮತ್ತು ಮಾಳವಿಕ ಜಯರಾಂ<br>22) 45/1-20: ಮೆ: ಹೈವೇ ಹೋಟೆಲ್ ಲಿಮಿಟೆಡ್<br>23) 45/1-21: ಶ್ರೀಮತಿ ನಫೀಸಾ ಸಾದಿಕ್ ಖಲೀಲಿ | 26972 ಚ.ಅ. | 211.50 ಚ.ಮೀ (2275.74 ಚ.ಅ.) | ಖಾಲಿ ನಿವೇಶನ | ಪೂ-ಪ್ಯಾಲೆಸ್ ರಸ್ತೆ<br>ಪ-ಹೈಪಾಯಿಂಟ್-4 ರ ಸ್ವತ್ತು.<br>ಉ-ಖಾಸಗಿ ಸ್ವತ್ತು<br>ದ-ಹೈಪಾಯಿಂಟ್-3 ಮತ್ತು 4 ರ ಸ್ವತ್ತು. |
| 45/2 | ಮಹಮ್ಮದ್ ಸಾದಿಕ್ ಖಲೀಲಿ ಮತ್ತು ಹೈಪಾಯಿಂಟ್-4 ಅಸೋಸಿಯೇಷನ್ | 26746 ಚ.ಅಡಿ | 328.11 ಚ.ಮೀ. (3530.36 ಚ.ಅ.) | ಖಾಲಿ ನಿವೇಶನ | ಪೂ-ಪ್ಯಾಲೆಸ್ ರಸ್ತೆ<br>ಪ-ಉಳಿಕೆ ಜಾಗ<br>ಉ-ಸ್ವತ್ತಿನ ನಂ.45/1, 45/1-21 ಮತ್ತು ಹೈಪಾಯಿಂಟ್-4 ರ ಸ್ವತ್ತು.<br>ದ-ಸಿ.ಟಿ.ಎಸ್.64 |

ಮುದ್ರಾಂಕ ಮತ್ತು ನೋಂದಣಿ ಇಲಾಖೆ ದಿ:21-09-2011 ರಂದು ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ವಯ ಪ್ಯಾಲೇಸ್ ರಸ್ತೆಯ ಭಾಗದಲ್ಲಿ ಚ.ಅ. 1 ಕ್ಕೆ ರೂ.6500 ಮಾರುಕಟ್ಟೆ ಬೆಲೆ ಇರುತ್ತದೆ ಎಂದು ಪ್ರಕಟಿಸಿರುತ್ತಾರೆ. ಈ ಬೆಲೆಯನ್ನು ಗಣನೆಗೆ ತೆಗೆದುಕೊಂಡಾಗ ಭೂಸ್ವಾಧೀನಪಡಿಸಿಕೊಳ್ಳುವ ಸ್ವತ್ತುಗಳಿಗೆ, ಪಾವತಿಸಬೇಕಾದ ಭೂಪರಿಹಾರ ಮತ್ತು ಇತರೆ ವೆಚ್ಚಗಳ ವಿವರಗಳು ಈ ರೀತಿ ಇರುತ್ತವೆ.

.................4

## "ಭೂ ಪರಿಹಾರ ಮತ್ತು ಇತರೆ ವೆಚ್ಚಗಳು"

| ಕ್ರ ಸಂ. | ವಿವರಣೆ | ಮೊಬಲಗು (ರೂ.) |
|---|---|---|
| 1 | ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ 5806.10 ಚ.ಅ. ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆ ಚ.ಅ.ಗೆ 6500/- | **3,77,39,650/-** |
| 2 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆಯ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | **45,28,758/-** |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರ ಅನ್ವಯ ಶೇಕಡಾ 30 ರಂತೆ ಶಾಸನಬದ್ಧ ಭತ್ಯೆ | **1,13,21,895/-** |
| | **(1+2+3)** | **5,35,90,303/-** |
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | **ಕೈಬಿಡಲಾಗಿದೆ** |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | **ಕೈಬಿಡಲಾಗಿದೆ** |
| 6 | ಪ್ರಕಟಣಾ ವೆಚ್ಚ | **1,00,000/-** |
| | **ಒಟ್ಟು** | **5,36,90,303/-** |

**ಷರಾ:** ದಿನಾಂಕ: 5-9-1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ಐದು ಕೋಟಿ ಮೂವತ್ತಾರು ಲಕ್ಷದ ತೊಂಭತ್ತು ಸಾವಿರದ ಮುನ್ನೂರ ಮೂರು ರೂಗಳು ಮಾತ್ರ)**

ಈ ಪ್ರಕರಣದಲ್ಲಿನ ರಸ್ತೆ ಅಗಲೀಕರಣ ಕಾಮಗಾರಿಗೆ ಸರ್ಕಾರದ ಅನುಮೋದನೆ ಪಡೆದು 2008-09 ರಲ್ಲಿ ನಿರ್ವಹಿಸಿ ಪೂರ್ಣಗೊಳಿಸಿರುವುದರಿಂದಲೂ ಮಾನ್ಯ ಉಚ್ಚ ನ್ಯಾಯಾಲಯದಿಂದ ನಗದು ಪರಿಹಾರ ಪಾವತಿಸುವಂತೆ ಆದೇಶವಾಗಿರುವುದಿಂದಲೂ, ಈ ಹಂತದಲ್ಲಿ ಭೂಪರಿಹಾರ ಪಾವತಿಸಲು, ತಯಾರಿಸಲಾಗಿರುವ ಟಿಪ್ಪಣಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಅವಶ್ಯಕತೆ ಇರುವುದಿಲ್ಲ ಎಂದು ಅಭಿಪ್ರಾಯ ಪಟ್ಟು ಈ ಪ್ರಕರಣದ ಸ್ವತ್ತುಗಳನ್ನು 1894ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಅಂದಾಜು ಭೂಸ್ವಾಧೀನ ವೆಚ್ಚ ರೂ. **5,36,90,303/- (ರೂ. ಐದು ಕೋಟಿ ಮೂವತ್ತಾರು ಲಕ್ಷದ ತೊಂಭತ್ತು ಸಾವಿರದ ಮುನ್ನೂರ ಮೂರು ಮಾತ್ರ)** ಗಳಾಗಲಿದ್ದು, ಈ ಮೊತ್ತವನ್ನು 2011-12 ನೇ ಸಾಲಿನ ಆಯವ್ಯಯದಲ್ಲಿ ಭರಿಸುವ ಬಗ್ಗೆ ಸೂಕ್ತ ತೀರ್ಮಾನವನ್ನು ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಟಿಪ್ಪಣಿ ಮಂಡಿಸಲಾಗಿತ್ತು.

ಆದರೆ, ದಿನಾಂಕ:28-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯ ಸಂಖ್ಯೆ:4(379)/2011-12 ರಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿರುತ್ತದೆ.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:24-03-2012 ರ ಟಿಪ್ಪಣಿಯನ್ನು ಒಪ್ಪುತ್ತಾ, ಅರ್ಜಿದಾರರಿಗೆ ಭೂಪರಿಹಾರ ನೀಡುವ ಮೊದಲು ಅರ್ಜಿದಾರರು ಈ ಮೊದಲು ದಾಖಲಾತಿಗಳನ್ನು ಒದಗಿಸಿ ಟಿ.ಡಿ.ಆರ್ ಪಡೆಯಲು ಒಪ್ಪಿದ್ದು ಆದರೆ ನಂತರದಲ್ಲಿ ಅರ್ಜಿದಾರರಿಗೆ ಪಾಲಿಕೆಗೆ ಸೂಕ್ತ

.................5

ದಾಖಲಾತಿಗಳನ್ನು ಒದಗಿಸದೇ ನೇರವಾಗಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ ತಮಗೆ ಭೂಪರಿಹಾರ ನೀಡುವಂತೆ ಕೋರಲಾದ ಹಿನ್ನಲೆಯಲ್ಲಿ, ಅರ್ಜಿದಾರರಿಗೆ ಪರಿಹಾರವನ್ನು ಪಾವತಿಸಲು ಉಚ್ಚ ನ್ಯಾಯಾಲಯವು ಆದೇಶಿಸಿರುವುದರಿಂದ ಪ್ರಸ್ತುತ ಪಾಲಿಕೆಯಿಂದ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಭೂಪರಿಹಾರಕ್ಕೆ ಬದಲಾಗಿ ಟಿ.ಡಿ.ಆರ್. ಪಡೆಯಲು ಈ ಹಿಂದೆ ಅರ್ಜಿದಾರರು ಒಪ್ಪಲಾದ ಹಿನ್ನಲೆಯಲ್ಲಿ ಈ ಬಗ್ಗೆ ಮಾನ್ಯ ನ್ಯಾಯಾಲಯದ ಅವಗಾಹನೆಗೆ ತಂದು ಅಗತ್ಯ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು".

ಆದರೆ 1961ರ ಕರ್ನಾಟಕ ಪಟ್ಟಣ ನಗರ ಯೋಜನೆ ಕಾಯ್ದೆಯ ಕಲಂ 14ಬಿ ರನ್ವಯ ಯಾವುದೇ ಖಾಸಗಿ ಆಸ್ತಿಯನ್ನು ಅಭಿವೃದ್ಧಿಗೋಸ್ಕರ, ಟಿ.ಡಿ.ಆರ್. ಅನ್ವಯ ಬಿಟ್ಟುಕೊಡಬೇಕೆಂದು ಒತ್ತಾಯ ಮಾಡಲು ಅವಕಾಶವಿರುವುದಿಲ್ಲ. ಅಲ್ಲದೇ ಆಸ್ತಿಯನ್ನು ಟಿ.ಡಿ.ಆರ್. ರನ್ವಯ ಬಿಟ್ಟುಕೊಡುವ ಅಧಿಕಾರವು ಸ್ವತ್ತಿನ ಖಾತೆದಾರರ ಇಚ್ಚೆಗೆ ಬಿಟ್ಟ ವಿಷಯವಾಗಿರುತ್ತದೆ. ಈ ಪ್ರಸ್ತುತ ಪ್ರಕರಣದಲ್ಲಿ ಖಾತೆದಾರರ ಆಸ್ತಿಯನ್ನು ರಸ್ತೆ ಅಗಲೀಕರಣಕ್ಕೆ ಭೂಸ್ವಾಧೀನಪಡಿಸಿಕೊಂಡು ಟಿ.ಡಿ.ಆರ್. ಬದಲಾಗಿ ನಗದು ಪರಿಹಾರ ನೀಡಬೇಕೆಂದು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರ ಮೇರೆಗೆ ನ್ಯಾಯಾಲಯವು ಈ ಪ್ರಕರಣದ ಆಸ್ತಿಯನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಂಡು ಪರಿಹಾರವನ್ನು 4 ತಿಂಗಳೊಳಗೆ ಪಾವತಿಸುವಂತೆ ನಿರ್ದೇಶನ ನೀಡಿರುತ್ತದೆ. ಆದರೆ ಪಾಲಿಕೆಯು ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧವಾಗಿ ನಿರ್ಣಯ ಕೈಗೊಂಡಿರುವುದರಿಂದ ಈ ನಿರ್ಣಯವನ್ನು ಪುನರ್ ಪರಿಶೀಲಿಸಿ ಈ ಪ್ರಕರಣದ ಸ್ವತ್ತನ್ನ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳುವಂತೆ ನಿರ್ಣಯ ತೆಗೆದುಕೊಳ್ಳಲು ಮಂಡಿಸಲಾದ ಟಿಪ್ಪಣಿ. ಇಲ್ಲದೇ ಇದ್ದಲ್ಲಿ ನ್ಯಾಯಾಲಯದ ಆದೇಶದ ನಿಂದನೆ ಆಗುವ ಸಂಭವವಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಪ್ರಸ್ತಾವನೆ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 05-06-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನ್ಯಾಯಾಲಯದ ಆದೇಶದಂತೆ ಕ್ರಮವಹಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನ್ಯಾಯಾಲಯದ ಆದೇಶದಂತೆ ಕ್ರಮವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 38 (214) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ಮಾಜಿ ಸದಸ್ಯರಾಗಿದ್ದ ದಿವಂಗತ ಪೂಸಲಿಂಗಮ್ ರವರಿಗೆ ಅಲಸೂರು ಟ್ಯಾಂಕ್ ರಸ್ತೆಯಲ್ಲಿನ ವಸತಿ ಗೃಹ ಸಂಖ್ಯೆ:42(23) ಅನ್ನು 1970ರಲ್ಲಿ ಹಂಚಿಕೆ ಮಾಡಿದ್ದು, ಅವರ ಮರಣದ ನಂತರ ಪಾಲಿಕೆಯ ವಸತಿ ಗೃಹವನ್ನು ತೆರವು ಮಾಡಿ ಪಾಲಿಕೆಯ ವಶಕ್ಕೆ ನೀಡದೆ ಅವರ ಪತ್ನಿ ಮತ್ತು ಮಕ್ಕಳು ವಾಸವಾಗಿದ್ದು, ಇವರುಗಳನ್ನು ಪಾಲಿಕೆಯ ವಸತಿ ಗೃಹದಿಂದ ಹೊರ ಹಾಕಲು ಪಾಲಿಕೆಯ ವತಿಯಿಂದ ಕ್ರಮ ಜರುಗಿಸಲಾಗಿರುತ್ತದೆ.

ಪಾಲಿಕೆಯ ಮಾಜಿ ಸದಸ್ಯರಾಗಿದ್ದ ದಿವಂಗತ ಪೂಸಲಿಂಗಮ್ ರವರ ಪತ್ನಿಯಾದ ಶ್ರೀಮತಿ.ಕೌಶಲ್ಯ ಇವರು ವಸತಿ ಗೃಹವನ್ನು ಕ್ರಯಕ್ಕೆ ನೀಡಲು ಕೋರಿದ್ದು, ದಿನಾಂಕ: 30-05-2006 ರಂದು ವಿಷಯದ ಸಂಖ್ಯೆ: 79/2006-07 ರಲ್ಲಿ ಕ್ರಯಕ್ಕೆ ನೀಡಲು ತೀರ್ಮಾನಿಸಿರುತ್ತದೆ.

ಕ್ರಯಕ್ಕೆ ನೀಡಲು ಕೋರಿರುವ ಆಸ್ತಿಯನ್ನು ಮಾರಾಟ ಮಾಡಿದಲ್ಲಿ ಕೆರೆಯನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಅಡಚಣೆಯಾಗುವುದರಿಂದ ಹಾಗೂ ಇದೇ ವಸತಿ ಗೃಹದ ಸಮುಚ್ಛಯದಲ್ಲಿರುವ ಪಾಲಿಕೆಯ ಇತರೆ ವಸತಿ ಗೃಹಗಳನ್ನು ಸಹ ಕ್ರಯಕ್ಕೆ ನೀಡುವಂತೆ ಕೋರಿಕೆಗಳು ಬರುವ ಸಾಧ್ಯತೆಗಳಿರುವುದರಿಂದ, ವಸತಿ ಗೃಹ ಸಂಖ್ಯೆ: 42(23) ಅನ್ನು ಮಾರಾಟ ಮಾಡುವಂತೆ ದಿನಾಂಕ:30-05-2006 ರಂದು ವಿಷಯದ ಸಂಖ್ಯೆ:79/2006-07 ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸುವಂತೆ ಸರ್ಕಾರವನ್ನು ದಿನಾಂಕ: 24-06-2006 ರಲ್ಲಿ ಕೋರಲಾಗಿತ್ತು.

ತದನಂತರ, ದಿನಾಂಕ:30-03-2010 ರಂದು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಮುಂದೆ ಮಂಡಿಸುವಂತೆ ನಿರ್ದೇಶಿಸಿದ್ದು, ಇದರಂತೆ ದಿನಾಂಕ: 26-10-2010 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಕರಣವನ್ನು ಮಂಡಿಸಲಾಗಿದ್ದು, ಸಲಹಾ ಸಮಿತಿಯು ಪ್ರಸ್ತಾಪಿತ ವಸತಿ ಗೃಹವು ಪಾಲಿಕೆಯ ಉಪಯೋಗಕ್ಕೆ ಅಗತ್ಯವಾಗಿರುವುದರಿಂದ, ಸದರಿ ವಸತಿ ಗೃಹವನ್ನು ಪಾಲಿಕೆಯ ವಶಕ್ಕೆ ತೆಗೆದುಕೊಳ್ಳುವಂತೆ ತೀರ್ಮಾನಿಸಲಾಗಿದ್ದು, ದಿನಾಂಕ:19-03-2011 ರ ಪತ್ರದಲ್ಲಿ ಸಲಹಾ ಸಮಿತಿ ತೆಗೆದುಕೊಂಡ ನಿರ್ಣಯದ ಅನುಮೋದನೆ ಕೋರಲಾಗಿತ್ತು.

ತತ್ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ನಅಇ/169/ಎಂಎನ್‌ಜಿ/2011, ದಿನಾಂಕ:09-11-2011 ರಂದು ಕಾರಣ ಕೇಳುವ ನೋಟೀಸ್ ನೀಡಿ, ದಿನಾಂಕ:30-05-2006 ರಂದು ನಡೆದ ಪಾಲಿಕೆ ಸಭೆಯ ವಿಷಯದ ಸಂಖ್ಯೆ:79/2006-07 ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬುದಕ್ಕೆ ಕರ್ನಾಟಕ ಪೌರನಿಗಮಗಳ ಕಾಯ್ದೆ-1976 ರ ಕಲಂ-78(2) ರನ್ವಯ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಪಾಲಿಕೆಯ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಹೇಳಿಕೆ/ಸಮಜಾಯಿಷಿಗಳೇನಾದರೂ ಇದ್ದಲ್ಲಿ, ನೋಟೀಸ್ ತಲುಪಿದ 15 ದಿವಸದೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸೂಚಿಸಿದ್ದರ ಮೇರೆಗೆ, ದಿನಾಂಕ:03-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ:44(295)/2011-12 ರಲ್ಲಿ ಪ್ರಸ್ತಾವನೆಯನ್ನು ಕೈಬಿಟ್ಟು ಸ್ವತ್ತನ್ನು ಪಾಲಿಕೆ ವಶಕ್ಕೆ ಪಡೆಯುವುದೆಂದು ತೀರ್ಮಾನಿಸಲಾಗಿತ್ತು. ಅದರಂತೆ, ಪಾಲಿಕೆಯ ನಿರ್ಣಯಕ್ಕೆ ಸರ್ಕಾರದಿಂದ ಅನುಮೋದನೆ ಕೋರಲಾಗಿತ್ತು.

..........2

ಈ ಬಗ್ಗೆ ಘನ ಸರ್ಕಾರವು ತನ್ನ ಆದೇಶ ಸಂಖ್ಯೆ: ನಅಇ 169 ಎಂಎನ್‌ಜಿ 2011, ದಿನಾಂಕ: 16-07-2012 ರಲ್ಲಿ ಪಾಲಿಕೆಯ ಮಾಜಿ ಸದಸ್ಯರಾಗಿದ್ದ ದಿವಂಗತ ಮೂಸಲಿಂಗಮ್‌ರವರಿಗೆ ಹಂಚಿಕೆ ಮಾಡಲಾಗಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹಲಸೂರು ಟ್ಯಾಂಕ್ ರಸ್ತೆಯಲ್ಲಿನ ವಸತಿ ಗೃಹ ಸಂಖ್ಯೆ:42 ಅನ್ನು ಕ್ರಯಕ್ಕೆ ನೀಡಲು ಪಾಲಿಕೆ ಸಭೆಯ ದಿನಾಂಕ:30-05-2006 ರಂದು ವಿಷಯ ಸಂಖ್ಯೆ:79/2006-07 ರಲ್ಲಿ ಕೈಗೊಂಡಿರುವ ನಿರ್ಣಯವನ್ನು ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 98(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರದ್ದುಗೊಳಿಸಿ ಆದೇಶಿಸಿದೆ.

ಈ ಹಿನ್ನಲೆಯಲ್ಲಿ, ಸದರಿ ಸರ್ಕಾರದ ಆದೇಶವನ್ನು ದಾಖಲಾತಿ ಮಾಡಿಕೊಳ್ಳುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 02-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪುನರ್ ಪರಿಶೀಲನೆಗಾಗಿ ಕಡತವನ್ನು ಸರ್ಕಾರಕ್ಕೆ ಕಳುಹಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪುನರ್ ಪರಿಶೀಲನೆಗಾಗಿ ಕಡತವನ್ನು ಸರ್ಕಾರಕ್ಕೆ
ಕಳುಹಿಸುವುದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 39 (215) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೇಗೂರು ಮುಖ್ಯ ರಸ್ತೆಯು (ಹೊಸೂರು ರಸ್ತೆಯಿಂದ ಬೊಮ್ಮನಹಳ್ಳಿ ಮತ್ತು ಹೊಂಗಸಂದ್ರ ಮಾರ್ಗವಾಗಿ ಬೇಗೂರುವರೆಗೆ) 4.50 ಕಿ.ಮೀ ಉದ್ದವಿದ್ದು, ರಸ್ತೆಯಲ್ಲಿ ವಾಹನ ಸಾಂದ್ರತೆಗೆ ಅನುಗುಣವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸಿದ್ಧಪಡಿಸಿರುವ ಪರಿಷ್ಕೃತ ಮಹಾ ನಕ್ಷೆ (RMP) – 2015 ರಂತೆ, ಸದರಿ ರಸ್ತೆಯನ್ನು 24.00 ಮೀಟರ್ (80 ಅಡಿ) ಗಳಿಗೆ ಟಿ.ಡಿ.ಆರ್ ಯೋಜನೆಯಡಿ ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಲು ಯೋಜಿಸಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ, ರಸ್ತೆಯ Alignment Plan (ಪಂಕ್ತೀಕರಣ ನಕ್ಷೆ) ಅನ್ನು ಹಾಗೂ 14-B ರಂತೆ Karnataka Town and Country planning Act-1961 (Karnataka Act 1963) and as per the terms and conditions of the Government of Karnataka Notification No.UDD/154/BEM/RUPRA/2004 Dated:18-01-2005 ರಂತೆ ನೋಟಿಫಿಕೇಷನ್ ಹೊರಡಿಸಲಾಗಿರುತ್ತದೆ.

ಮಾನ್ಯ ಶಾಸಕರಾದ ಶ್ರೀ.ಸತೀಶ್ ರೆಡ್ಡಿಯವರು 27-07-2011 ರಂದು ಸಾರ್ವಜನಿಕ ಸಭೆಯನ್ನು ಕರೆದು, ರಸ್ತೆ ಅಗಲೀಕರಣಕ್ಕೆ (24.00 ಮೀಟರ್) ಬೇಕಾದಂತಹ ಜಾಗವನ್ನು ಬಿಟ್ಟುಕೊಡುವಂತೆ ವಿನಂತಿಸಿದಾಗ ಸಭೆಯಲ್ಲಿ ಭಿನ್ನಾಭಿಪ್ರಾಯಗಳು ಬಂದು, ಹೆಚ್ಚಿನ ಸಾರ್ವಜನಿಕರು 24.00 ಮೀ.ಗೆ ಬದಲಾಗಿ 18.28 ಮೀಟರ್ ಅಗಲೀಕರಣ ಮಾಡಿದಲ್ಲಿ ಟಿ.ಡಿ.ಆರ್. ಮೂಲಕ ರಸ್ತೆ ಅಗಲೀಕರಣಕ್ಕೆ ಅಗತ್ಯವಿರುವ ಜಾಗವನ್ನು ಬಿಟ್ಟುಕೊಡುವುದಾಗಿ ತಿಳಿಸಿರುತ್ತಾರೆ.

ಅಲ್ಲದೇ ದಿನಾಂಕ:18-01-2012 ರಂದು ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳ ಬಗ್ಗೆ ನಡೆದ ಸಭೆಯಲ್ಲಿ ಬೇಗೂರು ರಸ್ತೆಯ ಅಗಲೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಮಾನ್ಯ ಶಾಸಕರು ಕೋರಿರುವುದರ ಮೇರೆಗೆ ಮಾನ್ಯ ಆಯುಕ್ತರು ಬೇಗೂರು ರಸ್ತೆಯನ್ನು 18.28 ಮೀಟರ್ (60 ಅಡಿ) ಅಗಲೀಕರಣಗೊಳಿಸುವ ಕಾಮಗಾರಿಗೆ ಸಂಬಂಧಪಟ್ಟಂತೆ Notification ಹೊರಡಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲು ಪ್ರಸ್ತಾಪಿಸಿರುತ್ತಾರೆ.

ಹೆಚ್ಚುವರಿ ನಿರ್ದೇಶಕರು (ನಗರ ಯೋಜನೆ) ರವರು ಆರ್.ಎಂ.ಪಿ–2015 ರಂತೆ ರಸ್ತೆಯನ್ನು 24.00 ಮೀಟರ್ (80 ಅಡಿ) ಗಳಿಗೆ ವಿಸ್ತರಿಸಲು ಪ್ರಸ್ತಾಪಿಸಲಾಗಿರುತ್ತದೆ. ಆದರೆ, ಈಗ 18.28 ಮೀಟರ್ (60 ಅಡಿ) ಅಗಲಕ್ಕೆ ವಿಸ್ತರಿಸುವ ಪ್ರಸ್ತಾವನೆಯನ್ನು ಸಕಾರಣಗಳೊಂದಿಗೆ ಸರ್ಕಾರದ ಅನುಮತಿಗಾಗಿ ಸಲ್ಲಿಸಿ ಅನುಮೋದನೆಯನ್ನು ನಿರೀಕ್ಷಿಸಿ, ಪರಿಷ್ಕೃತ ಅಧಿಸೂಚನೆ ಅಂದರೆ 18.28 ಮೀಟರ್ (60 ಅಡಿ) ಗೆ ರಸ್ತೆಯನ್ನು ಅಗಲೀಕರಣ ಕೈಗೊಳ್ಳಬಹುದು ಎಂದು ತಿಳಿಸಿರುತ್ತಾರೆ.

ಈ ಮೇರೆಗೆ ಬೇಗೂರು ಮುಖ್ಯರಸ್ತೆ (ಹೊಸೂರು ರಸ್ತೆಯಿಂದ ಬೊಮ್ಮನಹಳ್ಳಿ ಮತ್ತು ಹೊಂಗಸಂದ್ರ ಮಾರ್ಗವಾಗಿ ಬೇಗೂರುವರೆಗೆ) ರಸ್ತೆಯನ್ನು 24.00 ಮೀಟರ್‌ಗೆ ಬದಲಾಗಿ 18.28 ಮೀಟರ್‌ಗೆ (60 ಅಡಿಗಳಿಗೆ) ಅಗಲೀಕರಣಗೊಳಿಸಲು ಅನುಮೋದನೆಗಾಗಿ ಹಾಗೂ ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ರಸ್ತೆ ಅಗಲೀಕರಣ ಪ್ರಕ್ರಿಯೆಯನ್ನು ಪ್ರಾರಂಭಿಸಲು ಅನುಮೋದನೆ ಸಲ್ಲಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:16-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 17-07-2012ರ ನಿರ್ಣಯ.

.................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 17-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 40 (173) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಹೆಚ್.ಸುರೇಶ್, ನಗರ ಪಾಲಿಕೆ ಸದಸ್ಯರು ದಿನಾಂಕ: 12-12-2011 ರಂದು ಪೂಜ್ಯ ಮಹಾಪೌರರಿಗೆ ಮನವಿ ಪತ್ರವನ್ನು ಸಲ್ಲಿಸಿ, ವಾರ್ಡ್ ಸಂಖ್ಯೆ:181ರ ವ್ಯಾಪ್ತಿಯಲ್ಲಿ ಬರುವ ಇಸ್ರೋ ಬಡಾವಣೆ, 1ನೇ ಮುಖ್ಯ ರಸ್ತೆ, 7ನೇ ಅಡ್ಡರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಉದ್ಯಾನವನಕ್ಕೆ "ಪ್ರೋ. ದೀನ್ ದಯಾಳ್ ಉಪಾಧ್ಯಾಯ ಉದ್ಯಾನವನ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಪ್ರೋ. ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ರವರು ಜನಸಂಘದ ಅಧ್ಯಕ್ಷರಾಗಿದ್ದು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಐತಿಹಾಸಿಕ ಪ್ರಾಮುಖ್ಯತೆಯುಳ್ಳವರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 18 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೆ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976ರ 293ನೇ ಪ್ರಕರಣದ(1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರ ಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಅನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು, ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ, ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಹಾಗೂ ಕಲಂ 7 ರಲ್ಲಿ ಸಾಮಾನ್ಯವಾಗಿ ಒಂದು ನಗರ ಪಾಲಿಕೆಯ ಪ್ರದೇಶದೊಳಗಿನ ಯಾವುದೇ ಎರಡು ಬೀದಿಗಳು, ವೃತ್ತಗಳು, ಚೌಕಗಳು, ಪಾರ್ಕ್‌ಗಳು, ಉದ್ಯಾನವನಗಳು, ಯಾವುದೇ ಇತರ ಸಾರ್ವಜನಿಕ ಸ್ಥಳಗಳು ಒಂದೇ ರೀತಿಯ ಹೆಸರನ್ನು ಹೊಂದಿರತಕ್ಕದ್ದಲ್ಲ ಎಂದು ಉಲ್ಲೇಖಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 181ರ ವ್ಯಾಪ್ತಿಯಲ್ಲಿ ಬರುವ ಇಸ್ರೋ ಬಡಾವಣೆ, 1ನೇ ಮುಖ್ಯ ರಸ್ತೆ, 7ನೇ ಅಡ್ಡರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಉದ್ಯಾನವನಕ್ಕೆ "ಪ್ರೋ. ದೀನ್ ದಯಾಳ್ ಉಪಾಧ್ಯಾಯ ಉದ್ಯಾನವನ" ಎಂದು ನಾಮಕರಣ ಮಾಡಿರುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲಾಗಿರುತ್ತದೆ. ಆದುದರಿಂದ, ಪ್ರಸ್ತುತ ವಾರ್ಡ್ ಸಂಖ್ಯೆ:181ರ ವ್ಯಾಪ್ತಿಯಲ್ಲಿ ಬರುವ ಇಸ್ರೋ ಬಡಾವಣೆ, 1ನೇ ಮುಖ್ಯ ರಸ್ತೆ, 7ನೇ ಅಡ್ಡರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಉದ್ಯಾನವನಕ್ಕೆ "ಪ್ರೋ. ದೀನ್ ದಯಾಳ್ ಉಪಾಧ್ಯಾಯ ಉದ್ಯಾನವನ" ಎಂದು ನಾಮಕರಣ ಮಾಡಲು ಅವಕಾಶವಿರುವುದಿಲ್ಲ.

.................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆ ಕುರಿತಂತೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-05-2012 ರ ಟಿಪ್ಪಣಿ ಹಾಗೂ ದಿನಾಂಕ:21-05-2012 ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಿ, "ಪ್ರೋ. ದೀನ್ ದಯಾಳ್ ಉಪಾಧ್ಯಾಯ ಉದ್ಯಾನವನ" ಎಂದು ನಾಮಕರಣ ಮಾಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-06-2012ರ ನಿರ್ಣಯ ಒಪ್ಪುತ್ತಾ, ಪ್ರಸ್ತಾಪಿತ ಉದ್ಯಾನವನಕ್ಕೆ "ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಉದ್ಯಾನವನ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05-06-2012ರ ನಿರ್ಣಯ ಒಪ್ಪುತ್ತಾ, ಪ್ರಸ್ತಾಪಿತ ಉದ್ಯಾನವನಕ್ಕೆ "ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಉದ್ಯಾನವನ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 41 (199) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ : 125ರ ವ್ಯಾಪ್ತಿಯಲ್ಲಿ ಬರುವ ಮಾರುತಿ ಬಡಾವಣೆಯಲ್ಲಿರುವ ಅಧಿಕ ವಿದ್ಯುತ್ ಕೆಳಭಾಗದ ಉದ್ಯಾನವನಕ್ಕೆ "ಶ್ರೀ ಕನಕಪುರಂದರ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ದಿನಾಂಕ:28-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ: 13(388)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ, ಸಾರ್ವಜನಿಕರು ಆಕ್ಷೇಪಣೆಗಳು/ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-06-2012 ಮತ್ತು ದಿನಾಂಕ:07-06-2012 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ವಾರ್ಡ್ ಸಂಖ್ಯೆ:125ರ ವ್ಯಾಪ್ತಿಯಲ್ಲಿ ಬರುವ ಮಾರುತಿ ಬಡಾವಣೆಯಲ್ಲಿರುವ ಅಧಿಕ ವಿದ್ಯುತ್ ಕೆಳಭಾಗದ ಉದ್ಯಾನವನಕ್ಕೆ "ಶ್ರೀ ಕನಕಪುರಂದರ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-07-2012 ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:30-07-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಉದ್ಯಾನವನಕ್ಕೆ "ಶ್ರೀ ಕನಕಪುರಂದರ ಉದ್ಯಾನವನ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:30-07-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಉದ್ಯಾನವನಕ್ಕೆ "ಶ್ರೀ ಕನಕಪುರಂದರ ಉದ್ಯಾನವನ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 42 (196) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 181ರ ವ್ಯಾಪ್ತಿಯಲ್ಲಿ ಬರುವ ಕುಮಾರಸ್ವಾಮಿ ಬಡಾವಣೆ 47ನೇ ಅಡ್ಡರಸ್ತೆಗೆ "ಶ್ರೀ ಮುಕ್ಕಣೇಶ್ವರ ಸ್ವಾಮಿ ದೇವಸ್ಥಾನದ ರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:133(128)/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:04-07-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 181ರ ವ್ಯಾಪ್ತಿಯಲ್ಲಿ ಬರುವ ಕುಮಾರಸ್ವಾಮಿ ಬಡಾವಣೆ 47ನೇ ಅಡ್ಡರಸ್ತೆಗೆ "ಶ್ರೀ ಮುಕ್ಕಣೇಶ್ವರ ಸ್ವಾಮಿ ದೇವಸ್ಥಾನದ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನದ ರಸ್ತೆ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನದ ರಸ್ತೆ" ಎಂದು ನಾಮಕರಣ ಮಾಡಲು [illegible] ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 43 (216) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 56ರ ವ್ಯಾಪ್ತಿಯಲ್ಲಿ ಬರುವ ಇಂದಿರಾಗಾಂಧಿ 1ನೇ ಮುಖ್ಯರಸ್ತೆಗೆ "ಶ್ರೀ ಸ್ವಾಮಿ ಅಯ್ಯಪ್ಪ ದೇವಸ್ಥಾನದ ಮುಖ್ಯರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:130(285)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:07-07-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 56ರ ವ್ಯಾಪ್ತಿಯಲ್ಲಿ ಬರುವ ಇಂದಿರಾಗಾಂಧಿ 1ನೇ ಮುಖ್ಯರಸ್ತೆಗೆ "ಶ್ರೀ ಸ್ವಾಮಿ ಅಯ್ಯಪ್ಪ ದೇವಸ್ಥಾನದ ಮುಖ್ಯರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಸ್ವಾಮಿ ಅಯ್ಯಪ್ಪ ದೇವಸ್ಥಾನದ ಮುಖ್ಯರಸ್ತೆ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಸ್ವಾಮಿ ಅಯ್ಯಪ್ಪ ದೇವಸ್ಥಾನದ ಮುಖ್ಯರಸ್ತೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

**(ಡಿ. ವೆಂಕಟೇಶ್ ಮೂರ್ತಿ)**
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 44 (217) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 172ರ ವ್ಯಾಪ್ತಿಯಲ್ಲಿ ಬರುವ ಬಿಟಿಎಂ ಬಡಾವಣೆ 1ನೇ ಹಂತ, 16ನೇ ಮುಖ್ಯರಸ್ತೆಯ ಪಕ್ಕದಲ್ಲಿರುವ ಉದ್ಯಾನವನಕ್ಕೆ "ಶ್ರೀಮತಿ ವೈಶಾಲಿ ಕಾಸರವಳ್ಳಿ ಉದ್ಯಾನವನ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ: 28-06-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:04(40)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:03-08-2011 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 172ರ ವ್ಯಾಪ್ತಿಯಲ್ಲಿ ಬರುವ ಬಿಟಿಎಂ ಬಡಾವಣೆ 1ನೇ ಹಂತ, 16ನೇ ಮುಖ್ಯರಸ್ತೆಯ ಪಕ್ಕದಲ್ಲಿರುವ ಉದ್ಯಾನವನಕ್ಕೆ "ಶ್ರೀಮತಿ ವೈಶಾಲಿ ಕಾಸರವಳ್ಳಿ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಉದ್ಯಾನವನಕ್ಕೆ "ಶ್ರೀಮತಿ ವೈಶಾಲಿ ಕಾಸರವಳ್ಳಿ ಉದ್ಯಾನವನ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಉದ್ಯಾನವನಕ್ಕೆ "ಶ್ರೀಮತಿ ವೈಶಾಲಿ ಕಾಸರವಳ್ಳಿ ಉದ್ಯಾನವನ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 46 (219) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 45 ಮತ್ತು 65ರ ವ್ಯಾಪ್ತಿಯಲ್ಲಿ ಬರುವ ಮಲ್ಲೇಶ್ವರಂ 8ನೇ ಮುಖ್ಯರಸ್ತೆ ಮತ್ತು 15ನೇ ಅಡ್ಡರಸ್ತೆ ಸಂಧಿಸುವ ವೃತ್ತಕ್ಕೆ "ಚಿತ್ರಾಪುರ ವೃತ್ತ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:135(130)/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:04-07-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಶ್ರೀ. ವಿ.ಎನ್.ರಾಮಸ್ವಾಮಿ ರವರು ಆಕ್ಷೇಪಣೆ ಅರ್ಜಿ ಸಲ್ಲಿಸಿ ಚಿತ್ರಾಪುರ ಮಠದ ಆವರಣದಲ್ಲಿ ಸುಮಾರು ಐದು ಅಂತಸ್ತಿನ ಕಟ್ಟಡಕ್ಕೆ ಅನುಮತಿ ಪಡೆದಿದ್ದು, ಸದರಿಯವರು ಒಟ್ಟಾರೆಯಾಗಿ ಎಂಟು ಅಂತಸ್ತಿನ ವಸತಿ ಕಟ್ಟಡವನ್ನು ನಿರ್ಮಾಣ ಮಾಡಿರುತ್ತಾರೆ ಎಂದು ತಿಳಿಸುತ್ತಾ ನಾಮಕರಣ ಮಾಡಲು ಉದ್ದೇಶಿಸಲಾಗಿರುವ ವೃತ್ತಕ್ಕೆ ಸರ್.ಸಿ.ವಿ.ರಾಮನ್ ವೃತ್ತ ಅಥವಾ ಪಂಚವಟಿ ವೃತ್ತ ಅಥವಾ ಶ್ರೀ. ಎಂ.ಪಿ.ಎಲ್. ಶಾಸ್ತ್ರೀ ವೃತ್ತ ಎಂದು ನಾಮಕರಣ ಮಾಡಲು ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:45 ಮತ್ತು 65ರ ವ್ಯಾಪ್ತಿಯಲ್ಲಿ ಬರುವ ಮಲ್ಲೇಶ್ವರಂ 8ನೇ ಮುಖ್ಯರಸ್ತೆ ಮತ್ತು 15ನೇ ಅಡ್ಡರಸ್ತೆ ಸಂಧಿಸುವ ವೃತ್ತಕ್ಕೆ "ಚಿತ್ರಾಪುರ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:14-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವೃತ್ತಕ್ಕೆ "ಚಿತ್ರಾಪುರ ವೃತ್ತ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:14-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವೃತ್ತಕ್ಕೆ "ಚಿತ್ರಾಪುರ ವೃತ್ತ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 47 (220) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 17ರ ವ್ಯಾಪ್ತಿಗೆ ಬರುವ ಮುತ್ಯಾಲನಗರ 2ನೇ ಸಿ ಮುಖ್ಯರಸ್ತೆಗೆ "ಶ್ರೀ. ಮುನಿಸ್ವಾಮಪ್ಪ ರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:401/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:07-06-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:17ರ ವ್ಯಾಪ್ತಿಗೆ ಬರುವ ಮುತ್ಯಾಲನಗರ 2ನೇ ಸಿ ಮುಖ್ಯರಸ್ತೆಗೆ "ಶ್ರೀ. ಮುನಿಸ್ವಾಮಪ್ಪ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಮುನಿಸ್ವಾಮಪ್ಪ ರಸ್ತೆ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಮುನಿಸ್ವಾಮಪ್ಪ ರಸ್ತೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 48 (221) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 17ರ ವ್ಯಾಪ್ತಿಗೆ ಬರುವ ಮುತ್ಯಾಲನಗರ ರೈಲ್ವೆ ಗೇಟಿನಿಂದ 8ನೇ ಮುಖ್ಯರಸ್ತೆಯ 15ನೇ ಜೆ.ಅಡ್ಡರಸ್ತೆಯವರೆವಿಗೆ "ಶ್ರೀ. ಬಿ.ಶ್ರೀನಿವಾಸ ಮೂರ್ತಿ ರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:398/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:03-07-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:17ರ ವ್ಯಾಪ್ತಿಗೆ ಬರುವ ಮುತ್ಯಾಲನಗರ ರೈಲ್ವೆ ಗೇಟಿನಿಂದ 8ನೇ ಮುಖ್ಯರಸ್ತೆಯ 15ನೇ ಜೆ.ಅಡ್ಡರಸ್ತೆಯವರೆವಿಗೆ "ಶ್ರೀ. ಬಿ.ಶ್ರೀನಿವಾಸ ಮೂರ್ತಿ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಶ್ರೀನಿವಾಸ ಮೂರ್ತಿ ರಸ್ತೆ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಶ್ರೀನಿವಾಸ ಮೂರ್ತಿ ರಸ್ತೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 49 (222) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 17ರ ವ್ಯಾಪ್ತಿಗೆ ಬರುವ ಮೋಹನಕುಮಾರ ನಗರದ ರಾಮಮಂದಿರ ಮುಂಭಾಗದಲ್ಲಿರುವ ವೃತ್ತಕ್ಕೆ "ಶ್ರೀ. ಬಿ.ಎಲ್.ಪ್ರಭಾಕರ್ ವೃತ್ತ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:397/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-06-2012 ಮತ್ತು ದಿನಾಂಕ:07-06-2012 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:17ರ ವ್ಯಾಪ್ತಿಗೆ ಬರುವ ಮೋಹನಕುಮಾರ ನಗರದ ರಾಮಮಂದಿರ ಮುಂಭಾಗದಲ್ಲಿರುವ ವೃತ್ತಕ್ಕೆ "ಶ್ರೀ. ಬಿ.ಎಲ್.ಪ್ರಭಾಕರ್ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವೃತ್ತಕ್ಕೆ "ಶ್ರೀ. ಬಿ.ಎಲ್.ಪ್ರಭಾಕರ್ ವೃತ್ತ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಬೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವೃತ್ತಕ್ಕೆ "ಶ್ರೀ.ಬಿ.ಎಲ್.ಪ್ರಭಾಕರ್ ವೃತ್ತ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30–08–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 50 (223) / 2012–13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 17ರ ವ್ಯಾಪ್ತಿಗೆ ಬರುವ ಮುತ್ಯಾಲನಗರ 1ನೇ ಮುಖ್ಯರಸ್ತೆ ಮತ್ತು 4ನೇ ಮುಖ್ಯರಸ್ತೆಯ ಮಧ್ಯೆ ಬರುವ 2ನೇ ಎ ಕ್ರಾಸ್ ರಸ್ತೆಗೆ "ಶ್ರೀ. ಸಾರಕ್ಕಿ ಗುಂಡಪ್ಪ ರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:402/2011–12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:07–06–2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:17ರ ವ್ಯಾಪ್ತಿಗೆ ಬರುವ ಮುತ್ಯಾಲನಗರ 1ನೇ ಮುಖ್ಯರಸ್ತೆ ಮತ್ತು 4ನೇ ಮುಖ್ಯರಸ್ತೆಯ ಮಧ್ಯೆ ಬರುವ 2ನೇ ಎ ಕ್ರಾಸ್ ರಸ್ತೆಗೆ "ಶ್ರೀ. ಸಾರಕ್ಕಿ ಗುಂಡಪ್ಪ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16–08–2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16–08–2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಸಾರಕ್ಕಿ ಗುಂಡಪ್ಪ ರಸ್ತೆ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:16–08–2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಸಾರಕ್ಕಿ ಗುಂಡಪ್ಪ ರಸ್ತೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 51 (224) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 17ರ ವ್ಯಾಪ್ತಿಗೆ ಬರುವ ಮುತ್ಯಾಲನಗರ ಟ್ಯಾಂಕ್ ಬಂಡ್ ರಸ್ತೆಯಿಂದ 9ನೇ ಮುಖ್ಯರಸ್ತೆವರೆಗಿನ 19ನೇ ಅಡ್ಡರಸ್ತೆಗೆ "ಶ್ರೀ. ಬಿ.ಆರ್.ಶಿವಶಂಕರ್ ರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:400/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-06-2012 ಮತ್ತು ದಿನಾಂಕ:07-06-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:17ರ ವ್ಯಾಪ್ತಿಗೆ ಬರುವ ಮುತ್ಯಾಲನಗರ ಟ್ಯಾಂಕ್ ಬಂಡ್ ರಸ್ತೆಯಿಂದ 9ನೇ ಮುಖ್ಯರಸ್ತೆವರೆಗಿನ 19ನೇ ಅಡ್ಡರಸ್ತೆಗೆ "ಶ್ರೀ. ಬಿ.ಆರ್.ಶಿವಶಂಕರ್ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಬಿ.ಆರ್.ಶಿವಶಂಕರ್ ರಸ್ತೆ" ಎಂದು ನಾಮಕರಣ ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗೆ "ಶ್ರೀ ಬಿ.ಆರ್.ಶಿವಶಂಕರ್ ರಸ್ತೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 52 (135) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಹದೇವಪುರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ: 150ರ ವ್ಯಾಪ್ತಿಗೆ ಬರುವ ಕೋರಮಂಗಲ ರಿಂಗ್ ರಸ್ತೆಯಿಂದ ಚಲ್ಲಘಟ್ಟ ಗ್ರಾಮ ಹಾಗೂ ಸುತ್ತಮುತ್ತಲಿನ ಸಂಪರ್ಕ ರಸ್ತೆಗಳು ರಸ್ತೆ ಅಭಿವೃದ್ಧಿ ಹಾಗೂ ತಡೆಗೋಡೆ ನಿರ್ಮಾಣದ (ರಿಟೈನಿಂಗ್ ವಾಲ್) ಕಾಮಗಾರಿಯು ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ಅಗತ್ಯವಾಗಿದ್ದು, ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸ್ಥಳೀಯ ಶಾಸಕರಾದ ಶ್ರೀ.ಅರವಿಂದ ಲಿಂಬಾವಳಿಯವರು ಮಾನ್ಯ ಆಯುಕ್ತರಿಗೆ ದಿನಾಂಕ:22-09-2009 ರಂದು ಪತ್ರ ಬರೆದು ಮನವಿ ಮಾಡಿರುತ್ತಾರೆ.

1. ಚಲ್ಲಘಟ್ಟದಿಂದ ಡಿಫೆನ್ಸ್ ಜಾಗದಲ್ಲಿ ಹಾದು ಹೋಗುವ ಮಾರ್ಗವಾಗಿ ಕೋರಮಂಗಲ ಒಳ ವರ್ತುಲ ರಸ್ತೆಯವರೆಗೆ.
2. ಚಲ್ಲಘಟ್ಟದ ಗಾಲ್ಫ್ ಕೋರ್ಸ್ ಸೇತುವೆಯಿಂದ ಕೆಂಪಾಪುರದವರೆಗೆ.

ಬೆಳ್ಳಂದೂರು ವಾರ್ಡ್‌ನ ರಿಂಗ್ ರಸ್ತೆಯಿಂದ ಚಲ್ಲಘಟ್ಟದವರೆಗೆ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ಗ್ರಾಮಸ್ಥರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ರಸ್ತೆ ನಿರ್ಮಾಣ ಮಾಡುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಪ್ರಸ್ತಾಪಿಸಿರುವ ಕಾಮಗಾರಿಯ ಸ್ಥಳವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಭಾರತ ಸರ್ಕಾರದ ರಕ್ಷಣಾ ಇಲಾಖೆ ಮತ್ತು ಹೆಚ್.ಎ.ಎಲ್ ನ ಪ್ರದೇಶಕ್ಕೆ ಹೊಂದಿಕೊಂಡಿರುತ್ತದೆ.

ಈ ಕಾಮಗಾರಿಯ ಬಗ್ಗೆ ವರದಿಯನ್ನು ತಯಾರಿಸಿ ನೀಡಲು ಸಲಹೆಗಾರರಾದ M/s Civil Tech Consultants and Engineers, Bangalore ಅವರಿಗೆ ಸೂಚಿಸಲಾಗಿತ್ತು. ಅದರಂತೆ, ಸಲಹೆಗಾರರು ಪ್ರಸ್ತಾಪಿಸಿರುವ ರಸ್ತೆಯನ್ನು ಸರ್ವೆ ಮಾಡಿ ಅಗತ್ಯ ಪರೀಕ್ಷೆಗಳನ್ನು ನಡೆಸಿ ಅಗತ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಅಂದಾಜನ್ನು 2011-12ನೇ ಸಾಲಿನ ದರ ಪಟ್ಟಿಯನ್ನು ಅಳವಡಿಸಿಕೊಂಡು ರೂ.400.00 ಲಕ್ಷಗಳಿಗೆ ತಯಾರಿಸಿರುತ್ತಾರೆ.

ಅಂದಾಜಿನಲ್ಲಿ ಈ ಕೆಳಕಂಡ ಲಿಂಕ್ ರಸ್ತೆಗಳ ಅಭಿವೃದ್ಧಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

| | | |
|---|---|---|
| 1. ಕೋರಮಂಗಲ ರಿಂಗ್ ರಸ್ತೆಯಿಂದ-ಚಲ್ಲಘಟ್ಟ ಸರ್ಕಲ್ - (ಎಂಬಾಸ್ಸಿ ಪಾರ್ಕ್) ಮೂಲಕ | - | 800 ಮೀ |
| 2. ಚಲ್ಲಘಟ್ಟ ರಸ್ತೆ-ವಿಂಡ್ ಟವರ್ ರಸ್ತೆ | - | 870 ಮೀ |
| 3. ಚಲ್ಲಘಟ್ಟ ಸ್ಮಶಾನದಿಂದ ಎಸ್.ಡಬ್ಲ್ಯೂ.ಡಿ ಯವರೆಗೆ | - | 180 ಮೀ |
| 4. ಚಲ್ಲಘಟ್ಟ ರಸ್ತೆ-ಎನ್.ಎ.ಎಲ್ ಗೇಟ್ ನ್ಯಾರೋ ರೋಡ್ ಡಿಆರ್‌ಡಿಒ ವರೆಗೆ | - | 1160 ಮೀ |
| 5. ಯಮಲೂರು ಬ್ರಿಡ್ಜ್‌ನಿಂದ ಕರಿಯಮ್ಮನ ಅಗ್ರಹಾಗ ರಸ್ತೆಯವರೆಗೆ | - | 1100 ಮೀ |
| 6. ಯಮಲೂರು ಕರಿಯಮ್ಮನ ಅಗ್ರಹಾರ ಅಪ್ರೋಚಸ್ | - | 705 ಮೀ |
| ಒಟ್ಟು | | 4815 ಮೀ |

..................2

ಅದಲ್ಲದೇ ಕೋರಮಂಗಲದಿಂದ ಚಲ್ಲಘಟ್ಟಕ್ಕೆ ಸೇರುವ ರಸ್ತೆಯ ಬಲಭಾಗದ ಜಾಗವು ಸುಮಾರು 5 ಮೀ.ಗಳು ಎತ್ತರವಿದ್ದು, ಈ ಭಾಗಕ್ಕೆ ಸೂಕ್ತವಾಗಿ ರಕ್ಷಣಾ ಕಾಮಗಾರಿಯನ್ನು ಕೈಗೊಂಡ ನಂತರವೇ ರಸ್ತೆ ಕಾಮಗಾರಿಯನ್ನು ಕೈಗೊಳ್ಳುವಂತೆ ರಕ್ಷಣಾ ಇಲಾಖೆಯು ಕೋರಿರುವ ಹಿನ್ನಲೆಯಲ್ಲಿ ಸುಮಾರು 850 ಮೀ. ಗಳ ಉದ್ದಕ್ಕೆ ರಕ್ಷಣಾ ಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಒಟ್ಟಾರೆ 4815 ಮೀ.ಗಳ ಉದ್ದದ ರಸ್ತೆಯನ್ನು ಅಭಿವೃದ್ಧಿ ಹಾಗೂ 850 ಮೀ ಉದ್ದದ ರಕ್ಷಣಾ ಗೋಡೆಯನ್ನು ನಿರ್ಮಾಣ ಮಾಡಲು ಅಂದಾಜು ಪಟ್ಟಿಯಲ್ಲಿ ಪ್ರಸ್ತಾಪಿಸಲಾಗಿದೆ.

2010-11ನೇ ಸಾಲಿನ ಆಯವ್ಯಯದ ಪ್ರಧಾನ ಲೆಕ್ಕ ಶೀರ್ಷಿಕೆ "P2304"-ಕಾಮಗಾರಿ-ಮೂಲಭೂತ ಸೌಕರ್ಯಗಳ ಶಾಖೆ-ಕೋರಮಂಗಲ ರಿಂಗ್ ರಸ್ತೆಯಿಂದ ಚಲ್ಲಘಟ್ಟದವರೆಗೆ ರಸ್ತೆ ಅಗಲೀಕರಣ ಕಾಮಗಾರಿ-ಪಿ ಸಂಖ್ಯೆ 2304/130 ರಲ್ಲಿ ರೂ.200.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಈ ಕಾಮಗಾರಿಗೆ ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ.

ಪ್ರಸ್ತಾಪಿಸಿರುವ ಕಾಮಗಾರಿಯು ಅತ್ಯವಶ್ಯಕವಾಗಿದ್ದು, ತುರ್ತಾಗಿ ಕೈಗೊಳ್ಳುವ ಹಿನ್ನಲೆಯಲ್ಲಿ ಕಾಮಗಾರಿಯನ್ನು ಕರ್ನಾಟಕ ರೋಡ್ ಇನ್‌ಪ್ರಾಸ್ಟ್ರಕ್ಚರ್ ಸಂಸ್ಥೆಗೆ ನೀಡಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಕೆಲಸವನ್ನು ಪ್ರಾರಂಭಿಸಲಾಗಿದೆ;

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. Construction of Retaining wall and Widening of road from Koramangala ring road to Challaghatta villages in w-150 Rs.400.00 ಗಳಿಗೆ ಆಡಳಿತಾತ್ಮಕ ಅನುಮೋದನೆ.

2. ಕಾಮಗಾರಿಯನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿದ್ದರಿಂದ ಕಾಮಗಾರಿಯನ್ನು ಕರ್ನಾಟಕ ರೋಡ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ ವಹಿಸಿ, ಕಾಮಗಾರಿಯನ್ನು ಪ್ರಾರಂಭಿಸಿರುವ ಕ್ರಮಕ್ಕೆ ಸ್ಥಿರೀಕರಣ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:30-03-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:12-04-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:12-04-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 12-04-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 53 (137) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಮಲೂರು ಮತ್ತು ಬೆಳ್ಳಂದೂರು ಕೆರೆಯ ಕೋಡಿಗೆ ಸೇತುವೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಸ್ಥಳೀಯ ಶಾಸಕರು ಹಾಗೂ ಜನಪ್ರತಿನಿಧಿಗಳು, ಸಾರ್ವಜನಿಕರ ಕೋರಿಕೆಯ ಮೇರೆಗೆ, ಪೂಜ್ಯ ಮಹಾಪೌರರು ತುರ್ತು ಕಾಮಗಾರಿಯಲ್ಲಿ ಮೀಸಲಿಟ್ಟ ನಿಧಿಯಲ್ಲಿ (ಸಿ.ಆರ್.ಎಫ್) ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿದ್ದು, ಈ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಯುಕ್ತರು ದಿನಾಂಕ:15-11-2010 ರಂದು ನೀಡಿದ್ದು, ಮುಖ್ಯ ಲೆಕ್ಕಾಧಿಕಾರಿಗಳಿಂದ ಜಾಬ್ ಸಂಖ್ಯೆ: 150-11-000025 ಅನ್ನು ಪಡೆಯಲಾಗಿರುತ್ತದೆ. ಈ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ:14-02-2011 ರಂದು ಹಾಗೂ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಅಭಿಯಂತರರು (ಯೋಜನೆ) ರವರು ದಿನಾಂಕ:14-02-2011 ರಂದು ನೀಡಿರುತ್ತಾರೆ.

ಸದರಿ ಕಾಮಗಾರಿಗೆ ದಿನಾಂಕ:16-06-2011 ರಂದು ರೂ.2,53,04,147.10 ಲಕ್ಷಗಳಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಮೊದಲನೇ ಕರೆಯಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದ ಕಾರಣ ಮರು ಟೆಂಡರ್ ಅನ್ನು ದಿನಾಂಕ:05-05-2011 ರಂದು ಆಹ್ವಾನಿಸಿದ್ದು, ಎರಡನೇ ಬಾರಿ ಏಕ ಬಿಡ್‌ದಾರರು ಭಾಗವಹಿಸಿದ್ದು, ಸದರಿ ಟೆಂಡರ್ ಅನ್ನು ಮುಖ್ಯ ಅಭಿಯಂತರರು ತಿರಸ್ಕರಿಸಿರುತ್ತಾರೆ, ನಂತರ, ಮತ್ತೊಮ್ಮೆ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್ ಅನ್ನು ಮುಖ್ಯ ಅಭಿಯಂತರರು (ಯೋಜನೆ) ರವರ ಅನುಮೋದನೆಯಂತೆ ದಿನಾಂಕ:30-06-2011 ರಂದು ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ಅವರ ಬಿಡ್ ಮೌಲ್ಯಮಾಪನ ಮಾಡಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ;

1. ಶ್ರೀ.ಎಸ್.ಆರ್.ಗಣೇಶ್ ರವರು ಒಟ್ಟು ರೂ.2,71,96,950.75 ಗಳನ್ನು ನಮೂದಿಸಿದ್ದು, ಇದು ಅಂದಾಜುಪಟ್ಟಿಯ ದರಗಳಿಗೆ ಹೋಲಿಸಿದ್ದಲ್ಲಿ ಶೇ.1.16% ಕಡಿಮೆಯಾಗಿರುತ್ತದೆ.
2. ಶ್ರೀ. ಜಿ.ರಾಜ ರವರು ಒಟ್ಟು ರೂ.2,80,17,038.81 ಗಳನ್ನು ನಮೂದಿಸಿದ್ದು, ಇದು ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದ್ದಲ್ಲಿ ಶೇ.1.[illegible]% ಹೆಚ್ಚಾಗಿರುತ್ತದೆ.
3. ಶ್ರೀ. ಮದನ್ ಮೋಹನ್‌ರೆಡ್ಡಿ ರವರು ಒಟ್ಟು ರೂ.3,06,36,782.95 ಗಳನ್ನು ನಮೂದಿಸಿದ್ದು, ಇದು ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದ್ದಲ್ಲಿ ಶೇಕಡ 11.33% ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ. ಎಸ್.ಆರ್.ಗಣೇಶ್ ರವರು ಕನಿಷ್ಠ ದರ ನಮೂದಿಸಿದ್ದು, ಸದರಿ ಮೊತ್ತವನ್ನು ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದ್ದಲ್ಲಿ ಶೇ.1.16% ರಷ್ಟು ಕಡಿಮೆಯಾಗಿದ್ದು, 2010-11ನೇ ಸಾಲಿನ ತ್ರೈಮಾಸಿಕ ದರಗಳಿಗೆ ಹೋಲಿಸಿದ[illegible] ಕಡಿಮೆಯಾಗಿರುತ್ತದೆ ಹಾಗೂ ಮಾನ್ಯ ಆಯುಕ್ತರು ಸದರಿ ಟೆಂಡರ್ ಅನ್ನು ಅನುಮೋದಿಸಿರುವ ಹಿನ್ನಲೆಯಲ್ಲಿ ಮತ್ತು ಸ್ಥಳೀಯ ಶಾಸಕರು ಸಾರ್ವಜನಿಕ ಹಿತದೃಷ್ಟಿಯಿಂದ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲು ಸೂಚನೆ ನೀಡಲಾದ ಹಿನ್ನಲೆಯಲ್ಲಿ, ಸದರಿ ಗುತ್ತಿಗೆದಾರರಿಗೆ ಕಾರ್ಯದೇಶವನ್ನು ದಿನಾಂಕ:08-0[illegible]-2011 ರಂದು ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಯಮಲೂರು ಮತ್ತು ಬೆಳ್ಳಂದೂರು ಕೆರೆಯ ಕೋಡಿಗೆ ಸೇತುವೆ ನಿರ್ಮಾಣ ಕಾಮಗಾರಿಗೆ ಕನಿಷ್ಠ ದರ ನಮೂದಿಸಿದ ಗುತ್ತಿಗೆದಾರರಾದ ಶ್ರೀ. ಎಸ್.ಆರ್.ಗಣೇಶ್ ರವರ ಗುತ್ತಿಗೆಯ ಮೊತ್ತ ರೂ.2,71,96,951.00 (ರೂಪಾಯಿ ಎರಡು ಕೋಟಿ ಇಪ್ಪತ್ತೊಂದು ಲಕ್ಷದ ತೊಂಭತ್ತಾರು ಸಾವಿರದ ಒಂಬೈನೂರ ಐವತ್ತೊಂದು ರೂಪಾಯಿ ಮಾತ್ರ) ಗಳಾಗಿದ್ದು, ಸದರಿ ಕಾಮಗಾರಿಯ ಟೆಂಡರ್‌ಗೆ ಅನುಮೋದನೆ

..................2

ಹಾಗೂ ಸಾರ್ವಜನಿಕ ಹಿತದೃಷ್ಟಿ ಹಾಗೂ ಸ್ಥಳೀಯ ಶಾಸಕರ ಸೂಚನೆಯ ಮೇರೆಗೆ ಕಾಮಗಾರಿಯನ್ನು ಪ್ರಾರಂಭಿಸಿರುವ ಕ್ರಮಕ್ಕೆ ಸ್ಥಿರೀಕರಣ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26-03-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:12-04-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:12-04-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 12-04-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 54 (139) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಿ.ವಿ.ರಾಮನ್‌ನಗರ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ.79 ರಲ್ಲಿನ ಕದಿರಯ್ಯನ ಪಾಳ್ಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬಹು ಅಂತಸ್ತಿನ ಕಟ್ಟಡಗಳು ಶಿಥಿಲಗೊಂಡಿದ್ದು, ವಾಸಕ್ಕೆ ಯೋಗ್ಯವಿಲ್ಲವೆಂದು ಟಾರ್ ಸ್ಟೀಲ್ ರೀಸರ್ಚ್ ಫೌಂಡೇಷನ್ ಸಂಸ್ಥೆಯವರು ಅಭಿಪ್ರಾಯ ನೀಡಿರುವ ಮೇರೆಗೆ, ಸದರಿ 7 ಕಟ್ಟಡಗಳನ್ನು ಕೆಡವಿ ಅಲ್ಲಿ ವಾಸಿಸುತ್ತಿರುವ 126 ಮನೆಗಳ ಪೈಕಿ 15 ಮನೆಗಳಲ್ಲಿ ಅನಧಿಕೃತವಾಗಿ ವಾಸ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ 111 ಮನೆಗಳಲ್ಲಿ ವಾಸಿಸುತ್ತಿರುವ ಮಹಾನಗರ ಪಾಲಿಕೆಯ ನೌಕರರಾದ ಪೌರ ಕಾರ್ಮಿಕರು, ಗ್ಯಾಂಗ್‌ಮೆನ್‌ಗಳು, ಲಾರಿ ಡ್ರೈವರ್‌ಗಳಿಗೆ 15'x18' ಅಡಿ ನಿವೇಶನಗಳನ್ನು ವಿಂಗಡಿಸಿ ಅವರಿಗೆ ಹಂಚಿಕೆ ಮಾಡಿ ಶೇ.22.75 ರ ಅನುದಾನದಡಿಯಲ್ಲಿ ಮನೆಗಳನ್ನು ನಿರ್ಮಿಸಲು, ಅಂದಾಜು ಪಟ್ಟಿಯನ್ನು ರೂ.600.00 ಲಕ್ಷಗಳಿಗೆ ತಯಾರಿಸಿದ್ದು, ಸದರಿ ಕಾಮಗಾರಿಗೆ 2009-10ನೇ ಸಾಲಿನ ಶೇ.22.75ರ ಅನುದಾನದಲ್ಲಿ ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ. ಈ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ, ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಘನ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸುವ ಪ್ರಸ್ತಾವನೆಗೆ ದಿನಾಂಕ:29-10-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ: 16(127)/2010-11 ರಲ್ಲಿ ತೀರ್ಮಾನವಾಗಿರುತ್ತದೆ. ಅದರಂತೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ 08 ಗುತ್ತಿಗೆದಾರರು ಭಾಗವಹಿಸಿದ್ದು, ಈ ಪೈಕಿ 04 (ನಾಲ್ಕು) ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದಿದ್ದು, ಇವರ ಆರ್ಥಿಕ ಬಿಡ್ ಅನ್ನು ತೆರೆಯಲಾಗಿ ಗುತ್ತಿಗೆದಾರರಾದ ಶ್ರೀ. ಮುನಿವೆಂಕಟಪ್ಪ ರಾಜೇಂದ್ರ ರವರು ಕನಿಷ್ಠ ದರ ನಮೂದಿಸಿದ್ದು, ಇವರು ರೂ.5,88,97,333.44 (ಅಂದರೆ 2010-11ನೇ ಸಾಲಿನ ದರಪಟ್ಟಿಗೆ 4.08% ಹೆಚ್ಚಿಗೆ ದರ) ಗಳನ್ನು ನಮೂದಿಸಿರುತ್ತಾರೆ.

ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.5,88,97,333.44 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: UDD 636 MNY 2010, Bangalore, Dated:02-04-2011 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮಗಳು 1977 ನಿಯಮ 14ಕ್ಕೆ ಆರ್ಥಿಕ ಅಧಿಕಾರ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಅಂಗೀಕರಿಸುವ ಅಧಿಕಾರ ಘನ ಸರ್ಕಾರದ ವ್ಯಾಪ್ತಿಗೆ ಒಳಪಡುವುದರಿಂದ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.600.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಸದರಿ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ. ಮುನಿವೆಂಕಟಪ್ಪ ರಾಜೇಂದ್ರ ರವರ ಟೆಂಡರ್ ಮೊತ್ತ ರೂ.5,88,97,333.44 (2010-11ನೇ ಸಾಲಿನ ದರಗಳಿಗೆ 4.08% ಹೆಚ್ಚಿಗೆ) ಗಳಿಗೆ ಟೆಂಡರ್ ಅನುಮೋದನೆ.
3. ಸದರಿ ಕಾಮಗಾರಿಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಘನ ಸರ್ಕಾರದಿಂದ ಆಡಳಿತಾತ್ಮಕ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 10-01-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:15-02-2012ರ ನಿರ್ಣಯ.

.....................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಗುತ್ತಿಗೆದಾರರು ಕಾಮಗಾರಿ ಕೈಗೊಳ್ಳಲು ಸಾಧ್ಯವಿಲ್ಲವೆಂದು ಪತ್ರ ನೀಡಿರುವುದರಿಂದ ಅಲ್ಪಾವಧಿಗೆ ಮರು ಟೆಂಡರ್ ಕರೆಯುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಗುತ್ತಿಗೆದಾರರು ಕಾಮಗಾರಿ ಕೈಗೊಳ್ಳಲು ಸಾಧ್ಯವಿಲ್ಲವೆಂದು ಪತ್ರ ನೀಡಿರುವುದರಿಂದ ಅಲ್ಪಾವಧಿಗೆ ಮರು ಟೆಂಡರ್ ಕರೆಯುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 55 (189) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯ ಸುತ್ತಮುತ್ತಲಿನ ಏಳು ಸಿಎಂಸಿ ಒಂದು ಟಿಎಂಸಿ ಮತ್ತು 110 ಗ್ರಾಮಗಳನ್ನು ಒಳಗೊಂಡ ಪ್ರದೇಶಗಳು ಸೇರಿಕೊಂಡು ದಿನಾಂಕ:16-01-2007 ರಿಂದ ಜಾರಿಗೆ ಬರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ರಚಿಸಲಾಗಿರುತ್ತದೆ. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಈ ಕೆಳಕಂಡ 5 ಹೊಸ ವಲಯಗಳನ್ನು ರಚಿಸಲಾಗಿದೆ.

1. ರಾಜರಾಜೇಶ್ವರಿ ನಗರ ವಲಯ
2. ಬೊಮ್ಮನಹಳ್ಳಿ ವಲಯ
3. ಯಲಹಂಕ ವಲಯ
4. ದಾಸರಹಳ್ಳಿ ವಲಯ
5. ಮಹದೇವಪುರ ವಲಯ

ಮೇಲ್ಕಂಡ ಐದು ವಲಯಗಳು ಸುಮಾರು 600 ಚದರ ಕಿ.ಮೀ. ವ್ಯಾಪ್ತಿ ಹೊಂದಿದ್ದು, ಈ ವ್ಯಾಪ್ತಿಯಲ್ಲಿ ಅನೇಕ ಕೆರೆಗಳಿದ್ದು, ಕೆರೆಗಳ ಮಧ್ಯೆ ಸಂಪರ್ಕಿಸಲು ರಾಜಕಾಲುವೆಗಳು ಇರುತ್ತವೆ. ವೇಗವಾಗಿ ಬೆಂಗಳೂರು ಮಹಾನಗರ ಬೆಳೆಯುತ್ತಿದ್ದು, ಇದರಿಂದಾಗಿ ಭೂಗಳ್ಳರು ಕೆರೆ ಅಂಗಳ ಹಾಗೂ ರಾಜಕಾಲುವೆಗಳನ್ನು ಒತ್ತುವರಿ ಮಾಡುವುದು, ರಾಜಕಾಲುವೆ ಪಥ ಬದಲಾಯಿಸಿ, ರಾಜಕಾಲುವೆಗಳ ಅಗಲ ಕಡಿಮೆ ಮಾಡಿ ಲೇಔಟ್ ನಿರ್ಮಿಸುವ ಪ್ರಕ್ರಿಯೆಗಳು ಅವ್ಯಾಹತವಾಗಿ ನಡೆಯುತ್ತಿದ್ದು, ಇದರಿಂದಾಗಿ ಮಳೆಗಾಲದಲ್ಲಿ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಮುಂದುವರೆದು ಈ ವಲಯಗಳಲ್ಲಿ ಹಿಂದಿನ ಸಿ.ಎಂ.ಸಿ ಗಳು ನಿರ್ಮಿಸಿದ ಮಳೆ ನೀರು ಚರಂಡಿಗಳು ಅವೈಜ್ಞಾನಿಕವಾಗಿ ನಿರ್ಮಿಸಲ್ಪಟ್ಟಿದ್ದು ಅನೇಕ ಸ್ಥಳಗಳಲ್ಲಿ ಮಳೆ ನೀರು ಚರಂಡಿ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ, ಮಳೆಗಾಲದಲ್ಲಿ ಮಳೆ ನೀರು ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೆ ಅಲ್ಲಲ್ಲಿ ಉಕ್ಕಿ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾನಿ ಉಂಟಾಗುತ್ತಿರುತ್ತದೆ.

ಬೃಹತ್ ಮಳೆ ನೀರು ಕಾಲುವೆಗಳ ಸಮಗ್ರ ಅಭಿವೃದ್ಧಿ ಕಾರ್ಯ ಸಂಕೀರ್ಣವಾಗಿದ್ದು, ಈ ಕಾರ್ಯದಲ್ಲಿ ಇತರೇ ಸಂಸ್ಥೆಗಳಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (BDA) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB), ಕರ್ನಾಟಕ ರಾಜ್ಯ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ (KSDB), ಬೆಂಗಳೂರು ವಿದ್ಯುತ್ ಪ್ರಸರಣಾ ನಿಗಮ (BESCOM), ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ (KSPCB), ಕೆರೆ ಅಭಿವೃದ್ಧಿ ಪ್ರಾಧಿಕಾರ ಮತ್ತು ಪ್ರಮುಖವಾಗಿ ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿರುತ್ತದೆ. ಈ ಬಗ್ಗೆ ಈಗಾಗಲೇ BDA ಮತ್ತು BWSSB ರವರೊಂದಿಗೆ ಹಲವಾರು ಬಾರಿ ಸಭೆ ಕರೆದು ಚರ್ಚಿಸಲಾಗಿದೆ. ಮುಂದುವರೆದು ರಾಜಕಾಲುವೆಗಳ ಒತ್ತುವರಿಯನ್ನು ಗುರ್ತಿಸಲು ರೆವಿನ್ಯೂ ಸರ್ವೆ ಸಮೀಕ್ಷಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾರ್ಯಪ್ರಗತಿಯಲ್ಲಿರುತ್ತದೆ.

ಬೆಂಗಳೂರು ಮಹಾನಗರವು ಸಮುದ್ರ ಮಟ್ಟದಿಂದ ಸರಾಸರಿ 920 ಮೀ ಎತ್ತರದಲ್ಲಿದ್ದು, ಹೆಚ್ಚು ಕಡಿಮೆ ಸಮತಟ್ಟಾದ ಮೇಲ್ಮೈ ಹೊಂದಿರುತ್ತದೆ. ಯಾವುದೇ ಮುಖ್ಯವಾದ ನದಿಗಳು ಈ ಮಹಾನಗರದಲ್ಲಿ ಹರಿಯುತ್ತಿಲ್ಲ. ಇತ್ತೀಚಿನ ನಗರದ ಬೆಳವಣಿಗೆಗೆ ಅನುಗುಣವಾಗಿ ರಾಜಕಾಲುವೆಗಳ ಅಭಿವೃದ್ಧಿಗೆ ಒಂದು ಸಮಗ್ರ ಯೋಜನೆಯನ್ನು ರೂಪಿಸಿರುವುದಿಲ್ಲ. ಅಲ್ಲದೆ ಈ ಹಿಂದೆ ಇದ್ದ ಹಲವಾರು ಕೆರೆಗಳು ಈಗಾಗಲೇ ಒತ್ತುವರಿಯಾಗಿದ್ದು, ಅಂತಹ ಜಾಗದಲ್ಲಿ ಹೊಸ ಬಡಾವಣೆಗಳು ನಿರ್ಮಾಣಗೊಂಡಿರುತ್ತವೆ. ಉಳಿದಿರುವ ಕೆರೆಗಳ

....................2

ಅಂಗಳಗಳು ಹಾಗೂ ರಾಜಕಾಲುವೆಗಳು ಬಹುತೇಕ ಒತ್ತುವರಿಯಾಗಿದ್ದು, ಮಳೆಗಾಲದಲ್ಲಿ ಮಳೆ ನೀರನ್ನು ಹಿಡಿದಿಡುವ (Retention Basin) ಜಾಗವು ಕಡಿಮೆಯಾಗಿ ತಗ್ಗುಪ್ರದೇಶಗಳಲ್ಲಿ ಪ್ರವಾಹ ಉಂಟಾಗುತ್ತದೆ. ಬಡಾವಣೆಗಳನ್ನು ಅಭಿವೃದ್ಧಿಪಡಿಸುವಾಗ ಸ್ವತ್ತಿನ ಮಾಲೀಕರು ದುರಾಸೆಯಿಂದ ರಾಜಕಾಲುವೆಯ ಪಥ ಬದಲಾಯಿಸುವುದು, ಕಾಲುವೆಗಳ ಅಗಲ ಕಡಿಮೆ ಮಾಡುವುದು, ರಾಜಕಾಲುವೆಗಳಲ್ಲಿ ಕಸ / ತ್ಯಾಜ್ಯ ವಸ್ತುಗಳನ್ನು (Plastic) ಹಾಕುವುದು ಮನೆಗಳಿಂದ ನೇರವಾಗಿ ಕೊಳಚೆ ನೀರನ್ನು ರಾಜಕಾಲುವೆಗೆ ಬಿಡುವುದು ಮುಂತಾದ ಕ್ರಿಯೆಗಳು ನಿರಂತರವಾಗಿ ನಡೆಯುತ್ತಿದ್ದು, ಇದರಿಂದಾಗಿ ಈ ಹಿಂದೆ ಅಸ್ಥಿತ್ವದಲ್ಲಿದ್ದ ರಾಜಕಾಲುವೆಗಳ ಸಾಮರ್ಥ್ಯ ಕಡಿಮೆಯಾಗಿದೆ. BWSSB ರವರು ಹೊಸದಾಗಿ ಸೃಜಿಸಲಾದ ಐದು ವಲಯಗಳ ವ್ಯಾಪ್ತಿಯಲ್ಲಿ ಸ್ಯಾನಿಟರಿ ನೆಟ್‌ವರ್ಕ್ ಅನ್ನು ಪೂರ್ಣಗೊಳಿಸದೇ ಇರುವುದರಿಂದ ಬೃಹತ್ ಮಳೆ ನೀರು ಕಾಲುವೆಗಳಲ್ಲಿ ಕೊಳಚೆ ನೀರು ಹರಿಯುತ್ತಿದ್ದು, ಇದರಿಂದ ರಾಜಕಾಲುವೆಗಳಲ್ಲಿ ಮಳೆ ನೀರು ಸಾಗಿಸುವ ಸಾಮರ್ಥ್ಯ ಕಡಿಮೆಯಾಗಿದೆ. ಈ ಎಲ್ಲಾ ಕಾರಣಗಳಿಂದ ತಗ್ಗುಪ್ರದೇಶಗಳಲ್ಲಿ ಮಳೆಗಾಲದಲ್ಲಿ ಪ್ರವಾಹ ಉಂಟಾಗುತ್ತಿದೆ.

ರಾಜಕಾಲುವೆಗಳಲ್ಲಿ ನೀರು ಸಾಗಿಸುವ ಸಾಮರ್ಥ್ಯವನ್ನು ಹೆಚ್ಚಿಸಲು, ಕೆರೆ ಅಂಗಳದಲ್ಲಿ ನೀರು ಸಂಗ್ರಹಣ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಅವಶ್ಯವಿರುವ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಟೆಂಡರ್ ಕರೆದು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕೆಳಕಂಡಂತೆ ಸಮಾಲೋಚಕರನ್ನು ನೇಮಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ವಲಯ | ಸಮಾಲೋಚಕರ ಹೆಸರು |
|---|---|---|
| 1 | ರಾಜರಾಜೇಶ್ವರಿ ನಗರ ವಲಯ | ಮೆ॥ ಸ್ಟೂಪ್ ಕನ್ಸಲ್‌ಟೆಂಟ್ ಲಿಮಿಟೆಡ್ ಬೆಂಗಳೂರು |
| 2 | ಬೊಮ್ಮನಹಳ್ಳಿ ವಲಯ | ಮೆ॥ ಪ್ರೀತಿ ಕ್ಯಾಡ್ ಕನ್ಸಲ್‌ಟೆಂಟ್ ಬೆಂಗಳೂರು |
| 3 | ಯಲಹಂಕ ವಲಯ | ಮೆ॥ ಸ್ಟೂಪ್ ಕನ್ಸಲ್‌ಟೆಂಟ್ ಲಿಮಿಟೆಡ್ ಬೆಂಗಳೂರು |
| 4 | ದಾಸರಹಳ್ಳಿ ವಲಯ | ಮೆ॥ ಪ್ರೀತಿ ಕ್ಯಾಡ್ ಕನ್ಸಲ್‌ಟೆಂಟ್ ಬೆಂಗಳೂರು |
| 5 | ಮಹದೇವಪುರ ವಲಯ | ಮೆ॥ ಟಿ.ಟಿ.ಐ ಕನ್ಸಲ್‌ಟೆಂಟ್ ಬೆಂಗಳೂರು |

ಮೇಲ್ಕಂಡ ಸಮಾಲೋಚಕರು ಐದು ಸಿ.ಎಂ.ಸಿ ವ್ಯಾಪ್ತಿಯ ರಾಜಕಾಲುವೆಗಳ ಸಮಗ್ರ ಅಭಿವೃದ್ಧಿಗೆ ವಿವರವಾದ ಯೋಜನಾ ವರದಿಯನ್ನು (Master plan & DPR) ಸಿದ್ಧಪಡಿಸಿದ್ದು, ಈ ಕೆಳಗಿನ ಅಂಶಗಳನ್ನು ಪ್ರಮುಖವಾಗಿ ಗಮನಿಸಬಹುದಾಗಿದೆ.

## Table 1
## (Details as per Master Plan)

## Details of Major & Minor Water Shed Catchment Areas Including Core Areas.

**Drain length includes the length of SWD outside CMC area considered for Hydraulic calculations**

| Sl. No | Zone | Total Water Shed Catchment Area (Ha.) | No. of Major Water Shed Catchment Areas | No. of Minor Water Shed Catchment Areas | Total Drain Length (Km.) |
|---|---|---|---|---|---|
| 1 | East Zone | 10,937 | 8 | 137 | 227.31 |
| 2 | West Zone | 6,366 | 4 | 87 | |

| | | | | | |
|---|---|---|---|---|---|
| 3 | South Zone | 5,553 | 4 | 68 | |
| 4 | Rajarajeshwari Nagara Zone | 15,365 | 9 | 118 | 144.75 |
| 5 | Dasarahalli Zone | 9,505 | 7 | 94 | 89.24 |
| 6 | Byatarayanapura Zone | 14,235 | 9 | 129 | 113.85 |
| 7 | Mahadevapura Zone | 23,371 | 11 | 236 | 172.00 |
| 8 | Bommanahalli Zone | 16,317 | 16 | 300 | 109.59 |
| | Total | 101,650 | 68 | 1167 | 856.74 |

**Table 2**
**(Details as per Master Plan)**

| Sl. No. | Name of the Zone | No. of Clusters | Length of Primary Drain in Km. | Length of Secondary Drain in Km. | Total Length (in Km.) | No. of Low lying areas | No.of Water bodies |
|---|---|---|---|---|---|---|---|
| 1 | Bommanahalli Zone | 7 | 60.79 | 43.88 | 104.67 | 24 | 58 |
| 2 | Yelahanka Zone | 9 | 50.27 | 53.31 | 103.88 | 15 | 40 |
| 3 | Dasarahalli Zone | 7 | 25.774 | 61.61 | 87.36 | 17 | 17 |
| 4 | Mahadevapura Zone | 14 | 62.32 | 65.33 | 127.66 | 23 | 35 |
| 5 | Rajarajeshwari Nagara Zone | 9 | 54.35 | 56.82 | 111.27 | 11 | 24 |
| | Total | 46 | 253.6 | 280.9 | 534.5 | 90 | 174 |

ಮೇಲ್ಕಂಡ ವಿವರಗಳಂತೆ,

- ಕೋರ್ ಏರಿಯಾ ಸೇರಿದಂತೆ ಐದು ಹೊಸ ವಲಯಗಳ ರಾಜಕಾಲುವೆಗಳ ಒಟ್ಟು ಉದ್ದ 856.74 ಕಿ.ಮೀ.
- ಐದು ಹೊಸ ವಲಯಗಳ ರಾಜಕಾಲುವೆಗಳ ಒಟ್ಟು ಉದ್ದ 534.5 ಕಿ.ಮೀ.
- ಒಟ್ಟು ತಗ್ಗು ಪ್ರದೇಶಗಳು 90
- ಒಟ್ಟು ರಾಜಕಾಲುವೆ ಕ್ಲಸ್ಟರ್‌ಗಳು 46

## Table-3
## (Details as per Master Plan)
## Grand Abstract of Primary & Secondary Drains in 5 CMC Zone

| Sl. No | CMC Name | Primary Drain Length in (mtr) | Secondary Drain Length in (mtr) | Total Length (mtr) | Cost for Remodeling in Rs.Crores | Remarks |
|---|---|---|---|---|---|---|
| 1 | Dasarahalli Zone | 25744.00 | 61613.00 | 87357.00 | 665.14 | |
| 2 | Yelahanka Zone | 50270.00 | 53305.00 | 103575.00 | 655.26 | |
| 3 | Mahadevapura Zone | 62319.00 | 65332.00 | 127658.00 | 508.99 | |
| 4 | Rajarajeshwari Nagara Zone | 54450.00 | 56818.00 | 111268.00 | 914.91 | |
| 5 | Bommanahalli Zone | 60787.00 | 43882.00 | 104669.00 | 759.73 | |
| | Total | 253570.00 | 280950.00 | 534527.00 | 3504.03 | |

.......................4

## Table-4

## (Details as per Available Records)

## Details of Work Done/Proposed in Low Lying Areas

| Sl. No | Name of Zone | No. of Low Lying areas Identified | Tackled Earlier | Now Proposed under Emergency grants/Flood Damage/Flood Prone grants | Proposed under state budget grants | Balance |
|---|---|---|---|---|---|---|
| 1 | Bommanahalli Zone | 24 | 06 | 02 | 03 | 13 |
| 2 | Yelahanka Zone | 15 | - | 03 | 05 | 07 |
| 3 | Dasarahalli Zone | 17 | - | 07 | 04 | 06 |
| 4 | Mahadevapura Zone | 23 | 06 | 05 | 01 | 11 |
| 5 | Rajarajeshwari Nagara Zone | 11 | 03 | 05 | 02 | 01 |
| | Total | 90 | 09 | 22 | 15 | 44 |

ಮೇಲ್ಕಂಡ ವಿವರಗಳನ್ನು ಅಳವಡಿಸಿಕೊಂಡು ಈ ಕೆಳಕಂಡ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅವಶ್ಯವಿರುವ ಅನುದಾನದ ವಿವರಗಳನ್ನು ವಿವರಿಸಿದೆ.

- 2010–11ನೇ ಸಾಲಿನ ದರಪಟ್ಟಿಯಂತೆ ಹೊಸ ವಲಯಗಳ ಪ್ರದೇಶದ ರಾಜಕಾಲುವೆಗಳ ಅಭಿವೃದ್ಧಿಗೆ ಬೇಕಾಗುವ ಅಂದಾಜು ಮೊತ್ತ ರೂ.3504.03 ಕೋಟಿಗಳು.
- ಸರ್ವೆ ಸಮೀಕ್ಷಣಾ ಕಾರ್ಯ ನಡೆಸದೇ ಬಿಟ್ಟು ಹೋಗಿರುವ (Left Over) ರಾಜಕಾಲುವೆಗಳ ಅಭಿವೃದ್ಧಿಗೆ ಬೇಕಾಗಬಹುದಾದ ಅಂದಾಜು ಮೊತ್ತ (ಶೇ.10 ರಂತೆ) ರೂ.350.40 ಕೋಟಿಗಳು.
- 2011–12ನೇ ಸಾಲಿನ ದರ ಸೂಚಿಯಂತೆ ಬೇಕಾಗುವ ಹೆಚ್ಚುವರಿ ಅಂದಾಜು ಮೊತ್ತ (ಶೇ.10 ರಂತೆ) ರೂ.350.40 ಕೋಟಿಗಳು.
- ಐದು ಹೊಸ ವಲಯಗಳ ರಾಜಕಾಲುವೆಗಳ ಸಮಗ್ರ ಅಭಿವೃದ್ಧಿಗೆ ಬೇಕಾಗಬಹುದಾದ ಅಂದಾಜು ಮೊತ್ತ ರೂ.4204.83 ಕೋಟಿಗಳು ಅಥವಾ ರೂ.4205.00 ಕೋಟಿಗಳು.

## Table-5

## (Details as per Available Records)

## Details Completed SWD Works

| Sl. No. | Name of Zone | Primary drain length in meter | Secondary drain length in meter | Total length in meter | Completed cost Rs. In Lakhs |
|---|---|---|---|---|---|
| 1 | Bommanahalli Zone | 4051.00 | 820.00 | 4871.00 | 4244.60 |
| 2 | Yelahanka Zone | 300.00 | - | 300.00 | 230.00 |
| 3 | Dasarahalli Zone | - | - | - | - |
| 4 | Mahadevapura Zone | - | 575.00 | 575.00 | 380.00 |
| 5 | Rajarajeshwari Nagara Zone | 3320.50 | 690.50 | 4011.00 | 2567.90 |
| | Total | 7671.50 | 2085.50 | 9757.00 | 7422.50 |

............5

## Table-6

(Details as per Available Records)

### 1. Emergency Works

| Sl. No. | Name of Zone | Primary drain length in meter | Secondary drain length in meter | Total length in meter | Cost Rs.in Lakhs |
|---|---|---|---|---|---|
| 1 | Bommanahalli Zone | 365.00 | 110.00 | 475.00 | 155.00 |
| 2 | Yelahanka Zone | - | - | - | - |
| 3 | Dasarahalli Zone | - | 148.00 | 148.00 | 45 |
| 4 | Mahadevapura Zone | - | 1200.00 | 1200.00 | 365.00 |
| 5 | Rajarajeshwari Nagara Zone | 115.00 | 542.00 | 657.00 | 279.00 |
| | Total | 480.00 | 2000.00 | 2480.00 | 844.00 |

## Table-7

(Details as per Available Records)

### 2. Flood Damage Works

| Sl. No. | Name of Zone | Primary drain length in meter | Secondary drain length in meter | Total length in meter | Cost Rs. in Lakhs |
|---|---|---|---|---|---|
| 1 | Bommanahalli Zone | 255.00 | - | 255.00 | 88.20 |
| 2 | Yelahanka Zone | - | - | - | - |
| 3 | Dasarahalli Zone | - | - | - | - |
| 4 | Mahadevapura Zone | - | - | - | - |
| 5 | Rajarajeshwari Nagara Zone | 350.00 | - | 350.00 | 345.00 |
| | Total | 605.00 | - | 605.00 | 433.20 |

## Table-8

(Details as per Available Records)

### 3. Flood Prone Works

| Sl. No. | Name of Zone | Primary drain length in meter | Secondary drain length in meter | Total length in meter | Cost Rs. in Lakhs |
|---|---|---|---|---|---|
| 1 | Bommanahalli Zone | 1809.00 | 440.00 | 2249.00 | 1651.00 |
| 2 | Yelahanka Zone | 380.00 | 1550.00 | 1930.00 | 550.00 |

......................6

| | | | | | |
|---|---|---|---|---|---|
| 3 | Dasarahalli Zone | - | 1155.00 | 1155.00 | 809.00 |
| 4 | Mahadevapura Zone | - | 3800.00 | 3800.00 | 1760.00 |
| 5 | Rajarajeshwari Nagara Zone | 1350.00 | 4898.00 | 6248.00 | 3046.50 |
| | Total | 3539.00 | 11843.00 | 15382.00 | 7816.50 |

## Table-9
## (Details as per Available Records)

| Sl. No | Name of Zone | Primary drain length in meter | Secondary drain length in meter | Total length in meter | Cost Rs. in Lakhs |
|---|---|---|---|---|---|
| 1 | Emergency Works | 0.480 | 2.00 | 2.480 | 8.040 |
| 2 | Flood Damage Works | 0.605 | - | 0.605 | 4.332 |
| 3 | Flood Prone Works | 3.539 | 11.843 | 15.38 | 47.765 |
| | Total | 4.615 | 13.843 | 18.465 | 60.137 |

ಮೇಲ್ಕಂಡ ವಿವರಗಳಂತೆ,

- ಬೃಹತ್ ಮಳೆ ನೀರು ಕಾಲುವೆ ವಲಯ ವತಿಯಿಂದ ಇದುವರೆಗೆ ಐದು ಸಿಎಂಸಿ ಪ್ರದೇಶಗಳ ವ್ಯಾಪ್ತಿಯಲ್ಲಿ 9.757 ಕಿ.ಮೀ ಉದ್ದದ ರಾಜಕಾಲುವೆಗಳ ನವೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.
- ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ರೂ.60.137 ಕೋಟಿಗಳ ಅನುದಾನದಲ್ಲಿ ಬಹುತೇಕ ಐದು ಸಿಎಂಸಿ ವ್ಯಾಪ್ತಿಯ ತಗ್ಗುಪ್ರದೇಶಗಳಲ್ಲಿ ಬರುವ 18.465 ಕಿ.ಮೀ ಉದ್ದದ ರಾಜಕಾಲುವೆಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತವೆ.

## Table-10
## (Details as per Available Records)

**Details of Works included in 2012-13 State Government Budget**

| Sl. No. | Name of Zone | Primary drain length in meter | Secondary drain length in meter | Total length in meter | Cost Rs. in Lakhs |
|---|---|---|---|---|---|
| 1 | Bommanahalli Zone | 5953.00 | 3242.30 | 9195.00 | 5700.00 |
| 2 | Yelahanka Zone | 11560.00 | 19200.00 | 30760.00 | 13200.00 |
| 3 | Dasarahalli Zone | 1770.00 | 18284.00 | 20054.00 | 10500.00 |
| 4 | Mahadevapura Zone | 6000.00 | 3000.00 | 9000.00 | 10800.00 |
| 5 | Rajarajeshwari Nagara Zone | 5895.00 | 11198.00 | 17093.00 | 9800.00 |
| | Total | 31178.00 | 54924.30 | 86102.00 | 50000.00 |

......................7

- ರೂ.500 ಕೋಟಿಗಳ ಅಂದಾಜು ವೆಚ್ಚದಲ್ಲಿ 19 ಕ್ಲಸ್ಟರ್‌ಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿದ್ದು, ಈ ಪ್ರಸ್ತಾವನೆಯನ್ನು 2012-13ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಸೇರಿಸಲು ಈಗಾಗಲೇ ಸಲ್ಲಿಸಿದೆ. ಈ ಯೋಜನೆ ಕಾರ್ಯಗತವಾದಲ್ಲಿ 86.102 ಕಿ.ಮೀ. ಉದ್ದದ ರಾಜಕಾಲುವೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬಹುದಾಗಿದೆ.
- ಮೇಲ್ಕಂಡ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸಿದಲ್ಲಿ ಒಟ್ಟು ಹಾಲಿ ಇರುವ 90 ತಗ್ಗು ಪ್ರದೇಶಗಳ ಪೈಕಿ 46 ತಗ್ಗು ಪ್ರದೇಶಗಳ ಬಹುತೇಕ ರಾಜಕಾಲುವೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ ಮಳೆಗಾಲದಲ್ಲಿ ಪ್ರವಾಹ ತಡೆಯಬಹುದಾಗಿದೆ.

ಹೊಸ ವಲಯಗಳ ವ್ಯಾಪ್ತಿಯ ರಾಜಕಾಲುವೆಗಳ ಸಮಗ್ರ ಅಭಿವೃದ್ಧಿಗಾಗಿ ಯೋಜನಾ ಸಮಾಲೋಚಕರು ತಯಾರಿಸಿದ ವಿವರವಾದ ಐದು ಯೋಜನಾ ವರದಿಯನ್ನು ತಾಂತ್ರಿಕ ಸಲಹಾ ಸಮಿತಿಯ ಮುಂದೆ ದಿನಾಂಕ: 24-01-2012 ರಂದು ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೋರ್ ಏರಿಯಾ ಅಂದರೆ (1) ಪೂರ್ವ ವಲಯ (2) ಪಶ್ಚಿಮ ವಲಯ (3) ದಕ್ಷಿಣ ವಲಯಗಳ ಮಳೆ ನೀರುಕಾಲುವೆಗಳನ್ನು ಪುನರುಜ್ಜೀವನಗೊಳಿಸಲು ಈಗಾಗಲೇ **Central Screening and Monitoring Committee - JnNURM** ವತಿಯಿಂದ ರೂ.925.38 ಕೋಟಿಗಳ ಪ್ರಸ್ತಾವನೆ ಮಂಜೂರಾಗಿರುತ್ತದೆ. ಆದರೆ, ಪ್ರಸ್ತುತ ಐದು ಹೊಸ ವಲಯಗಳಿಗೆ ಸಮಾಲೋಚಕರು ತಯಾರಿಸಿರುವ **(Stup Consultants)** ಮಾಸ್ಟರ್ ಪ್ಲಾನ್ ಮತ್ತು ಡಿಪಿಆರ್‌ಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿಯ ಮುಂದೆ ಮಂಡಿಸಿ ಚರ್ಚಿಸಿ ಒಪ್ಪಿಗೆ ಪಡೆಯಬೇಕಿರುತ್ತದೆ. ಅದರಂತೆ, ಸಮಗ್ರ ಯೋಜನಾ ವರದಿ ಹಾಗೂ ಮಾಸ್ಟರ್ ಪ್ಲಾನ್ ಅನ್ನು ದಿನಾಂಕ:16-04-2012 ರಂದು ತಾಂತ್ರಿಕ ಸಲಹಾ ಸಮಿತಿಯ ಮುಂದೆ ಮಂಡಿಸಿ ಸಮಗ್ರವಾಗಿ ಚರ್ಚಿಸಿ ಒಪ್ಪಿಗೆ ಪಡೆಯಲಾಗಿರುತ್ತದೆ. 62ನೇ ತಾಂತ್ರಿಕ ಸಲಹಾ ಸಮಿತಿಯ ನಡವಳಿಗಳನ್ನು ಕಡತದಲ್ಲಿ ಇಡಲಾಗಿದೆ. ಹೊಸ 5 ವಲಯಗಳಿಗೆ ಸಂಬಂಧಿಸಿದಂತೆ ಡಿಪಿಆರ್‌ನಲ್ಲಿರುವ ಕಾಮಗಾರಿಗಳನ್ನು ಮಹಾನಗರ ಪಾಲಿಕೆಯ ಹಣ ಲಭ್ಯತೆ ಮೇಲೆ ಮುಂದಿನ ಐದು ವರ್ಷಗಳಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಅನುಮೋದನೆ ನೀಡಲು ಕೋರಿದೆ.

1. ಪಾಲಿಕೆಯ ಸಮಗ್ರ ಬೃಹತ್ ನೀರುಗಾಲುವೆಗಳ ಮಾಸ್ಟರ್ ಪ್ಲಾನ್‌ಗೆ ಅನುಮೋದನೆ.
2. ಹೊಸ ವಲಯಗಳಿಗೆ ಸಂಬಂಧಪಟ್ಟ ಡಿಪಿಆರ್ ಅಂದಾಜು ಮೊತ್ತ ರೂ.4205.00 ಕೋಟಿಗಳಿಗೆ ಅನುಮೋದನೆ.
3. ಮುಂದಿನ ಐದು ವರ್ಷಗಳಲ್ಲಿ ಡಿಪಿಆರ್‌ನಲ್ಲಿರುವ ಕಾಮಗಾರಿಗಳನ್ನು ಸಮಗ್ರವಾಗಿ ಅನುಷ್ಠಾನಗೊಳಿಸಲು ತಾತ್ವಿಕ ಅನುಮೋದನೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಕ್ಕೆ ತರುತ್ತಾ, ಹೊಸ ಐದು ವಲಯಗಳ ಬೃಹತ್ ಮಳೆ ನೀರು ಚರಂಡಿಯ ಸಮಗ್ರ ಅಭಿವೃದ್ಧಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರ ಘನ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯಲು ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-06-2012 ರ ಟಿಪ್ಪಣಿ

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

.....................8

"ಆಯುಕ್ತರವರ ದಿನಾಂಕ:15-06-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:15-06-2012ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 56 (200) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಮುಖ್ಯ ಕಣಿವೆ H-306 ಕೆ.ಜಿ. ಹಳ್ಳಿಯಲ್ಲಿ (ವಾರ್ಡ್ ಸಂಖ್ಯೆ: 30) ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಪ್ರದೇಶದಲ್ಲಿ ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2011-12ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ.335.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು, ದಿನಾಂಕ:12-04-2012 ರಂದು e-procurement ಅಡಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ ಯಾರು ಭಾಗವಹಿಸದೇ ಇರುವುದರಿಂದ, ದಿನಾಂಕ:17-05-2012 ರಂದು 2ನೇ ಬಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 28-05-2012 ರಂದು ಶ್ರೀ.ಗಂಗಾಧರ ಬಿ.ಕೆ., ಚಂದ್ರಶೇಖರ ಜಿ., ಕೃಷ್ಣಮೂರ್ತಿ ಎನ್.ಎಮ್., ಮುನಿವೆಂಕಟಪ್ಪ ರಾಜೇಂದ್ರ ರವರು ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ, ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ: 31-05-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ವಿವರ | ನಮೂದಿಸಿರುವ ಒಟ್ಟಾರೆ ಮೊತ್ತ ರೂ.ಗಳಲಿ | ಷರಾ |
|---|---|---|---|
| 1 | ಗಂಗಾಧರ ಬಿ.ಕೆ | 3,60,54,296/- | ಕಡಿಮೆ ಬಿಡ್ಡುದಾರರು |
| 2 | ಚಂದ್ರಶೇಖರ ಜಿ. | 3,78,31,194/- | |
| 3 | ಕೃಷ್ಣಮೂರ್ತಿ ಎನ್.ಎಮ್. | 3,94,62,594/- | |
| 4 | ಮುನಿವೆಂಕಟಪ್ಪ ರಾಜೇಂದ್ರ | 4,20,35,838/- | |

ಕಡಿಮೆ ದರಗಳನ್ನು ನಮೂದಿಸಿರುವ ಗುತ್ತಿಗೆದಾರರ ಟೆಂಡರ್ ದರಗಳನ್ನು ಅಂದಾಜು ಪಟ್ಟಿಯ ದರಗಳೊಂದಿಗೆ ಹೋಲಿಸಿದಾಗ, ವಿವರಗಳು ಕೆಳಕಂಡಂತೆ ಇರುತ್ತದೆ;

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (20011-12ನೇ ಸಾಲಿನ ದರಪಟ್ಟಿಯಂತೆ) | ರೂ.3,16,96,959/- |
| 2 | ಪ್ರಸಕ್ತ ಸಾಲಿನ ಅಂದರೆ ಟೆಂಡರ್ ಸಲ್ಲಿಸಿದ ದಿನಾಂಕ:18-04-2012 ರಂದು ಚಾಲ್ತಿಯಲ್ಲಿದ್ದ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿನ ಮೊತ್ತ | ರೂ. 3,46,70,082/- |
| 3 | ಕಡಿಮೆ ಬಿಡ್ಡುದಾರರಾದ ಶ್ರೀ.ಗಂಗಾಧರ ಬಿ.ಕೆ ರವರು ನಮೂದಿಸಿರುವ ಮೊತ್ತ | ರೂ. 3,60,54,296/- |
| 4 | ಟೆಂಡರ್‌ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ಕಡಿಮೆ | 13.75 ಹೆಚ್ಚುವರಿ |
| 5 | ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗಿಟ್ಟ ಮೊತ್ತ ಶೇಕಡವಾರು ಹೆಚ್ಚುವರಿ/ಕಡಿಮೆ | 3.99 ಹೆಚ್ಚುವರಿ |

ಶ್ರೀ. ಗಂಗಾಧರ ಬಿ.ಕೆ ರವರು ಟೆಂಡರ್‌ನಲ್ಲಿ ನಮೂದಿಸಿರುವ ಒಟ್ಟಾರೆ ಮೊತ್ತವು ಮಂಜೂರಾದ ಅಂದಾಜಿನಂತೆ, ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.13.75 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.3.99 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬಂದಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, Construction of RCC Box drain to secondary storm water drain H-306 from Ch:1800.00m to 2000.00m behind Ambedkar Medical college in ward No.30, K.G.Halli, Bangalore ರ ಕಾಮಗಾರಿಗೆ ಶ್ರೀ. ಗಂಗಾಧರ ಬಿ.ಕೆ ರವರು ಸದರಿ ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿರುವ ಬಿಡ್ಡುದಾರರಾಗಿದ್ದು, ಇವರು ನಮೂದಿಸಿಟುವ ಟೆಂಡರ್ ಮೊತ್ತ ರೂ. 3,60,54,296/- (ಪ್ರಸಕ್ತ ಸಾಲಿನ ದರಗಳಿಗೆ ಹೋಲಿಸಿದಾಗ ಶೇ.3.99 ರಷ್ಟು ಹೆಚ್ಚುವರಿ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:29-06-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 57 (201) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕಾಮಗಾರಿಗೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿನಗರ ವಲಯದ (ವಾರ್ಡ್ ನಂ.73) ಕೊಟ್ಟಿಗೆ ಪಾಳ್ಯದಲ್ಲಿರುವ ಅಶ್ವಥ್‌ನಗರದಿಂದ Unani Medical College ಮೂಲಕ ಆಯ್ದು ಮಾಗಡಿ ರಸ್ತೆಯ ಮುಖಾಂತರ (RN151) ಗೆ ಸೇರಿ ಅಲ್ಲಿಂದ ವೃಷಭಾವತಿ ವ್ಯಾಲಿ V-200 ಅನ್ನು ಸೇರುತ್ತದೆ. ಮಳೆಗಾಲದಲ್ಲಿ ಅಶ್ವಥ್‌ನಗರದಿಂದ ಬರುವ ನೀರು Unani Medical College ಮೂಲಕ ಆಯ್ದು ಹೋಗಬೇಕಾಗಿರುವುದರಿಂದ ಈ ಪ್ರದೇಶದಲ್ಲಿರುವ ರಾಜಕಾಲುವೆ ಕಚ್ಚಾ ಮಳೆ ನೀರು ಕಾಲುವೆಯಾಗಿದ್ದು, ಹೂಳಿನಿಂದ ತುಂಬಿದೆ ಹಾಗೂ ಹಾಲಿ ಇರುವ ಕಾಲುವೆಯ ಅಗಲ ಮತ್ತು ಆಳ ಸಾಕಾಗದೆ ಇರುವುದರಿಂದ ನೀರು ಸರಾಗವಾಗಿ ಹರಿಯದೇ ದಿನಾಂಕ:15-08-2011 ರಂದು ಬಿದ್ದ ಭಾರಿ ಮಳೆಯಿಂದ (Back Water) ಈ ನೀರು ಈ ಪ್ರದೇಶದ ಹಿಂಭಾಗದಲ್ಲಿರುವ ಅಶ್ವಥ್‌ನಗರ ಮತ್ತು ಪಿ & ಟಿ ರಸ್ತೆ ಇತ್ಯಾದಿ ಪ್ರದೇಶಗಳಲ್ಲಿ ಮನೆಗಳಿಗೆ ನುಗ್ಗಿ ಮತ್ತು ರಸ್ತೆಯಲ್ಲಿ ಹರಿದು ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿರುತ್ತದೆ. ಇದನ್ನು ತಪ್ಪಿಸಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಈ ರಾಜಕಾಲುವೆಯನ್ನು ರಾಜರಾಜೇಶ್ವರಿ ನಗರ ಪ್ರದೇಶದಲ್ಲಿ ಬರುವ ಮಳೆ ನೀರು ಕಾಲುವೆಗಳ ಡಿಪಿಆರ್‌ನಂತೆ DH-141B ಎಂದು ಗುರುತಿಸಲಾಗಿದ್ದು, ಇದರ ವಿನ್ಯಾಸಕ್ಕನುಗುಣವಾಗಿ ಹಾಗೂ ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.393.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕ:11-04-2012 ರಂದು E-Procurement ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ:14-05-2012 ರಂದು ತೆರೆಯಲಾಗಿದ್ದು, ತಾಂತ್ರಿಕವಾಗಿ ಇಬ್ಬರು ಗುತ್ತಿಗೆದಾರರು ಅರ್ಹತೆಯನ್ನು ಹೊಂದಲಾದ ಹಿನ್ನಲೆಯಲ್ಲಿ, ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ:24-05-2012 ರಂದು ತೆರೆಯಲಾಗಿದ್ದು, ಶ್ರೀ. ಜೆ.ಸಿ.ಪ್ರಕಾಶ್ ರವರು ಕಡಿಮೆ ಮೊತ್ತವನ್ನು ನಮೂದಿಸಿದ್ದು, ಇವರು L1 ಆಗಿದ್ದು, ವಿವರಗಳು ಕೆಳಕಂಡಂತಿವೆ;

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.3,81,30,430.00 |
| 2 | ಬಿಡ್ಡುದಾರರಾದ ಶ್ರೀ.ಜೆ.ಸಿ.ಪ್ರಕಾಶ್ ನಮೂದಿಸಿರುವ ಟೆಂಡರ್ ಮೊತ್ತ | ರೂ.4,11,61,709.00 |
| 3 | 2011-12ನೆ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | 7.95% ಹೆಚ್ಚುವರಿ |
| 4 | First Quarter issue rate of steel ದರಗಳಿಗೆ ಹೋಲಿಸಿದಾಗ (KPWD Order No.8772, Dated:29-02-2012) | 0.39% ಹೆಚ್ಚುವರಿ |

ಶ್ರೀ. ಜೆ.ಸಿ.ಪ್ರಕಾಶ್‌ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.7.95 ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ (First Quarter) ಉಕ್ಕಿನ ದರಗಳಿಗೆ ಹೋಲಿಸಿದಾಗ ಶೇ.0.39 ರಷ್ಟು ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, Remodeling of SWD DH-141B from P & T main road Unani Medical Institute to Magadi main road in Ward No.73 of Kottige palya in RR Nagara Zone Ch:1125.00 to 1750.00mರ ಕಾಮಗಾರಿಗೆ ಶ್ರೀ. ಜೆ.ಸಿ.ಪ್ರಕಾಶ್ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.4,11,61,709.00 ಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.7.95 ರಷ್ಟು ಹೆಚ್ಚುವರಿ ಹಾಗೂ ಈ ವರ್ಷದ ಮೊದಲ ಭಾಗದ (First Quarter) ಉಕ್ಕಿನ ದರಗಳಿಗೆ ಹೋಲಿಸಿದಾಗ ಶೇ.0.39 ರಷಟು ಹೆಚ್ಚುವರಿ) ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 30-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 58 (202) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೈಸೂರು ರಸ್ತೆ ಅಗಲೀಕರಣ ಕಾಮಗಾರಿಯಾದ Widening and Improvements to Mysore Road from Ch:0.00 to 2.00 km ಕಾಮಗಾರಿಗೆ Project Management ಸಮಾಲೋಚಕರಾಗಿ M/s. Cos Consultancy Services ಎಂಬ ಸಂಸ್ಥೆಯನ್ನು ಟೆಂಡರ್ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುತ್ತದೆ. ಆದರೆ, ಸದರಿ ಯೋಜನಾ ಸಮಾಲೋಚಕ ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ಮಾಡಿಕೊಂಡ ಕರಾರು ಒಪ್ಪಂದವನ್ನು ಹಲವಾರು ರೀತಿಯಲ್ಲಿ ಉಲ್ಲಂಘಿಸಿದ್ದು, ಅನೇಕ ಬಾರಿ ನೋಟೀಸ್ ನೀಡಿದ್ದರು ಯಾವುದೇ ಪ್ರಯೋಜನವಾಗಿರುವುದಿಲ್ಲ. ಸದರಿ ಸಂಸ್ಥೆಯು ಬೇಜವಾಬ್ದಾರಿತನದಿಂದ ನಡೆದುಕೊಳ್ಳುತ್ತಿದ್ದರಿಂದ, ಸದರಿ ಸಂಸ್ಥೆಯ ಸೇವೆಯನ್ನು ರದ್ದುಗೊಳಿಸುವುದು ಉಚಿತವೆಂದು ಪರಿಗಣಿಸಿ, ಮಾನ್ಯ ಆಯುಕ್ತರು ರವರು M/s. Cos Consultancy Services ಎಂಬ ಸಂಸ್ಥೆಯ ಟೆಂಡರ್ ಅನ್ನು ರದ್ದುಗೊಳಿಸಿ, ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಅನುಮೋದಿಸಿರುತ್ತಾರೆ ಹಾಗೂ ಸದರಿ ಸಂಸ್ಥೆಯು ಪಾಲಿಕೆಯ ಇತರೆ ಮೂರು ಜಾಗಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿಗೆ ಯೋಜನ ಸಮಾಲೋಚಕರಾಗಿದ್ದು, ಸದರಿ ಸ್ಥಳಗಳ ವಿವರ ಕೆಳಕಂಡಂತೆ ಇದ್ದು ಅಲ್ಲಿಯೂ ಸಹ ಇವರ ಸೇವೆಯು ತೃಪ್ತಿಕರವಾಗಿಲ್ಲದೆ ಇರುವ ಕಾರಣ ಸದರಿ ಸಂಸ್ಥೆಯ ಸೇವೆಯನ್ನು ರದ್ದುಪಡಿಸಬೇಕಾಗಿರುತ್ತದೆ.

| Sl. No. | Name of the Work |
|---|---|
| 1 | Consultancy services for construction supervision project management and quality control for widening and improvements to Hennur Road in Bangalore city (Package-5).<br>Work Order No. EE/RW-4/PR/167/09-10, Dt.16-09-2010.<br>Approved tender amount Rs.13,92,400/- |
| 2 | Consultancy services for construction supervision project management and quality control for widening and improvements to Mission Road in Bangalore city (Package-4).<br>Work Order No. EE/RW-4/PR/166/09-10, Dt.16-09-2010.<br>Approved tender amount Rs.4,93,830/- |
| 3 | Consultancy services for construction supervision project management and quality control for widening and improvements to Banaswadi Road in Bangalore city (Package-2).<br>Work Order No. EE/RW-4/PR/165/09-10, Dt.16-09-2010.<br>Approved tender amount Rs.30,86,880/- |

ಈ ಹಿನ್ನಲೆಯಲ್ಲಿ, ಮೇಲೆ ತಿಳಿಸಿದ ಮೈಸೂರು ರಸ್ತೆ ಅಗಲೀಕರಣ ಯೋಜನೆ ಮತ್ತು ಇತರೆ ಮೂರು ಕಾಮಗಾರಿಗಳ Project Management ಸಮಾಲೋಚಕರಾಗಿ M/s. Cos Consultancy Services ಎಂಬ ಸಂಸ್ಥೆಯ ಸೇವಾ ಗುತ್ತಿಗೆಯನ್ನು ರದ್ದುಪಡಿಸಲು ಹಾಗೂ ಈ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:07-07-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012 ರ ನಿರ್ಣಯ.

.....2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19–07–2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 19–07–2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 59 (203) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಲಿಂಗರಾಜಪುರದ ರೈಲ್ವೆ ಹಳಿಗೆ ಅಡ್ಡಲಾಗಿ ನಿರ್ಮಾಣ ಮಾಡಲಾಗಿರುವ ಕೆಳಸೇತುವೆ ಎರಡು ಬದಿಯಲ್ಲಿ ರಸ್ತೆ ಮೇಲ್ಪಟ್ಟದಿಂದ ಅಪ್ರೋಚ್ ರ್‍ಯಾಂಪ್‌ಗಳನ್ನು ನಿರ್ಮಾಣ ಮಾಡುವ ಕಾಮಗಾರಿಗೆ ರೂ.210.00 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿದ್ದು, ಸದರಿ ಕಾಮಗಾರಿಗೆ ಜಾಬ್ ಸಂಖ್ಯೆಯನ್ನು ಪಡೆಯಲಾಗಿದ್ದು, ಸದರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ ಪಿ-2173 ಅಡಿಯಲ್ಲಿ ಭರಿಸಲು ಅನುಮೋದನೆ ದೊರೆತಿರುತ್ತದೆ.

ಈ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತವು ರೂ.210.00 ಲಕ್ಷಗಳಾಗಿದ್ದು, ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಾಧಿಕಾರವು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಗೆ ಇರುವುದರಿಂದ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:07-07-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 60 (204) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿನಗರ ವಲಯದ (ವಾರ್ಡ್ ನಂ.130) ಉಲ್ಲಾಳ ವಾರ್ಡಿನ ರಾಮನಾಥ್ ನಗರ ಬಡಾವಣೆಯ ನಾಗದೇವನಹಳ್ಳಿಯಿಂದ ದುಭಾಸಿ ಪಾಳ್ಯ ಕೆರೆಗೆ ಸೇರುವ ರಾಜಕಾಲುವೆಯು (RN311), ದಿನಾಂಕ: 15-08-2011 ರಂದು ಬಿದ್ದ ಭಾರಿ ಮಳೆಯಿಂದ ನಾಗದೇವನಹಳ್ಳಿಯ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುತ್ತದೆ. ಅಲ್ಲದೇ ಪ್ರತಿ ಭಾರಿ ಮಳೆ ಬಿದ್ದಾಗಲೂ ಇದೇ ರೀತಿ ಪ್ರವಾಹ ಉಂಟಾಗಿ ಸಾರ್ವಜನಿಕರ ತೊಂದರೆ ಉಂಟಾಗಿರುತ್ತದೆ. ಇದನ್ನು ತಪ್ಪಿಸಲು ಈ ರಾಜಕಾಲುವೆಯನ್ನು ರಾಜರಾಜೇಶ್ವರಿ ನಗರ ವಲಯದ ಮಳೆ ನೀರುಕಾಲುವೆಗಳ ಡಿ.ಪಿ.ಆರ್.ನಂತೆ ವಿನ್ಯಾಸಕ್ಕನುಗುಣವಾಗಿ ಅಭಿವೃದ್ಧಿ ಪಡಿಸಲು ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.348.00 ಲಕ್ಷಗಳಿಗೆ ತಯಾರಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಸಂಬಂಧ ಸದರಿ ಕಾಮಗಾರಿಗೆ ದಿನಾಂಕ:11-04-2012 ರಂದು E-Procurement ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಆರು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಐದು ಜನ ಗುತ್ತಿಗೆದಾರರು ಅರ್ಹರಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ: 14-05-2012 ರಂದು ತೆರೆಯಲಾಗಿದ್ದು, ತಾಂತ್ರಿಕವಾಗಿ ಐದು ಗುತ್ತಿಗೆದಾರರು ಅರ್ಹತೆಯನ್ನು ಹೊಂದಲಾದ ಮೇರೆಗೆ ಇದಕ್ಕೆ ಮುಖ್ಯ ಇಂಜಿನಿಯರ್‌ರವರು ಅನುಮೋದನೆ ನೀಡಿದ ನಂತರ, ಸದರಿ ಗುತ್ತಿಗೆದಾರರುಗಳು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ:02-06-2012 ರಂದು ತೆರೆಯಲಾಗಿದ್ದು, ಶ್ರೀ ಜೆ.ಸಿ.ಪ್ರಕಾಶ್, ಗುತ್ತಿಗೆದಾರ ಕಡಿಮೆ ದರವನ್ನು ನಮೂದಿಸಿರುವ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿವೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.3,45,16,518.47 |
| 2 | ಬಿಡ್ದುದಾರರಾದ ಶ್ರೀ.ಜೆ.ಸಿ.ಪ್ರಕಾಶ್ ನಮೂದಿಸಿರುವ ಟೆಂಡರ್ ಮೊತ್ತ | ರೂ.3,72,60,324.75 |
| 3 | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | 7.95% ಹೆಚ್ಚುವರಿ |
| 4 | First Quarter issue rate of steel & cement ದರಗಳಿಗೆ ಹೋಲಿಸಿದಾಗ (KPWD Order No.8772, Dated: 29-02-2012, KPWD Order No.225, Dt:18-04-12) | 1.63% ಕಡಿಮೆ |

ಶ್ರೀ. ಜೆ.ಸಿ.ಪ್ರಕಾಶ್, ಗುತ್ತಿಗೆದಾರರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.7.95 ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ (First quarter) ಉಕ್ಕು ಮತ್ತು ಸಿಮೆಂಟ್ ದರದಗಳಿಗೆ ಹೋಲಿಸಿದಾಗ ಶೇ.1.63 ಕಡಿಮೆಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ.

................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ಜೆ.ಸಿ.ಪ್ರಕಾಶ್, ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ.3,45,16,518.47 ಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೆ.7.95 ಹೆಚ್ಚುವರಿ ಹಾಗೂ ಈ ವರ್ಷದ ಮೊದಲ ಭಾಗದ (First Quarter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ.1.63 ಕಡಿಮೆ) ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:30-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 61 (205) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿನಗರ ವಲಯದ (ವಾರ್ಡ್ ನಂ.129) ಜ್ಞಾನಭಾರತಿ ನಗರದಲ್ಲಿ ಬರುವ ರಾಜೀವ್‌ಗಾಂಧಿ ಬಡಾವಣೆಯಿಂದ ಶಾಂತಿದಾಮ ಕಾಲೇಜ್ ಮೂಲಕ ಆಯ್ದು ವಸತಿ ರಹಿತ ಬಡಾವಣೆ ಹಾಗೂ ಹೆಲ್ತ್ ಲೇಔಟ್ ಮೂಲಕ Primary ರಾಜಕಾಲುವೆ (RN514) ರ ಮೂಲಕ ಮಲ್ಲತ್ತಳ್ಳಿ ಕೆರೆಗೆ ಸೇರಲಿದೆ. ಈ ರಾಜಕಾಲುವೆ ವಸತಿ ರಹಿತ ಬಡಾವಣೆಯಲ್ಲಿ ಕಚ್ಚಾ ಮಳೆ ನೀರು ಕಾಲುವೆಯಾಗಿದ್ದು, ಹೂಳಿನಿಂದ ತುಂಬಿದೆ ಮತ್ತು ಇದರ ಅಳತೆ ತುಂಬಾ ಕಡಿಮೆ ಇದ್ದು, ನೀರು ಸರಾಗವಾಗಿ ಹರಿಯದೆ ದಿನಾಂಕ:15-08-2011 ರಂದು ಬಿದ್ದ ಭಾರಿ ಮಳೆಯಿಂದ ನೀರು ಈ ಪ್ರದೇಶದ ಹಿಂಭಾಗದಲ್ಲಿರುವ ರಾಜೀವ್‌ಗಾಂಧಿ ನಗರ ಮತ್ತು ವಸತಿ ರಹಿತ ಬಡಾವಣೆಯಲ್ಲಿ ಮನೆಗಳಿಗೆ ನುಗ್ಗಿ ಮತ್ತು ರಸ್ತೆಯಲ್ಲಿ ಹರಿದು ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸಲು ಈ ರಾಜಕಾಲುವೆಯನ್ನು ರಾಜರಾಜೇಶ್ವರಿ ನಗರ ಪ್ರದೇಶದಲ್ಲಿ ಬರುವ ಮಳೆ ನೀರು ಕಾಲುವೆಗಳ ಡಿಪಿಆರ್‌ನಂತೆ (RN511) ಎಂದು ಗುರುತಿಸಲಾಗಿದ್ದು, ಇದರ ವಿನ್ಯಾಸಕ್ಕನುಗುಣವಾಗಿ ಹಾಗೂ ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.298.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಮೇರೆಗೆ ಸದರಿ ಕಾಮಗಾರಿಗೆ E-Procurement ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ:14-05-2012 ರಂದು ತೆರೆಯಲಾಗಿದ್ದು, ತಾಂತ್ರಿಕವಾಗಿ ಇಬ್ಬರು ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ ಹಿನ್ನಲೆಯಲ್ಲಿ, ಮುಖ್ಯ ಇಂಜಿನಿಯರ್‌ರವರು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ:24-05-2012 ರಂದು ತೆರೆಯಲಾಗಿದ್ದು, ಶ್ರೀ. ಜೆ.ಸಿ.ಪ್ರಕಾಶ್ ರವರು ಕಡಿಮೆ ದರವನ್ನು ನಮೂದಿಸಿರುವ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿವೆ;

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.2,89,29,042.00 |
| 2 | ಬಿಡ್ದುದಾರರಾದ ಶ್ರೀ.ಜೆ.ಸಿ.ಪ್ರಕಾಶ್‌ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.3,12,28,599.00 |
| 3 | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | 7.95% ಹೆಚ್ಚುವರಿ |
| 4 | First Quarter issue rate of steel ದರಗಳಿಗೆ ಹೋಲಿಸಿದಾಗ (KPWD Order No.8772, Dated:29-02-2012) | 1.31% ಹೆಚ್ಚುವರಿ |

ಶ್ರೀ. ಜೆ.ಸಿ.ಪ್ರಕಾಶ್, ಗುತ್ತಿಗೆದಾರರು ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.7.95 ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ (First Quarter) ಉಕ್ಕಿನ ದರದಗಳಿಗೆ ಹೋಲಿಸಿದಾಗ ಶೇ.1.31 ರಷ್ಟು ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ಜೆ.ಸಿ.ಪ್ರಕಾಶ್, ಗುತ್ತಿಗೆದಾರರು ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.2,89,29,042.00 ಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೆ.7.95 ರಷ್ಟು ಹೆಚ್ಚುವರಿ ಹಾಗೂ ಈ ವರ್ಷದ ಮೊದಲ ಭಾಗದ (First Quarter) ಉಕ್ಕಿನ ದರಗಳಿಗೆ ಹೋಲಿಸಿದಾಗ ಶೇ.1.31 ರಷ್ಟು ಹೆಚ್ಚುವರಿ) ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:30-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 62 (206) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of RCC Retaining wall for SWD V-303, on both sides from Bridge at Thimmarayana Gowda layout, Ittamadu in Ward No.161ರ ಕಾಮಗಾರಿಗೆ ರೂ.322.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಟೆಂಡರ್ ಅನ್ನು ಕರೆಯಲಾಗಿರುತ್ತದೆ.

ಈ ಟೆಂಡರ್ ಅನ್ನು ದಿನಾಂಕ:29-05-2012 ರಂದು ತೆರೆಯಲಾಗಿ ಒಬ್ಬ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕ:24-05-2012 ರಂದು ಮುಖ್ಯ ಅಭಿಯಂತರರು (ಮಳೆ ನೀರು ಚರಂಡಿ) ರವರಿಂದ ಅನುಮೋದನೆ ಪಡೆದು, ಸದರಿ ಗುತ್ತಿಗೆದಾರನ ಆರ್ಥಿಕ ಬಿಡ್ ಅನ್ನು ದಿನಾಂಕ:26-05-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ;

### ಆರ್ಥಿಕ ಬಿಡ್‌ನ ವಿವರಗಳು

| ಕ್ರ ಸಂ | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2010-11ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜು ಪಟ್ಟಿಯ (2010-11ನೇ ಸಾಲಿನ ದರಪಟ್ಟಿಯ ದರಗಳಂತೆ) | 2011-12ನೇ ಸಾಲಿನ ದರಪಟ್ಟಿಯ ದರಗಳಂತೆ) Issue rate ನೊಂದಿಗೆ |
|---|---|---|---|---|---|---|
| 1 | ಶ್ರೀ. ಗಂಗಾಧರ್.ಬಿ.ಕೆ. | 322.00 | 3,12,09,641.61 | 3,87,76,697.25 | 24.24% ರಷ್ಟು ಹೆಚ್ಚು | 13.19% ರಷ್ಟು ಹೆಚ್ಚು |

ಸದರಿ ಕಾಮಗಾರಿಗೆ ಶ್ರೀ. ಗಂಗಾಧರ್.ಬಿ.ಕೆ. ರವರು ರೂ.3,87,76,697.25 ಗಳನ್ನು ನಮೂದಿಸಿದ್ದು, 2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.24.24% ರಷ್ಟು ಹೆಚ್ಚಿಗೆ ಇರುತ್ತದೆ ಮತ್ತು ಎಸ್.ಆರ್.ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇ.13.19% ರಷ್ಟು ಹೆಚ್ಚಿಗೆ ಇರುತ್ತದೆ.

ಪ್ರಸ್ತಾಪಿಸಿರುವ ಕಾಮಗಾರಿಯ ಟೆಂಡರ್ ಮೊತ್ತ ರೂ.3,87,76,697.25 ಗಳಾಗಿದ್ದು, ಈ ಟೆಂಡರ್‌ನ ಅನುಮೋದನೆಯ ವ್ಯಾಪ್ತಿಯು ಮಹಾನಗರ ಪಾಲಿಕೆ ಕೌನ್ಸಿಲ್ ಸಭೆಗೆ ಒಳಪಟ್ಟಿರುವುದರಿಂದ ಕೆಳಕಂಡ ಅಂಶಕ್ಕೆ ಅನುಮೋದನೆ ಕೋರಿದೆ.

ಶ್ರೀ. ಗಂಗಾಧರ್.ಬಿ.ಕೆ.ರವರ ಟೆಂಡರ್ ಮೊತ್ತ ರೂ.3,87,76,697.25 (2010-11ನೇ ಸಾಲಿನ ದರಪಟ್ಟಿಗೆ ಶೇ.24.24% ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್. ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇ.13.19% ರಷ್ಟು ಹೆಚ್ಚಿಗೆ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:13-07-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 63 (207) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯದ ಪುಟ್ಟೇನಹಳ್ಳಿ ವಾರ್ಡ್‌ನ (ವಾರ್ಡ್ ನಂ.187) ನಂಜುಂಡೇಶ್ವರ ಬಡಾವಣೆಯವರೆಗೆ, ಸಾರಕ್ಕಿ ಕೆರೆಯಿಂದ ಈಗಾಗಲೇ ರಾಜಕಾಲುವೆ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ನಂಜುಂಡೇಶ್ವರ ಬಡಾವಣೆಯಿಂದ ಕೋರಮಂಗಲ ಕಣಿವೆಗೆ (K-209) ಈ ರಾಜಕಾಲುವೆ ಕಾಮಗಾರಿಯನ್ನು ಪೂರ್ಣಗೊಳಿಸಿ (190 ಮೀ. ಉದ್ದ), ಸಾರಕ್ಕಿ ಕೆರೆ SWD Net Work ಪೂರ್ಣಗೊಳಿಸಿ, ಈ ಬಡಾವಣೆಯ ತಗ್ಗು ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಪ್ರವಾಹ ಉಂಟಾಗುವುದನ್ನು ತಡೆಗಟ್ಟಬಹುದಾಗಿದೆ. ಬೊಮ್ಮನಹಳ್ಳಿ ವಲಯದ SWD DPR ನಂತೆ ವಿನ್ಯಾಸಕ್ಕನುಗುಣವಾಗಿ ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.270.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಈ ಮೇರೆಗೆ ಸದರಿ ಕಾಮಗಾರಿಗೆ ದಿನಾಂಕ:11-04-2012 ರಂದು E-Procurement ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ:14-05-2012 ರಂದು ತೆರೆಯಲಾಗಿರುತ್ತದೆ. ತಾಂತ್ರಿಕವಾಗಿ ಮೂವರು ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ದಿನಾಂಕ:28-05-2012 ರಂದು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕ:28-05-2012 ರಂದು ತೆರೆಯಲಾಗಿದ್ದು, ಶ್ರೀ. ಜಿ.ಎಂ.ರವೀಂದ್ರ ರವರು ಕಡಿಮೆ ದರವನ್ನು ನಮೂದಿಸಿರುವ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿವೆ;

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.2,68,75,205.24 |
| 2 | ಬಿಡ್ಡುದಾರರಾದ ಶ್ರೀ.ಜಿ.ಎಂ.ರವೀಂದ್ರ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.3,06,39,672.05 |
| 3 | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | 14.01% ಹೆಚ್ಚುವರಿ |
| 4 | First Quarter issue rate of steel & cement ದರಗಳಿಗೆ ಹೋಲಿಸಿದಾಗ (KPWD Order No.8772, Dated: 29-02-2012, Order No.225, Dated:18-04-12) | 4.74% ಹೆಚ್ಚುವರಿ |

ಶ್ರೀ.ಜಿ.ಎಂ.ರವೀಂದ್ರ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.14.01 ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ (First Quarter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ.4.74 ರಷ್ಟು ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ.

.............2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಕಾಮಗಾರಿಗೆ ಶ್ರೀ. ಜಿ.ಎಂ.ರವೀಂದ್ರ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.3,06,39,672.05 ಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.14.01 ರಷ್ಟು ಹೆಚ್ಚುವರಿ ಹಾಗೂ ಈ ವರ್ಷದ ಮೊದಲ ಭಾಗದ (First Quarter) ಉಕ್ಕಿನ ದರಗಳಿಗೆ ಹೋಲಿಸಿದಾಗ ಶೇ.4.74 ರಷ್ಟು ಹೆಚ್ಚುವರಿ) ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:30-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 64 (208) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಎಸ್.ಬಿಂಗಿಪುರ ಗ್ರಾಮದ ಸರ್ವೆ ನಂ.(179) ರಲ್ಲಿ 20.06 ಎಕರೆ ವಿಸ್ತೀರ್ಣದ ಜಮೀನನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿ ಆದೇಶದ ಸಂಖ್ಯೆ:ಎಲ್.ಎನ್.ಡಿ(ಎ)ಸಿ.ಆರ್.122/02-03, ದಿನಾಂಕ:13-09-2005ರ ನಗರ ಸಭೆ ಬೊಮ್ಮನಹಳ್ಳಿಗೆ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮಂಜೂರು ಮಾಡಲಾಗಿದ್ದು, ಈಗ ಬೊಮ್ಮನಹಳ್ಳಿ ನಗರ ಸಭೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿರುವುದರಿಂದ, ಈ ಪ್ರದೇಶವನ್ನು ಘನ ತ್ಯಾಜ್ಯ ವಿಭಾಗದಿಂದ ವಿಲೇವಾರಿಗೆ ಮತ್ತು ನೆಲಭರ್ತಿ ಜಾಗಕ್ಕೆ ಅಗತ್ಯ ಕ್ರಮ ವಹಿಸಲು ಹಸ್ತಾಂತರಿಸಲಾಗಿದ್ದು, ಸದರಿ ಪ್ರದೇಶವನ್ನು ಡಂಪಿಂಗ್ ಯಾರ್ಡಾಗಿ ನಿರ್ವಹಿಸಬೇಕೆಂದು ಮಾನ್ಯ ಆಯುಕ್ತರು ಸೂಚಿಸಿದ್ದ ಮೇರೆಗೆ, ಸದರಿ ಜಾಗವನ್ನು ಪರಿಶೀಲಿಸಲಾಗಿ, ಜಾಗವು ಕಲ್ಲುಗಣಿಗಳಿಂದ ಕೂಡಿದ್ದರಿಂದ, ಸದರಿ ಸ್ಥಳವನ್ನು ಅನುಪಯುಕ್ತ ಹಾಗೂ Silt ಭರ್ತಿ ಮಾಡಲು ಸೂಕ್ತವಾದ ಸ್ಥಳವಾದ್ದರಿಂದ ದಕ್ಷಿಣ ವಲಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಬರುವ ಅನುಪಯುಕ್ತ / Silt ಅನ್ನು ತುಂಬಲು ಅನುಕೂಲವಾಗುತ್ತದೆ. ಆದ್ದರಿಂದ ಆಯುಕ್ತರೊಂದಿಗೆ ಚರ್ಚಿಸಿ Dumping yard ಮಾಡಲು ನಿರ್ಣಯಿಸಲಾಗಿರುತ್ತದೆ.

ಸದರಿ ಸ್ಥಳವನ್ನು ಪರಿಶೀಲನೆ ಮಾಡಲಾಗಿ ಈಗಾಗಲೇ ನಿರ್ಮಿಸಲಾದ ಕಾಂಪೌಂಡ್ ಗೋಡೆಯನ್ನು ಸ್ಥಳೀಯ ದುಷ್ಕರ್ಮಿಗಳು ಹಾಳು ಮಾಡಿರುತ್ತಾರೆ. ತತ್ಸಂಬಂಧವಾಗಿ ಹಲವಾರು ಕಡೆ ಕಾಂಪೌಂಡ್ ಮತ್ತು ಅಡಿಪಾಯವನ್ನು ಅಲ್ಲಲ್ಲಿ ಹಾಳು ಮಾಡಿರುವುದು ಸ್ಥಳ ಪರಿವೀಕ್ಷಣೆ ಸಮಯದಲ್ಲಿ ಕಂಡುಬಂದಿರುತ್ತದೆ.

ಮಾನ್ಯ ಆಯುಕ್ತರು ಮತ್ತು ಅಪರ ಆಯುಕ್ತರು (ಯೋಜನೆ) ರವರು ಜಾಬ್ ಸಂಖ್ಯೆ ನೀಡಲು ಅನುಮತಿ ನೀಡಿರುತ್ತಾರೆ. ಅದರಂತೆ ರೂ.66.98 ಲಕ್ಷಗಳಿಗೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ. ಈಗಾಗಲೇ ರೂ.66.98 ಲಕ್ಷಗಳಿಗೆ ಪಿ.ಡಬ್ಲ್ಯೂ.ಡಿ. ಇಲಾಖೆಯ ದರಪಟ್ಟಿಯ ದರಗಳನ್ವಯ ಅವಶ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಸದರಿ ಕಾಮಗಾರಿಯನ್ನು 2012-13ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ರೂ.66.98 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಹಾಗೂ ಮುಖ್ಯವಾಗಿ ದಕ್ಷಿಣ ವಲಯಕ್ಕೆ ಸಂಬಂಧಿಸಿದ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಇರುವ ಬೃಹತ್ ನೀರುಗಾಲುವೆಯಲ್ಲಿ ಬರುವ Silt ಅನ್ನು ಹಾಕಲು ಸ್ಥಳ ಇಲ್ಲದೆ ಇರುವುದರಿಂದ, ಎಸ್.ಬಿಂಗಿಪುರದ 20.06 ಎಕರೆ ವಿಸ್ತೀರ್ಣದ ಪ್ರದೇಶವನ್ನು ಡಂಪಿಂಗ್ ಯಾರ್ಡ್ ಆಗಿ ನಿರ್ವಹಿಸುವುದು ಅವಶ್ಯವಾಗಿರುತ್ತದೆ. ಆದ್ದರಿಂದ, Construction of road, security rest room, bore well, compound wall chain link fencing and security service at S.Bingipura MSW site survey No.179 ರ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:16-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯಲ್ಲಿ

ವಿವರಿಸಿರುವಂತೆ, ದಕ್ಷಿಣ ವಲಯ ವ್ಯಾಪ್ತಿಗೆ ಬರುವ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಇರುವ ಬೃಹತ್ ನೀರುಗಾಲುವೆಯಲ್ಲಿ ಬರುವ Silt ಅನ್ನು ಹಾಕಲು ಸ್ಥಳ ಇಲ್ಲದೆ ಇರುವುದರಿಂದ ಎಸ್.ಬಿಂಗಿಪುರದ 20.06 ಎಕರೆ ವಿಸ್ತೀರ್ಣದ ಪ್ರದೇಶವನ್ನು ಡಂಪಿಂಗ್ ಯಾರ್ಡ್ ಆಗಿ ನಿರ್ವಹಿಸುವುದು ಅವಶ್ಯವಾಗಿರುತ್ತದೆ. ಈ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ 2012-13ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ರೂ.66.98 ಲಕ್ಷಗಳಿಗೆ ಜಾಬ್ ಸಂಖ್ಯೆ:310-12-000008 ನೀಡಲಾಗಿರುತ್ತದೆ. ಆದುದರಿಂದ, ಸದರಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಆಡಳಿತಾತ್ಮಕ ಅನುಮೋದನೆ ನೀಡುವುದೆಂದು ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 65 (209) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯದ (ವಾರ್ಡ್ ನಂ.193) ಅರಕೆರೆ ವಾರ್ಡಿನ ಹುಳಿಮಾವು ಕೆರೆ ಹಾಗೂ ಅರಕೆರೆಯ ಕೋಡಿ ಹಳ್ಳವು BH-551 ಮತ್ತು BH-554 ಆಗಿದ್ದು, ದಿನಾಂಕ:15-08-2011 ರಂದು ಬಿದ್ದ ಭಾರಿ ಮಳೆಯಿಂದ ಸುತ್ತಮುತ್ತಲಿನ ಪ್ರದೇಶಗಳಾದ ಹುಳಿಮಾವು B.D.A ಲೇಔಟ್ ಹಾಗೂ Royal Residency ಹಾಗೂ ಸುತ್ತಮುತ್ತಲಿನ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುತ್ತದೆ. ಅಲ್ಲದೇ ಪ್ರತಿ ಭಾರಿ ಮಳೆ ಬಿದ್ದಾಗಲೂ ಇದೇ ರೀತಿ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುತ್ತದೆ. ಇದನ್ನು ತಪ್ಪಿಸಲು ಈ ರಾಜಕಾಲುವೆಯನ್ನು ಬೊಮ್ಮನಹಳ್ಳಿ ವಲಯದ ಮಳೆ ನೀರು ಕಾಲುವೆಗಳ ಡಿ.ಪಿ.ಆರ್ ನಂತೆ ವಿನ್ಯಾಸಕ್ಕನುಗುಣವಾಗಿ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.350.00 ಲಕ್ಷಗಳಿಗೆ ತಯಾರಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಸದರಿ ಕಾಮಗಾರಿಗೆ ದಿನಾಂಕ:11-04-2012 ರಂದು E-Procurement ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಮೂರು ಜನ ಗುತ್ತಿಗೆದಾರರು ಅರ್ಹರಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ: 14-05-2012 ರಂದು ತೆರೆಯಲಾಗಿದೆ. ತಾಂತ್ರಿಕವಾಗಿ ಮೂರು ಜನ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕ:05-06-2012 ರಂದು ತೆರೆಯಲಾಗಿದ್ದು, ಶ್ರೀ. ಜಿ.ಎಂ.ರವೀಂದ್ರ ರವರು ಕಡಿಮೆ ಮೊತ್ತವನ್ನು ನಮೂದಿಸಿ, ಕಡಿಮೆ ದರಗಳನ್ನು ನಮೂದಿಸಿರುವ ಗತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿವೆ;

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.3,39,22,816.87 |
| 2 | ಬಿಡ್ಡುದಾರರಾದ ಶ್ರೀ.ಜಿ.ಎಂ.ರವೀಂದ್ರ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.3,39,22,817.41 |
| 3 | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | 0.0% ಕಡಿಮೆ ದರ |
| 4 | First Quarter issue rate of steel & cement ದರಗಳಿಗೆ ಹೋಲಿಸಿದಾಗ (KPWD Order No.8772, Dated: 29-02-2012, KPWD Order No.225, Dated:18-04-2012) | 4.54% ಕಡಿಮೆ ದರ |

ಶ್ರೀ.ಜಿ.ಎಂ.ರವೀಂದ್ರ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.0.0 ರಷ್ಟು ಕಡಿಮೆ ದರ ಇದ್ದು, ಈ ವರ್ಷದ ಮೊದಲನೇ ಭಾಗದ (First Quarter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ.4.54 ಕಡಿಮೆಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ.

........2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ಜಿ.ಎಂ.ರವೀಂದ್ರ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.3,39,22,816.87 ಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.0.0 ರಷ್ಟು ಕಡಿಮೆ ದರ ಹಾಗೂ ಈ ವರ್ಷದ ಮೊದಲ ಭಾಗದ (First Quarter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ.4.77 ಕಡಿಮೆ) ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:05-07-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 66 (210) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯದ (ವಾರ್ಡ್ ನಂ.198) ಅರಕೆರೆ ವಾರ್ಡಿನ ಹುಳಿಮಾವು ಕೆರೆ ಹಾಗೂ ಅರಕೆರೆಯ ಕೋಡಿ ಹಳ್ಳವು BH-551 ಮತ್ತು BH-554 ಆಗಿದ್ದು, ದಿನಾಂಕ:15-08-2011 ರಂದು ಬಿದ್ದ ಭಾರಿ ಮಳೆಯಿಂದ ಹುಳಿಮಾವು ಹಾಗೂ ಸುತ್ತಮುತ್ತಲಿನ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುತ್ತದೆ. ಅಲ್ಲದೇ ಪ್ರತಿ ಬಾರಿ ಮಳೆ ಬಿದ್ದಾಗಲೂ ಇದೇ ರೀತಿ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುತ್ತದೆ. ಇದನ್ನು, ತಪ್ಪಿಸಲು ಈ ರಾಜಕಾಲುವೆಯನ್ನು ಬೊಮ್ಮನಹಳ್ಳಿ ವಲಯದ ಮಳೆ ನೀರು ಕಾಲುವೆಗಳ ಡಿ.ಪಿ.ಆರ್ ನಂತೆ ವಿನ್ಯಾಸಕ್ಕನುಗುಣವಾಗಿ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.450.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಈ ಸಂಬಂಧ ಸದರಿ ಕಾಮಗಾರಿಗೆ ದಿನಾಂಕ:11-04-2012 ರಂದು E-Procurement ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಮೂರು ಜನ ಗುತ್ತಿಗೆದಾರರು ಅರ್ಹರಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ: 14-05-2012 ರಂದು ತೆರೆಯಲಾಗಿರುತ್ತದೆ. ತಾಂತ್ರಿಕವಾಗಿ ಮೂರು ಜನ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕ:05-06-2012 ರಂದು ತೆರೆಯಲಾಗಿದ್ದು, ಶ್ರೀ. ಜಿ.ಎಂ.ರವೀಂದ್ರ ರವರು ಕಡಿಮೆ ದರವನ್ನು ನಮೂದಿಸಿರುವ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿವೆ;

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.4,36,27,238.37 |
| 2 | ಬಿಡ್ಡುದಾರರಾದ ಶ್ರೀ.ಜಿ.ಎಂ.ರವೀಂದ್ರ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.4,36,27,238.28 |
| 3 | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | 0.0% ಕಡಿಮೆ ದರ |
| 4 | First Quarter issue rate of steel & cement ದರಗಳಿಗೆ ಹೋಲಿಸಿದಾಗ (KPWD Order No.8772, Dated: 29-02-2012, KPWD Order No.225, Dated:18-04-2012) | 5.77% ಕಡಿಮೆ ದರ |

ಶ್ರೀ.ಜಿ.ಎಂ.ರವೀಂದ್ರ, ಗುತ್ತಿಗೆದಾರರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.0.0 ರಷ್ಟು ಕಡಿಮೆ ದರ ಇದ್ದು, ಈ ವರ್ಷದ ಮೊದಲನೇ ಭಾಗದ (First Quarter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ.5.77 ಕಡಿಮೆಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ.

....................2

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 68 (212) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಅತೀ ಹೆಚ್ಚು ಮಳೆ ಬಂದಾಗ ಜಲಾವೃತಗೊಳ್ಳುತ್ತಿದ್ದು, ಇದರಿಂದಾಗಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಸಾರ್ವಜನಿಕರಿಗೆ ಅಪಾರ ನಷ್ಟ ಉಂಟಾಗುತ್ತಿರುತ್ತದೆ ಹಾಗೂ ಮೈಸೂರು ರಸ್ತೆಯಲ್ಲಿ ಸುಗಮ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುತ್ತದೆ. ಪ್ರವಾಹವನ್ನು ತಪ್ಪಿಸುವ ಹಿತದೃಷ್ಟಿಯಿಂದ ಶಾಶ್ವತ ಪರಿಹಾರ ಕಲ್ಪಿಸುವ ಸಂಬಂಧ ಸ್ಥಳಕ್ಕೆ ಅನುಗುಣವಾಗಿ ಮೈಸೂರು ರಸ್ತೆ, ಕವಿಕಾ ಸೇತುವೆಯ ಪುನರ್ ನಿರ್ಮಾಣದ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ರೂ.499.50 ಲಕ್ಷಗಳಿಗೆ 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಗಳನ್ವಯ ತಯಾರಿಸಲಾಗಿದೆ.

ಸದರಿ ಕಾಮಗಾರಿಯ ಅಗತ್ಯತೆ ಇರುವುದರಿಂದ, 2012-13ನೇ ಸಾಲಿನ ಆಯವ್ಯಯದಲ್ಲಿ ಸದರಿ ಕಾಮಗಾರಿಗೆ ಅಗತ್ಯವಿರುವ ರೂ.499.50 ಲಕ್ಷಗಳ ಅನುದಾನವನ್ನು ಸೂಕ್ತ ಲೆಕ್ಕ ಶೀರ್ಷಿಕೆಯಡಿಯಲ್ಲಿ ಭರಿಸಲು ಉದ್ದೇಶಿಸಲಾಗಿದೆ. ಕಾಮಗಾರಿಯ ಜರೂರತೆಯ ಹಿನ್ನಲೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅಗತ್ಯವಿರುವ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆ.

ಈ ಸಂಬಂಧ, ದಿನಾಂಕ:08-05-2012 ರಂದು ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇದ್ದುದರಿಂದ, ದಿನಾಂಕ: 23-05-2012 ರಂದು ಎರಡನೇ ಬಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಯಿತು. ಸದರಿ ಟೆಂಡರ್‌ಗೆ ಮೂವರು ಗುತ್ತಿಗೆದಾರರುಗಳು ಭಾಗವಹಿಸಿದ್ದು, ಇವರುಗಳ ತಾಂತ್ರಿಕ ಅರ್ಹತೆಗಳನ್ನು ಪರಿಶೀಲಿಸಿದ ನಂತರ ಇವರುಗಳ ಆರ್ಥಿಕ ಬಿಡ್ಡುಗಳನ್ನು ದಿನಾಂಕ:16-06-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತೆ ಇರುತ್ತದೆ;

| ಕ್ರಮ ಸಂಖ್ಯೆ | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ವಿವರ | ನಮೂದಿಸಿರುವ ಒಟ್ಟಾರೆ ಬಿಡ್ ಮೊತ್ತ (ರೂ.ಗಳಲ್ಲಿ) | ಷರಾ |
|---|---|---|---|
| 1 | ಮೆ॥ ಪರಿಚಿತ ಕನ್ಸಟ್ರಕ್ಷನ್ | 4,78,00,373.75 | ಕಡಿಮೆ ಬಿಡ್ಡುದಾರರು |
| 2 | ಶ್ರೀ.ಜೆ.ಸಿ. ಪ್ರಕಾಶ್ | 5,14,55,900.61 | |
| 3 | ಮೆ॥ ಪಿ.ಎಂ.ಜೆ ಕನ್ಸಟ್ರಕ್ಷನ್ ಪ್ರೈ.ಲಿ. | 5,38,68,923.30 | |

ಸದರಿ ಟೆಂಡರ್‌ನಲ್ಲಿ ಮೆ॥ಪರಿಚಿತ ಕನ್ಸಟ್ರಕ್ಷನ್ ರವರು ಕಡಿಮೆ ದರಗಳನ್ನು ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಸದರಿಯವರು ನಮೂದಿಸಿರುವ ಒಟ್ಟಾರೆ ಮೊತ್ತವು ಟೆಂಡರ್‌ಗಿಟ್ಟ ಮೊತ್ತ ರೂ.4,51,00,078.00 ಗಳಿಗೆ ಹೋಲಿಸಿದಾಗ ಶೇ.5.99 ಹೆಚ್ಚುವರಿಯಾಗಿರುತ್ತದೆ. ಅನುಮೋದನೆಗೊಂಡ ಅಂದಾಜುಪಟ್ಟಿಯ ದರಗಳು ಹಾಗೂ ಟೆಂಡರ್ ಸಲ್ಲಿಸಿದ ದಿನಾಂಕದಂದಿನ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳು ಒಂದೇ ಆಗಿರುವುದರಿಂದ, ಶೇಕಡವಾರು ಹೆಚ್ಚುವರಿಯಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ. ಕಾಮಗಾರಿಯ ಜರೂರತೆಯ ಹಿನ್ನಲೆಯಲ್ಲಿ ಅನುಮೋದನೆ ನಿರೀಕ್ಷಿಸಿ ಕಡಿಮೆ ಬಿಡ್ಡುದಾರರಿಗೆ ದಿನಾಂಕ: 18-06-2012 ರಂದು ಲೆಟರ್ ಆಫ್ ಇಂಡೆಂಟ್ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲು ಸೂಚಿಸಲಾಗಿದೆ.

....................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ಜಿ.ಎಂ.ರವೀಂದ್ರ, ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ.4,36,27,238.37 ಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.0.0 ರಷ್ಟು ಕಡಿಮೆ ದರ ಹಾಗೂ ಈ ವರ್ಷದ ಮೊದಲ ಭಾಗದ (First Quarter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ.5.77 ಕಡಿಮೆ) ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:05-07-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ;

(1) ಕಾಮಗಾರಿಗೆ ಅಗತ್ಯವಿರುವ ರೂ.499.50 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ.

(2) ಪಾಲಿಕೆಯ 2012-13ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-0543 ಯಲ್ಲಿ ಪ್ರಸ್ತಾಪಿಸಿರುವ ಚಾಲ್ತಿ ಕಾಮಗಾರಿಗಳಿಗೆ ಮೀಸಲಿರಿಸಿರುವ ಅನುದಾನದಲ್ಲಿ ಜಾಬ್ ಸಂಖ್ಯೆ ನೀಡಲು ಅನುಮೋದನೆ .

(3) ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ನಿರೀಕ್ಷಿಸಿ ಈಗಾಗಲೇ ಕೈಗೊಂಡಿರುವ ಟೆಂಡರ್ ಪ್ರಕ್ರಿಯೆಯ ಕ್ರಮವನ್ನು ಸ್ಥಿರೀಕರಿಸಿ ಅನುಮೋದನೆ.

(4) ಲೆಟರ್ ಆಫ್ ಇಂಡೆಂಟ್ ನೀಡಿ ಕಾಮಗಾರಿ ಪ್ರಾರಂಭಿಸಲು ಸೂಚಿಸಲಾಗಿರುವ ಕ್ರಮವನ್ನು ಸ್ಥಿರೀಕರಿಸಿ ಅನುಮೋದನೆ.

(5) ಟೆಂಡರ್‌ನಲ್ಲಿ ಭಾಗವಹಿಸಿ ಕಡಿಮೆ ಬಿಡ್ಡುದಾರರಾಗಿರುವ ಮೆ|| ಪರಿಚಿತ ಕನ್ಸಟ್ರಕ್ಷನ್ ರವರು ನಮೂದಿಸಿರುವ ಒಟ್ಟಾರೆ ಬಿಡ್ ಮೊತ್ತ ರೂ.4,78,00,373.75 (ಪ್ರಸಕ್ತ ಸಾಲಿನ ದರಗಳ ಶೇ.5.99 ಹೆಚ್ಚುವರಿ) ಗಳಿಗೆ ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26-06-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (229) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ 2007ರಲ್ಲಿ 7 ಸಿ.ಎಂ.ಸಿ, 1 ಟಿ.ಎಂ.ಸಿ ಹಾಗೂ 110 ಹಳ್ಳಿಗಳು ಹೊಸದಾಗಿ ಸೇರ್ಪಡೆಯಾಗಿದ್ದು, ಸದರಿ ಪ್ರದೇಶಗಳಲ್ಲಿ ವ್ಯವಸಾಯದ ಉದ್ದೇಶಕ್ಕಾಗಿ ಉಪಯೋಗಿಸುತ್ತಿದ್ದ ಜಮೀನುಗಳನ್ನು ಇತ್ತೀಚೆಗೆ ವ್ಯವಸಾಯೇತರ ಉಪಯೋಗಕ್ಕೆ ಭೂಪರಿವರ್ತನೆ ಪಡೆದು ಸದರಿ ಪ್ರದೇಶದಲ್ಲಿನ ಆಸ್ತಿ ಮಾಲೀಕರುಗಳು ಖಾತಾ ನೋಂದಾವಣೆ ಹಾಗೂ ಕಟ್ಟಡ ನಕ್ಷೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸುತ್ತಿರುತ್ತಾರೆ. ಈ ಹಿಂದೆ ಇದ್ದಂತಹ ಸ್ಥಳೀಯ ಸಂಸ್ಥೆಗಳು ಅಂದರೆ ಗ್ರಾಮ ಪಂಚಾಯಿತಿಗಳು ಹಾಗೂ ನಗರಸಭೆಗಳು ನೀಡಿರುವ ಖಾತೆಗಳ ಆಧಾರದ ಮೇಲೆ ಹಲವಾರು ಕಟ್ಟಡಗಳು ಅಸ್ತಿತ್ವಕ್ಕೆ ಬಂದಿದ್ದರೂ, ಅಂತಹ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಸಾರ್ವಜನಿಕರಿಂದ ಬೇಡಿಕೆ ಹೆಚ್ಚಾಗಿರುತ್ತದೆ. ಅಭಿವೃದ್ಧಿ ಹೊಂದದೆ ಇರುವ ಹೊಸ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಪಾಲಿಕೆಯ ಆದ್ಯ ಕರ್ತವ್ಯವಾಗಿರುತ್ತದೆ. ಸದರಿ ಪ್ರದೇಶಗಳಲ್ಲಿ ಪೌರ ಸೌಲಭ್ಯಗಳಿಗೆ ಸಂಬಂಧಿಸಿದಂತೆ ರಸ್ತೆಗಳ ನಿರ್ಮಾಣ, ರಸ್ತೆಗಳ ಅಗಲೀಕರಣ, ರಸ್ತೆಗಳ ಡಾಂಬರೀಕರಣ, ಸೇತುವೆಗಳ ನಿರ್ಮಾಣ, ಚರಂಡಿ ಮತ್ತು ರಾಜಕಾಲುವೆಗಳ ನಿರ್ಮಾಣ ಹಾಗೂ ದುರಸ್ತಿ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ, ಬೀದಿ ದೀಪಗಳ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಾಣ ಮಾಡಿ ಅಭಿವೃದ್ಧಿಪಡಿಸಲು ಹಾಗೂ ಹಾಲಿ ಇರುವ ಪೌರ ಸೌಲಭ್ಯಗಳನ್ನು ದುರಸ್ತಿಪಡಿಸಲು ಪಾಲಿಕೆಗೆ ಹೆಚ್ಚಿನ ಹಣ ವ್ಯಯವಾಗುತ್ತಿದ್ದು, ಆರ್ಥಿಕ ಕೊರತೆ ಉಂಟಾಗಿರುತ್ತದೆ.

ಕೆ.ಎಂ.ಸಿ ಕಾಯ್ದೆ ಅಧಿನಿಯಮ 1976 ಕಲಂ 466 ರ ಅಡಿಯಲ್ಲಿ ಈಗಾಗಲೇ ಜಾರಿಗೆ ತರಲಾಗಿರುವ ಕಲಂ 466 ಬಿ ರಂತೆ ಸುಧಾರಣಾ ವೆಚ್ಚ ನಿಯಮಗಳು 2009 ರ ಆದೇಶದಲ್ಲಿ ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಲ್ಲಿನ ಸ್ವತ್ತುಗಳ ಮೇಲೆ ಸುಧಾರಣಾ ವೆಚ್ಚವನ್ನು ವಿಧಿಸಲು ಅವಕಾಶವಿರುತ್ತದೆ. ಆದುದರಿಂದ ಸುಧಾರಣಾ ವೆಚ್ಚವನ್ನು ಅಂದಾಜು ಮಾಡಿ ಪಾಲಿಕೆ ವ್ಯಾಪ್ತಿಯಲ್ಲಿ ವಿಧಿಸಬಹುದಾದ ಸುಧಾರಣಾ ವೆಚ್ಚದ ದರವನ್ನು ನಿಗಧಿಪಡಿಸಬೇಕಾಗಿದ್ದು, ಈ ಹಿಂದೆ ದಿನಾಂಕ 29-12-2010 ರಂದು ನಡೆದ ಪಾಲಿಕೆ ಸಭೆಯಲ್ಲಿ ನಿರ್ಣಯಿಸಿದಂತೆ ವಿವಿಧ ಅಳತೆಯ ಆಸ್ತಿಗಳಿಂದ, ವಿವಿಧ ದರಗಳಲ್ಲಿ ಪ್ರತ್ಯೇಕವಾಗಿ ಚದರ ಮೀಟರ್ ಒಂದಕ್ಕೆ ರೂ.150-00 ರಿಂದ ಚದರ ಮೀಟರ್ ಒಂದಕ್ಕೆ ರೂ. 400-00 ರವರೆಗೆ ಈ ಕೆಳಕಂಡ ದರಗಳಲ್ಲಿ ಸುಧಾರಣಾ ವೆಚ್ಚವನ್ನು ಸಂಗ್ರಹಿಸಲು ಸೂಚಿಸಲಾಗಿತ್ತು.

| ಕ್ರಮ ಸಂಖ್ಯೆ | ನಿವೇಶನದ ವಿಸ್ತೀರ್ಣ | ನಿಗಧಿಪಡಿಸಿರುವ ಸುಧಾರಣಾ ವೆಚ್ಚ |
|---|---|---|
| 1 | 1200 ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ (111.48 ಚ.ಮೀ) | **ಒಂದು ಚ.ಮೀ.ಗೆ. ರೂ. 150/- ರಂತೆ** |
| 2 | 1200 ಚದರಡಿಗಿಂತ (111.48 ಚ.ಮೀ) ಮೇಲ್ಪಟ್ಟು 2400 ಚದರಡಿಗಳ (222.96 ಚ.ಮೀ) ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | **ಒಂದು ಚ.ಮೀ.ಗೆ. ರೂ. 200/- ರಂತೆ** |
| 3 | 2400 (222.96 ಚ.ಮೀ) ಚದರಡಿಗಿಂತ ಮೇಲ್ಪಟ್ಟು 6000 (557.41 ಚ.ಮೀ) ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | **ಒಂದು ಚ.ಮೀ.ಗೆ. ರೂ. 300/- ರಂತೆ** |

| | | |
|---|---|---|
| 4 | 6000 (557.41 ಚ.ಮೀ) ಚದರಡಿಗಿಂತ ಮೇಲ್ಪಟ್ಟಿರುವ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 400/- ರಂತೆ |

ಈ ಮೇಲ್ಕಂಡಂತೆ ದರಗಳನ್ನು ನಿಗಧಿಪಡಿಸಿ ಆಯುಕ್ತರು ನೀಡಿರುವ ಸುತ್ತೋಲೆ ಸಂಖ್ಯೆ: ಉಆ(ಕಂ)/ಪಿಆರ್-23/07-08, ದಿನಾಂಕ:07-02-2011ರ ಅನ್ವಯ ಪಾಲಿಕೆ ವ್ಯಾಪ್ತಿಯಲ್ಲಿ ಖಾತೆ ನೊಂದಾಯಿಸಲು ಆಸ್ತಿ ಮಾಲೀಕರುಗಳಿಂದ ಸುಧಾರಣಾ ವೆಚ್ಚವನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿದ್ದು, ಸದರಿ ಸುತ್ತೋಲೆಯನ್ನು ಪ್ರಶ್ನಿಸಿ ಹಲವಾರು ಆಸ್ತಿ ಮಾಲೀಕರುಗಳು ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: WP No.18014/2011 (LB-BMP) c/w WP No. 36128/2011 ಮತ್ತು ಇತರರು ಸಲ್ಲಿಸಿದ್ದು, ವಿಚಾರಣೆ ನಂತರ ಘನ ಉಚ್ಚನ್ಯಾಯಾಲಯವು ದಿನಾಂಕ:20-4-2012 ರಂದು ಆದೇಶವನ್ನು ಹೊರಡಿಸಿರುತ್ತದೆ.

***ಸದರಿ ಆದೇಶದಲ್ಲಿ***

(i) ಪಾಲಿಕೆ ವ್ಯಾಪ್ತಿಯಲ್ಲಿನ ವಿವಿಧ ಅಳತೆಯ ನಿವೇಶನಗಳಿಗೆ ವಿವಿಧ ರೀತಿಯ ದರಗಳನ್ನು ನಿಗಧಿಪಡಿಸಿರುವುದು ಸಮಂಜಸವಾಗಿಲ್ಲವೆಂದು

(ii) ನಿಗಧಿಪಡಿಸಲಾಗಿರುವ ದರಗಳು ವೈಜ್ಞಾನಿಕವಾಗಿ ಲೆಕ್ಕಾಚಾರ ಮಾಡಿಲ್ಲವೆಂದು

(iii) ಖಾತಾ ನೋಂದಾವಣೆಗಾಗಿ ಅರ್ಜಿಗಳನ್ನು ಸಲ್ಲಿಸಿದ ಮಾಲೀಕರುಗಳಿಂದ ಪೂರ್ಣ ಪ್ರಮಾಣದಲ್ಲಿ ಸುಧಾರಣಾ ವೆಚ್ಚವನ್ನು ಪಾವತಿಕೊಳ್ಳುವುದಾಗಿ ನೀಡಲಾದ ಸುತ್ತೋಲೆಯು ಕಾನೂನುಬಾಹಿರವಾಗಿರುತ್ತದೆ ಎಂಬುದಾಗಿ

(iv) ಕೆ.ಎಂ.ಸಿ ಕಾಯ್ದೆ 1976 ಕಲಂ 467 ರಲ್ಲಿ ಈಗಾಗಲೇ ಸುಧಾರಣಾ ವೆಚ್ಚವನ್ನು ಕಂತುಗಳಲ್ಲಿ ಪಾವತಿಕೊಳ್ಳಲು ಅವಕಾಶವಿದ್ದರೂ ಸಹ ಕಲಂ 466ಬಿ ಅಡಿಯಲ್ಲಿ ರಚಿಸಲಾದ ನಿಯಮದಲ್ಲಿ (ನಿಯಮ 5 ರಂತೆ) ನಿಗಧಿಪಡಿಸಲಾದ ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡ ನಂತರ ಖಾತೆಗಳನ್ನು ನೊಂದಾಯಿಸಲಾಗುವುದೆಂದು ತಿಳಿಸಿರುವುದು ಕಾನೂನು ಬಾಹಿರವೆಂದು

(v) ಈವರೆವಿಗೂ ಪಾವತಿಸಿಕೊಂಡಿರುವ ಅಭಿವೃದ್ಧಿ ಶುಲ್ಕದ ಹಣವನ್ನು ಸಂಬಂಧಪಟ್ಟವರಿಗೆ ಹಿಂದಿರುಗಿಸಬೇಕೆಂದು ಇಲ್ಲವಾದಲ್ಲಿ ಸದರಿಯವರಿಂದ ಪಾಲಿಕೆಗೆ ಬಾಕಿ ಇರುವ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಬಹುದೆಂದು ಆದೇಶಿಸಿ ಸದರಿ ಮೇಲ್ಕಂಡ ಆಯುಕ್ತರ ಸುತ್ತೋಲೆಯನ್ನು ರದ್ದುಗೊಳಿಸಿ ಮತ್ತೊಮ್ಮೆ ಸುಧಾರಣಾ ವೆಚ್ಚವನ್ನು ವೈಜ್ಞಾನಿಕವಾಗಿ ಪರಿಷ್ಕರಿಸಿ ಹೊಸದರಗಳನ್ನು ನಿಗಧಿಪಡಿಸಬಹುದೆಂದು ಪಾಲಿಕೆಗೆ ಅವಕಾಶ ನೀಡಿ ಆದೇಶಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೆವಿನ್ಯೂ ಬಡಾವಣೆಗಳಲ್ಲಿನ ಸ್ವತ್ತುಗಳಿಗೆ ಯಾವ ದರದಲ್ಲಿ ಸುಧಾರಣಾ ವೆಚ್ಚವನ್ನು ವಿಧಿಸಬಹುದು ಎಂಬುದರ ಬಗ್ಗೆ ಪರಿಶೀಲಿಸಿ ಅಗತ್ಯ ಶಿಫಾರಸ್ಸು ನೀಡಲು ಒಂದು ಸಮಿತಿಯನ್ನು ರಚಿಸಿದ್ದು, ನಂತರ ದಿನಾಂಕ: 21-07-2012 ರಂದು ನಡೆದ ಸಭೆಯ ನಡವಳಿಗಳಲ್ಲಿ ಮಹದೇವಪುರ, ಬೊಮ್ಮನಹಳ್ಳಿ, ಯಲಹಂಕ ಮತ್ತು ರಾಜರಾಜೇಶ್ವರಿ ನಗರ ವಲಯಗಳ ಮುಖ್ಯ ಅಭಿಯಂತರರಿಂದ ಒಂದು ಎಕರೆ ಪ್ರದೇಶಕ್ಕೆ/ಒಂದು ಚದರ ಮೀಟರ್ ವಿಸ್ತೀರ್ಣಕ್ಕೆ/ಒಂದು ಚದರಡಿ ವಿಸ್ತೀರ್ಣಕ್ಕೆ ವ್ಯವಸಾಯದ ಭೂಮಿಯನ್ನು ವ್ಯವಸಾಯೇತರ, ವಾಸದ, ವಾಣಿಜ್ಯ ಮತ್ತು ಇತರೆ ಉಪಯೋಗಗಳಿಗೆ ಉಪಯೋಗಿಸಿಕೊಳ್ಳಲು, ಬಡಾವಣೆ ನಿರ್ಮಾಣಕ್ಕೆ, ರಸ್ತೆಗಳ ನಿರ್ಮಾಣಕ್ಕೆ, ಚರಂಡಿಗಳ ನಿರ್ಮಾಣಕ್ಕೆ, ಒಳಚರಂಡಿ ವ್ಯವಸ್ಥೆ ನಿರ್ಮಿಸಲು, ಬೀದಿದೀಪಗಳ ಅಳವಡಿಕೆ ಮತ್ತು ನಿರ್ವಹಣೆಗೆ ತಗಲುವ ಅಂದಾಜು ವೆಚ್ಚ ಅಂದರೆ ಘನ

ಉಚ್ಚ ನ್ಯಾಯಾಲಯವು ನೀಡಿರುವ ದಿನಾಂಕ 20-4-2012ರ ಆದೇಶವನ್ನು ಗಣನೆಗೆ ತೆಗೆದುಕೊಂಡು ಸದರಿ ಸೂಚನೆಗಳಂತೆ ಪಾಲಿಕೆ ವ್ಯಾಪ್ತಿಯಲ್ಲಿರುವ ಹೊಸ ಪ್ರದೇಶಗಳಲ್ಲಿ ಒದಗಿಸಬೇಕಾಗಿರುವ ಪೌರ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ಕಾಮಗಾರಿಗಳ ವಿವರಗಳನ್ನು ಕಾಮಗಾರಿ ಇಲಾಖೆಯ ಅಭಿಯಂತರರುಗಳಿಂದ ವಿವರಣೆ ಪಡೆದು ಪರಿಶೀಲಿಸಿ ಕೆ.ಎಂ.ಸಿ ಕಾಯ್ದೆ ಕಲಂ 466 ಎ ಅಡಿಯಲ್ಲಿ ಮಾಡಲಾಗಿರುವ ಕಾಮಗಾರಿಗಳ ಬಗ್ಗೆ ಹಾಗೂ ಮಾಡಬಹುದಾದ ಅಂದಾಜುಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಕೆ.ಎಂ.ಸಿ ಕಾಯ್ದೆ ಕಲಂ 466 ಬಿ ಅಡಿಯಲ್ಲಿ ರಚಿಸಲಾದ ನಿಯಮಗಳ ಅನುಸಾರ ಈಗಾಗಲೇ ಪಾಲಿಕೆಯು ಕೈಗೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳು ಹಾಗೂ ಇನ್ನು ಮುಂದೆ ಕೈಗೊಳ್ಳಬಹುದಾದ ಕಾಮಗಾರಿಗಳ ಅಂದಾಜು ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಈಗಾಗಲೇ ಕಾಮಗಾರಿ ಇಲಾಖೆಯರವರು ಆಯವ್ಯಯದಲ್ಲಿ 2008-09 ರಿಂದ ಮಂಡಿಸಿರುವ ಅಂದಾಜು ವೆಚ್ಚಗಳಂತೆ ಅಂದರೆ ಹೊಸ ಪ್ರದೇಶಗಳಲ್ಲಿ ಮುಂದೆ ಕಾಮಗಾರಿಗಳನ್ನು ಕೈಗೊಳ್ಳಲು ಮಾಡಿರುವ ಅಂದಾಜು ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಅವುಗಳಲ್ಲಿನ ಕಾಮಗಾರಿಗಳಿಗೆ ಚ.ಮೀ. ಒಂದಕ್ಕೆ ಈ ಕೆಳಕಂಡಂತೆ ದರಗಳನ್ನು ಅಂದಾಜಿಸಲಾಗಿದೆ.

| ವಲಯ | (ಚ.ಮೀ ಒಂದಕ್ಕೆ) ದರ |
|---|---|
| 1. ಮಹದೇವಪುರ | ರೂ. 878-00 |
| 2. ಬೊಮ್ಮನಹಳ್ಳಿ | ರೂ. 1070-00 |
| 3. ಯಲಹಂಕ | ರೂ. 1054-00 |
| 4. ರಾಜರಾಜೇಶ್ವರಿ ನಗರ | ರೂ. 880-00 |

ಈ ಅಂದಾಜು ವೆಚ್ಚಗಳ ದರಗಳನ್ನು ಸರಾಸರಿ ಲೆಕ್ಕಾಚಾರ ಮಾಡಿದಲ್ಲಿ ಚ.ಮೀ. ಒಂದಕ್ಕೆ ರೂ. 970-00 ರಷ್ಟು ದರವನ್ನು ಅಂದಾಜು ಮಾಡಬೇಕಾಗಿರುತ್ತದೆ. ಆದರೆ, ಈಗಾಗಲೇ ಈ ಹಿಂದೆ ನಿಗಧಿಪಡಿಸಲಾದ ದರಗಳಲ್ಲಿ (ಚ.ಮೀ.ಒಂದಕ್ಕೆ ರೂ.150-00 ರಿಂದ ರೂ.400-00 ರವರೆಗೆ) ಹಲವಾರು ಪ್ರಕರಣಗಳಲ್ಲಿ ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡಿದ್ದು, ಆಯಾ ಪ್ರದೇಶಗಳಲ್ಲಿ ಹಲವಾರು ಕೆಲಸ ಕಾರ್ಯಗಳನ್ನು 2008-09, 2009-10, 2010-11 ಮತ್ತು 2011-12 ಸಾಲುಗಳಲ್ಲಿ ಕೈಗೊಂಡಿದ್ದು ಹಾಗೂ ಈ ಹಿಂದೆ ಹಲವಾರು ಹೊಸ ವಾರ್ಡ್‌ಗಳಲ್ಲಿ ಸುಮಾರು ಶೇಕಡ 25 ರಿಂದ 40 ರಷ್ಟು ಪೌರ ಸೌಲಭ್ಯಗಳನ್ನು ಒದಗಿಸಲು ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಹಾಗೂ ಹೊಸ ವಾರ್ಡ್‌ಗಳಲ್ಲಿ ಶೇಕಡ 60 ರಿಂದ 75 ರಷ್ಟು ಬಾಕಿ ಕಾಮಗಾರಿಗಳು ಇರುವುದಾಗಿ ಅಂದಾಜಿಸಲಾಗಿದೆ. ಈಗಾಗಲೇ ಕಾಮಗಾರಿಗಳಿಗೆ ವೆಚ್ಚ ಮಾಡಿರುವುದನ್ನು ಪರಿಗಣಸಿ ಪ್ರಸ್ತಾಪಿತ ಅಂದಾಜು ದರ ಚದರ ಮೀಟರ್ ಒಂದಕ್ಕೆ ರೂ.970-00 ರಲ್ಲಿ ಶೇಕಡ 40 ರಷ್ಟು ಕಡಿತಗೊಳಿಸಿದ ನಂತರ, ಉಳಿಕೆ ಮೊತ್ತ ಚ.ಮೀ ಒಂದಕ್ಕೆ ರೂ.560-00 ರಂತೆ ಸಮಂಜಸವಾದ ಒಂದು ದರವನ್ನು ನಿಗಧಿಪಡಿಸಬಹುದಾಗಿದೆ ಎಂದು ಸಮಿತಿಯು ಶಿಫಾರಸ್ಸು ಮಾಡಿರುತ್ತಾರೆ.

ಈಗಾಗಲೇ ದಿನಾಂಕ: 20-4-2012 ರಂದು ಉಚ್ಚನ್ಯಾಯಾಲಯ ಸೂಚಿಸಿರುವಂತೆ ಕೆ.ಎಂ.ಸಿ ಕಾಯ್ದೆ 1976 ಕಲಂ 466 ಬಿ ಅಡಿಯಲ್ಲಿ ನಿಗಧಿಪಡಿಸಲಾದ ನಿಯಮ 5 ನ್ನು ಭಾಗಶಃ ತಿದ್ದುಪಡಿ ಮಾಡಲು ಸರ್ಕಾರವನ್ನು ಕೋರಬಹುದಾಗಿದೆ ಹಾಗೂ ನಿಗಧಿಪಡಿಸಬಹುದಾದ ದರವನ್ನು ಚದರ ಮೀಟರ್ ಒಂದಕ್ಕೆ ರೂ. 550/- ಸೂಚಿಸಿ ಪಾಲಿಕೆಯ ತೀರ್ಮಾನವನ್ನು ಕೋರಬಹುದಾಗಿ ಸಮಿತಿಯು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ನ್ಯಾಯಾಲಯದ ದಿನಾಂಕ: 20-04-2012ರ ಆದೇಶದ ವಿರುದ್ಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ: 2954/2012 ವಿಚಾರಣೆ ಹಂತದಲ್ಲಿದ್ದು, ಸದರಿ ಮೇಲ್ಮನವಿಯ ಅಂತಿಮ ಆದೇಶಕ್ಕೆ ಒಳಪಟ್ಟು ಹಾಗೂ ಸರ್ಕಾರವು ಈಗಾಗಲೇ

ಕಲಂ 466 ಬಿ ಅಡಿಯಲ್ಲಿ ರಚಿಸಲಾದ ನಿಯಮಾವಳಿಗೆ ಭಾಗಶಃ ತಿದ್ದುಪಡಿ ತರುವ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆದು, ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿದ್ದು, ಅದರಂತೆ ಸರ್ಕಾರದ ಅಂತಿಮ ತೀರ್ಮಾನಕ್ಕೆ ಒಳಪಡಿಸಿ ಪಾಲಿಕೆಯಲ್ಲಿ ಸುಧಾರಣಾ ವೆಚ್ಚ ಸಂಗ್ರಹಣೆಗಾಗಿ ಹೊಸ ದರಗಳನ್ನು ಜಾರಿಗೆ ತರಲು ಹಾಗೂ ಕೆ.ಎಂ.ಸಿ ಕಾಯ್ದೆ 1976 ಕಲಂ 467 ರ ಅಡಿಯಲ್ಲಿ ಮಾಡಲಾಗಿರುವ ನಿಯಮಗಳಂತೆ ಸುಧಾರಣಾ ವೆಚ್ಚವನ್ನು ಕಂತುಗಳ ಮೂಲಕ ಪಾವತಿಸಿಕೊಳ್ಳಲು ಆಯುಕ್ತರವರಿಗೆ ನೀಡಿರುವ ಅಧಿಕಾರವನ್ನು ಚಲಾಯಿಸಿ ಆಸ್ತಿ ಮಾಲೀಕರುಗಳಿಂದ ಸುಧಾರಣಾ ವೆಚ್ಚವನ್ನು ಪಾವತಿಸಿಕೊಳ್ಳಬಹುದೆಂಬುದಾಗಿ ಸಮಿತಿಯು ಶಿಫಾರಸ್ಸು ಮಾಡಿರುತ್ತಾರೆ. ಸದರಿ ಶಿಫಾರಸ್ಸುಗಳನ್ನು ಒಪ್ಪಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸಮಿತಿಯ ಶಿಫಾರಸ್ಸುಗಳನ್ನು ಪರಾಮರ್ಶಿಸಲು ಹಾಗೂ ಸುಧಾರಣಾ ವೆಚ್ಚಗಳ ದರವನ್ನು ನಿಗಧಿಪಡಿಸಿ ಪಾಲಿಕೆ ವ್ಯಾಪ್ತಿಯಲ್ಲಿ ಸುಧಾರಣಾ ವೆಚ್ಚವನ್ನು ಸಂಗ್ರಹಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-08-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-08-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:21-08-2012ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ದಿನಾಂಕ:21-08-2012ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ: 30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ : 230 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:28-08-2012 ರಂದು ಪೂಜ್ಯ ಮಹಾಪೌರರು, ಮಾವಳ್ಳಿ ಪುರದ ಗ್ರಾಮಸ್ಥರು ಮತ್ತು ಎನ್.ಜಿ.ಓ. ಸಂಸ್ಥೆಗಳೊಂದಿಗೆ ಚರ್ಚಿಸಿದಂತೆ ಈ ಕೆಳಕಂಡ ತೀರ್ಮಾನವನ್ನು ಕೈಗೊಳ್ಳಲಾಗಿದೆ.

1. ದಿನಾಂಕ:25-08-2012 ರಂದು ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಮಾವಳ್ಳಿಪುರ ಮತ್ತು ಸುತ್ತಮುತ್ತಲ ಪ್ರದೇಶಗಳ ಅಭಿವೃದ್ಧಿಗೆ ಈ ಕೂಡಲೆ 8-00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಮಾನ್ಯ ಆಯುಕ್ತರು ಕ್ರಮ ಕೈಗೊಳ್ಳುವುದು.
2. ಮಾವಳ್ಳಿಪುರ ಮತ್ತು ಸುತ್ತಮುತ್ತಲಿನ ಪ್ರದೇಶ ಸಾರ್ವಜನಿಕರ ಹಿತದೃಷ್ಟಿಯಿಂದ ವಾರಕ್ಕೊಮ್ಮೆ ಆ ಪ್ರದೇಶದಲ್ಲಿ ಆರೋಗ್ಯ ಶಿಬಿರವನ್ನು ಏರ್ಪಡಿಸುವುದು.
3. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯವರ ನಿರ್ದೇಶನದಂತೆ ಈಗ ಮಾವಳ್ಳಿಪುರದಲ್ಲಿ ಸಂಗ್ರಹವಾಗಿರುವ ಎಲ್ಲಾ ಕಸವನ್ನು ಆದಷ್ಟು ಕೂಡಲೇ ಗೊಬ್ಬರವಾಗಿ ಪರಿವರ್ತಿಸಿ, ಸಾಗಣೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.
4. ಮೆ॥ ರಾಂಕಿ ಸಂಸ್ಥೆಯವರು, ಒಡಂಬಡಿಕೆಯಂತೆ ತಮಗೆ ವಿಧಿಸಿರುವ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ಉನ್ನತ ಮಟ್ಟದಲ್ಲಿ ಪರಿಶೀಲಿಸಿ, ಸಂಸ್ಥೆಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದು.
5. ಮಾವಳ್ಳಿಪುರ ಗ್ರಾಮಸ್ಥರ ಕೋರಿಕೆಯಂತೆ ಅಲ್ಲಿನ ಸ್ಥಳೀಯರಿಗೆ ಕುಡಿಯುವ ನೀರನ್ನು ಟ್ಯಾಂಕರ್‌ಗಳ ಮುಖಾಂತರ ಒದಗಿಸಲು ಕ್ರಮ ಕೈಗೊಳ್ಳುವುದು.
6. ಇತ್ತೀಚೆಗೆ ಮೃತಪಟ್ಟ ಶ್ರೀ. ಶ್ರೀನಿವಾಸ್ ರವರ ಕುಟುಂಬಕ್ಕೆ ರೂ.2-00 ಲಕ್ಷಗಳ ಪರಿಹಾರವನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
7. ಈ ಮೇಲಿನಂತೆ ಎಲ್ಲಾ ಕ್ರಮಗಳನ್ನು ಕೈಗೊಂಡ ನಂತರ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಮೇರೆಗೆ ಮುಂದೆ ಕಸ ನಿರ್ವಹಣೆಯನ್ನು ಆ ಸ್ಥಳದಲ್ಲಿ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

ಮೇಲೆ ಸೂಚಿಸಿರುವ ಎಲ್ಲಾ ಅಗತ್ಯ ಕ್ರಮಗಳನ್ನು ಮಾನ್ಯ ಆಯುಕ್ತರು ಕೂಡಲೇ ತೆಗೆದುಕೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ದಿನಾಂಕ:28-08-2012 ರಂದು ಪೂಜ್ಯ ಮಹಾಪೌರರು, ಮಾವಳ್ಳಿ ಪುರದ ಗ್ರಾಮಸ್ಥರು ಮತ್ತು ಎನ್.ಜಿ.ಓ. ಸಂಸ್ಥೆಗಳೊಂದಿಗೆ ಚರ್ಚಿಸಿದಂತೆ ಈ ಕೆಳಕಂಡ ತೀರ್ಮಾನವನ್ನು ಕೈಗೊಳ್ಳಲಾಗಿದೆ.

1. ದಿನಾಂಕ:25-08-2012 ರಂದು ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಮಾವಳ್ಳಿಪುರ ಮತ್ತು ಸುತ್ತಮುತ್ತಲ ಪ್ರದೇಶಗಳ ಅಭಿವೃದ್ಧಿಗೆ ಈ ಕೂಡಲೆ 8-00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಮಾನ್ಯ ಆಯುಕ್ತರು ಕ್ರಮ ಕೈಗೊಳ್ಳುವುದು.
2. ಮಾವಳ್ಳಿಪುರ ಮತ್ತು ಸುತ್ತಮುತ್ತಲಿನ ಪ್ರದೇಶ ಸಾರ್ವಜನಿಕರ ಹಿತದೃಷ್ಟಿಯಿಂದ ವಾರಕ್ಕೊಮ್ಮೆ ಆ ಪ್ರದೇಶದಲ್ಲಿ ಆರೋಗ್ಯ ಶಿಬಿರವನ್ನು ಏರ್ಪಡಿಸುವುದು.
3. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯವರ ನಿರ್ದೇಶನದಂತೆ ಈಗ ಮಾವಳ್ಳಿಪುರದಲ್ಲಿ ಸಂಗ್ರಹವಾಗಿರುವ ಎಲ್ಲಾ ಕಸವನ್ನು ಆದಷ್ಟು ಕೂಡಲೇ ಗೊಬ್ಬರವಾಗಿ ಪರಿವರ್ತಿಸಿ, ಸಾಗಣೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.
4. ಮೆ॥ ರಾಂಕಿ ಸಂಸ್ಥೆಯವರು, ಒಡಂಬಡಿಕೆಯಂತೆ ತಮಗೆ ವಿಧಿಸಿರುವ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ಉನ್ನತ ಮಟ್ಟದಲ್ಲಿ ಪರಿಶೀಲಿಸಿ, ಸಂಸ್ಥೆಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದು.
5. ಮಾವಳ್ಳಿಪುರ ಗ್ರಾಮಸ್ಥರ ಕೋರಿಕೆಯಂತೆ ಅಲ್ಲಿನ ಸ್ಥಳೀಯರಿಗೆ ಕುಡಿಯುವ ನೀರನ್ನು ಟ್ಯಾಂಕರ್‌ಗಳ ಮುಖಾಂತರ ಒದಗಿಸಲು ಕ್ರಮ ಕೈಗೊಳ್ಳುವುದು.
6. ಇತ್ತೀಚೆಗೆ ಮೃತಪಟ್ಟ ಶ್ರೀ. ಶ್ರೀನಿವಾಸ್ ರವರ ಕುಟುಂಬಕ್ಕೆ ರೂ.2-00 ಲಕ್ಷಗಳ ಪರಿಹಾರವನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
7. ಈ ಮೇಲಿನಂತೆ ಎಲ್ಲಾ ಕ್ರಮಗಳನ್ನು ಕೈಗೊಂಡ ನಂತರ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಮೇರೆಗೆ ಮುಂದೆ ಕಸ ನಿರ್ವಹಣೆಯನ್ನು ಆ ಸ್ಥಳದಲ್ಲಿ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

ಮೇಲೆ ಸೂಚಿಸಿರುವ ಎಲ್ಲಾ ಅಗತ್ಯ ಕ್ರಮಗಳನ್ನು ಮಾನ್ಯ ಆಯುಕ್ತರು ಕೂಡಲೇ ತೆಗೆದುಕೊಳ್ಳುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 231 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್-142ರ ವ್ಯಾಪ್ತಿಯಲ್ಲಿ ಬರುವ ಶಂಕರಮಠ ಮುಖ್ಯರಸ್ತೆಯಿಂದ ಪಂಪ ಮಹಾಕವಿ ಮುಖ್ಯರಸ್ತೆಯವರೆವಿಗೂ ಬರುವ ಶಂಕರಮಠ 5ನೇ ಅಡ್ಡರಸ್ತೆಗೆ "ಶ್ರೀ ಸತ್ಯಪ್ರಮೋದ ತೀರ್ಥ" ರಸ್ತೆ ಎಂದು ನಾಮಕರಣ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಮಾನ್ಯ ಆಯುಕ್ತರವರನ್ನು ಕೋರುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್-142ರ ವ್ಯಾಪ್ತಿಯಲ್ಲಿ ಬರುವ ಶಂಕರಮಠ ಮುಖ್ಯರಸ್ತೆಯಿಂದ ಪಂಪ ಮಹಾಕವಿ ಮುಖ್ಯರಸ್ತೆಯವರೆವಿಗೂ ಬರುವ ಶಂಕರಮಠ 5ನೇ ಅಡ್ಡರಸ್ತೆಗೆ "ಶ್ರೀ ಸತ್ಯಪ್ರಮೋದ ತೀರ್ಥ" ರಸ್ತೆ ಎಂದು ನಾಮಕರಣ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಮಾನ್ಯ ಆಯುಕ್ತರವರನ್ನು ಕೋರುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 30–08–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 232 / 2012–13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್–04ರ ವ್ಯಾಪ್ತಿಯಲ್ಲಿ ಬರುವ ಯಲಹಂಕ ಉಪನಗರದ 3ನೇ ಎ ಮುಖ್ಯರಸ್ತೆ 11ನೇ ಎ ಅಡ್ಡರಸ್ತೆ ಹಾಗೂ 12ನೇ ಎ ಅಡ್ಡರಸ್ತೆಯ ನಡುವಿನಲ್ಲಿರುವ ಉದ್ಯಾನವನಕ್ಕೆ "ವಿಶ್ವಗುರು ಬಸವಣ್ಣನವರ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಮಾನ್ಯ ಆಯುಕ್ತರವರನ್ನು ಕೋರುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್–04ರ ವ್ಯಾಪ್ತಿಯಲ್ಲಿ ಬರುವ ಯಲಹಂಕ ಉಪನಗರದ 3ನೇ ಎ ಮುಖ್ಯರಸ್ತೆ 11ನೇ ಎ ಅಡ್ಡರಸ್ತೆ ಹಾಗೂ 12ನೇ ಎ ಅಡ್ಡರಸ್ತೆಯ ನಡುವಿನಲ್ಲಿರುವ ಉದ್ಯಾನವನಕ್ಕೆ "ವಿಶ್ವಗುರು ಬಸವಣ್ಣನವರ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಮಾನ್ಯ ಆಯುಕ್ತರವರನ್ನು ಕೋರುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 233 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್-04ರ ವ್ಯಾಪ್ತಿಯಲ್ಲಿ ಬರುವ ಯಲಹಂಕ ಉಪನಗರದ 3ನೇ ಮತ್ತು 4ನೇ ಎ ಮುಖ್ಯರಸ್ತೆ, 11ನೇ ಮತ್ತು 12ನೇ ಎ ಅಡ್ಡರಸ್ತೆಯ ನಡುವಿನಲ್ಲಿರುವ ಉದ್ಯಾನವನದಲ್ಲಿ "ವಿಶ್ವಗುರು ಬಸವಣ್ಣ" ರವರ ಪುತ್ಥಳಿಯನ್ನು ಅನಾವರಣಗೊಳಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಮಾನ್ಯ ಆಯುಕ್ತರವರನ್ನು ಕೋರುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ವಾರ್ಡ್-04ರ ವ್ಯಾಪ್ತಿಯಲ್ಲಿ ಬರುವ ಯಲಹಂಕ ಉಪನಗರದ 3ನೇ ಮತ್ತು 4ನೇ ಎ ಮುಖ್ಯರಸ್ತೆ, 11ನೇ ಮತ್ತು 12ನೇ ಎ ಅಡ್ಡರಸ್ತೆಯ ನಡುವಿನಲ್ಲಿರುವ ಉದ್ಯಾನವನದಲ್ಲಿ "ವಿಶ್ವಗುರು ಬಸವಣ್ಣ" ರವರ ಪುತ್ಥಳಿಯನ್ನು ಅನಾವರಣಗೊಳಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಮಾನ್ಯ ಆಯುಕ್ತರವರನ್ನು ಕೋರುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 234 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೆಂಗಳೂರು ನಗರದಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್‌ನ್ನು ನಿಷೇಧಿಸುವುದು ಅಗತ್ಯವಾಗಿದೆ. ಈಗಾಗಲೇ ಈ ಬಗ್ಗೆ ನಿರ್ಣಯಗಳನ್ನು ಕೈಗೊಂಡಿದ್ದರೂ ಸಹ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಆದ್ದರಿಂದ ಈ ಪ್ಲಾಸ್ಟಿಕ್ ನಿಷೇಧವನ್ನು ಕಠಿಣವಾಗಿ ಜಾರಿಗೆ ತರಬೇಕೆಂದು ಹಾಗೂ ಇದರ ಜವಾಬ್ದಾರಿಯನ್ನು ಆಯಾಯ ವಲಯಗಳ ಅಪರ/ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರುಗಳಿಗೆ ನೀಡಲು ಸಭೆಯು ತೀರ್ಮಾನಿಸಿದೆ. ಇದನ್ನು ಯಶಸ್ವಿಯಾಗಿ ಜಾರಿಗೊಳಿಸಲು ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರಿಗೆ ನಿಗಧಿತ ಜವಾಬ್ದಾರಿಯನ್ನು ನೀಡಬೇಕಿದೆ. ಪ್ಲಾಸ್ಟಿಕ್ ಉತ್ಪನ್ನಗಳನ್ನು ಮಾರಾಟ ಮಾಡುವ ಮತ್ತು ತಯಾರಿಸುವ ಅಂಗಡಿ/ಮಳಿಗೆಗಳು ಹಾಗೂ ತಯಾರಿಕ ಘಟಕಗಳು ಮಾರಾಟ ಮಾಡುವುದು ಮತ್ತು ತಯಾರಿಸುವುದು ಕಂಡು ಬಂದಲ್ಲಿ ಮೊದಲನೇ ಬಾರಿಗೆ ರೂ.1000/- ಎರಡನೇ ಬಾರಿಗೆ ರೂ.5000/- ಗಳ ದಂಡವನ್ನು ವಿಧಿಸುವುದು. ಮೂರನೆ ಬಾರಿ ಕಂಡು ಬಂದಲ್ಲಿ ಇಂತಹ ಅಂಗಡಿ/ಮಳಿಗೆ/ತಯಾರಿಕ ಘಟಕಗಳನ್ನು ಮುಚ್ಚಲು ಮಾನ್ಯ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೆಂಗಳೂರು ನಗರದಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್‌ನ್ನು ನಿಷೇಧಿಸುವುದು ಅಗತ್ಯವಾಗಿದೆ. ಈಗಾಗಲೇ ಈ ಬಗ್ಗೆ ನಿರ್ಣಯಗಳನ್ನು ಕೈಗೊಂಡಿದ್ದರೂ ಸಹ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಆದ್ದರಿಂದ ಈ ಪ್ಲಾಸ್ಟಿಕ್ ನಿಷೇಧವನ್ನು ಕಠಿಣವಾಗಿ ಜಾರಿಗೆ ತರಬೇಕೆಂದು ಹಾಗೂ ಇದರ ಜವಾಬ್ದಾರಿಯನ್ನು ಆಯಾಯ ವಲಯಗಳ ಅಪರ/ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರುಗಳಿಗೆ ನೀಡಲು ಸಭೆಯು ತೀರ್ಮಾನಿಸಿದೆ. ಇದನ್ನು ಯಶಸ್ವಿಯಾಗಿ ಜಾರಿಗೊಳಿಸಲು ಕಾರ್ಯಪಾಲಕ ಅಭಿಯಂತರರು,

.........................2

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರಿಗೆ ನಿಗಧಿತ ಜವಾಬ್ದಾರಿಯನ್ನು ನೀಡಬೇಕಿದೆ. ಪ್ಲಾಸ್ಟಿಕ್ ಉತ್ಪನ್ನಗಳನ್ನು ಮಾರಾಟ ಮಾಡುವ ಮತ್ತು ತಯಾರಿಸುವ ಅಂಗಡಿ/ ಮಳಿಗೆಗಳು ಹಾಗೂ ತಯಾರಿಕ ಘಟಕಗಳು ಮಾರಾಟ ಮಾಡುವುದು ಮತ್ತು ತಯಾರಿಸುವುದು ಕಂಡು ಬಂದಲ್ಲಿ ಮೊದಲನೇ ಬಾರಿಗೆ ರೂ.1000/- ಎರಡನೇ ಬಾರಿಗೆ ರೂ.5000/-ಗಳ ದಂಡವನ್ನು ವಿಧಿಸುವುದು. ಮೂರನೆ ಬಾರಿ ಕಂಡು ಬಂದಲ್ಲಿ ಇಂತಹ ಅಂಗಡಿ/ ಮಳಿಗೆ/ತಯಾರಿಕ ಘಟಕಗಳನ್ನು ಮುಚ್ಚಲು ಮಾನ್ಯ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 235 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ನೌಕರರುಗಳು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವ ಹಿತದೃಷ್ಟಿಯಿಂದ ವರ್ಗಾವಣೆ ನೀತಿ ಸಂಹಿತೆಯನ್ನು ಜಾರಿಗೆ ತರುವುದು ಅತಿ ಅವಶ್ಯಕವಾಗಿದೆ. ಗ್ರೂಪ್-ಸಿ ಮತ್ತು ಗ್ರೂಪ್-ಡಿ ನೌಕರರುಗಳು ಒಂದು ಸ್ಥಳದಲ್ಲಿ ಗರಿಷ್ಠ ಮೂರು ವರ್ಷಗಳ ಸೇವೆ ಸಲ್ಲಿಸಿದ ನಂತರ ಕಡ್ಡಾಯವಾಗಿ ಸದರಿ ಸ್ಥಳದಲ್ಲಿ ವರ್ಗಾವಣೆ ಮಾಡುವುದು. ಗ್ರೂಪ್-ಎ ಮತ್ತು ಗ್ರೂಪ್-ಬಿ ಅಧಿಕಾರಿಗಳನ್ನು ಗರಿಷ್ಠ 2 ವರ್ಷಗಳಿಗೊಮ್ಮೆ ವರ್ಗಾವಣೆ ಮಾಡುವುದು. ಈ ಮಧ್ಯೆ ಮೇಲೆ ತಿಳಿಸಿರುವ ಅಧಿಕಾರಿಗಳು ಮತ್ತು ನೌಕರರುಗಳ ಮೇಲೆ ಆಪಾದನೆಗಳು ಬಂದಲ್ಲಿ, ಅವುಗಳನ್ನು ವಿಚಾರಣೆ ನಡೆಸಿ, ಆಪಾದನೆ ಸಾಬೀತಾದಲ್ಲಿ, ಸದರಿ ಅಧಿಕಾರಿ/ನೌಕರರನ್ನು ಅವಧಿಗೆ ಮುನ್ನವೇ ವರ್ಗಾಯಿಸಬಹುದಾಗಿದೆ ಹಾಗೂ ಪೂಜ್ಯ ಮಹಾಪೌರರ ಪ್ರಸ್ತಾಪವನ್ನು ವಿಶೇಷ ಪ್ರಕರಣವೆಂದು ಪರಿಗಣಿಸುವುದು. ಬೇರೆ ಯಾವುದೇ ರೀತಿಯ ಕಾರಣಗಳಿಗೆ ಪದೇ ಪದೇ ಅಧಿಕಾರಿ/ನೌಕರರುಗಳನ್ನು ವರ್ಗಾಯಿಸುವಂತಿಲ್ಲ. ಈ ನೀತಿ ಸಂಹಿತೆಯನ್ನು ಈ ಕೂಡಲೇ ಆಯುಕ್ತರು ಜಾರಿಗೆ ತರಲು ಕ್ರಮ ಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ನೌಕರರುಗಳು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವ ಹಿತದೃಷ್ಟಿಯಿಂದ ವರ್ಗಾವಣೆ ನೀತಿ ಸಂಹಿತೆಯನ್ನು ಜಾರಿಗೆ ತರುವುದು ಅತಿ ಅವಶ್ಯಕವಾಗಿದೆ. ಗ್ರೂಪ್-ಸಿ ಮತ್ತು ಗ್ರೂಪ್-ಡಿ ನೌಕರರುಗಳು ಒಂದು ಸ್ಥಳದಲ್ಲಿ ಗರಿಷ್ಠ ಮೂರು ವರ್ಷಗಳ ಸೇವೆ ಸಲ್ಲಿಸಿದ ನಂತರ ಕಡ್ಡಾಯವಾಗಿ ಸದರಿ ಸ್ಥಳದಲ್ಲಿ ವರ್ಗಾವಣೆ ಮಾಡುವುದು. ಗ್ರೂಪ್-ಎ ಮತ್ತು ಗ್ರೂಪ್-ಬಿ ಅಧಿಕಾರಿಗಳನ್ನು ಗರಿಷ್ಠ 2 ವರ್ಷಗಳಿಗೊಮ್ಮೆ ವರ್ಗಾವಣೆ ಮಾಡುವುದು. ಈ ಮಧ್ಯೆ ಮೇಲೆ ತಿಳಿಸಿರುವ ಅಧಿಕಾರಿಗಳು ಮತ್ತು ನೌಕರರುಗಳ ಮೇಲೆ ಆಪಾದನೆಗಳು ಬಂದಲ್ಲಿ, ಅವುಗಳನ್ನು ವಿಚಾರಣೆ ನಡೆಸಿ, ಆಪಾದನೆ

..........................2

ಸಾಬೀತಾದಲ್ಲಿ, ಸದರಿ ಅಧಿಕಾರಿ/ನೌಕರರನ್ನು ಅವಧಿಗೆ ಮುನ್ನವೇ ವರ್ಗಾಯಿಸಬಹುದಾಗಿದೆ ಹಾಗೂ ಪೂಜ್ಯ ಮಹಾಪೌರರ ಪ್ರಸ್ತಾಪವನ್ನು ವಿಶೇಷ ಪ್ರಕರಣವೆಂದು ಪರಿಗಣಿಸುವುದು. ಬೇರೆ ಯಾವುದೇ ರೀತಿಯ ಕಾರಣಗಳಿಗೆ ಪದೇ ಪದೇ ಅಧಿಕಾರಿ/ನೌಕರರುಗಳನ್ನು ವರ್ಗಾಯಿಸುವಂತಿಲ್ಲ. ಈ ನೀತಿ ಸಂಹಿತೆಯನ್ನು ಈ ಕೂಡಲೇ ಆಯುಕ್ತರು ಜಾರಿಗೆ ತರಲು ಕ್ರಮ ಕೈಗೊಳ್ಳುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 236 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ಬರುವ ಅಧಿಕಾರಿಗಳು ಹಾಗೂ ನೌಕರರುಗಳು ಪಾಲಿಕೆಯಲ್ಲೇ ಖಾಯಮಾತಿಗಾಗಿ ವಿವಿಧ ಕಡೆಗಳಿಂದ ಪ್ರಯತ್ನಿಸುತ್ತಿರುವುದು ಕಂಡು ಬರುತ್ತದೆ. ಕೆ.ಸಿ.ಎಸ್.ಆರ್. ಮತ್ತು ಕೆ.ಎಂ.ಸಿ. ನಿಯಮದ ಅನ್ವಯ ನಗರ ಪಾಲಿಕೆಗೆ ನಿಯೋಜನೆ ಮೇಲೆ ಮಾತ್ರ ಬರಲು ಅವಕಾಶವಿದ್ದು, ಯಾವುದೇ ಸಂದರ್ಭದಲ್ಲಿ ಇಂತಹ ಅಧಿಕಾರಿ/ನೌಕರರನ್ನು ಖಾಯಮಾತಿ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಇಂತಹ ಪ್ರಕರಣಗಳು ಬಂದಲ್ಲಿ ಯಾವುದೇ ಕಾರಣಕ್ಕೂ ಒಪ್ಪದೇ ತಿರಸ್ಕರಿಸಬೇಕು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ಬರುವ ಅಧಿಕಾರಿಗಳು ಹಾಗೂ ನೌಕರರುಗಳು ಪಾಲಿಕೆಯಲ್ಲೇ ಖಾಯಮಾತಿಗಾಗಿ ವಿವಿಧ ಕಡೆಗಳಿಂದ ಪ್ರಯತ್ನಿಸುತ್ತಿರುವುದು ಕಂಡು ಬರುತ್ತದೆ. ಕೆ.ಸಿ.ಎಸ್.ಆರ್. ಮತ್ತು ಕೆ.ಎಂ.ಸಿ. ನಿಯಮದ ಅನ್ವಯ ನಗರ ಪಾಲಿಕೆಗೆ ನಿಯೋಜನೆ ಮೇಲೆ ಮಾತ್ರ ಬರಲು ಅವಕಾಶವಿದ್ದು, ಯಾವುದೇ ಸಂದರ್ಭದಲ್ಲಿ ಇಂತಹ ಅಧಿಕಾರಿ/ನೌಕರರನ್ನು ಖಾಯಮಾತಿ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಇಂತಹ ಪ್ರಕರಣಗಳು ಬಂದಲ್ಲಿ ಯಾವುದೇ ಕಾರಣಕ್ಕೂ ಒಪ್ಪದೇ ತಿರಸ್ಕರಿಸಬೇಕೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 237 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಪಟ್ಟಂತೆ ಪ್ರತಿ ಮನೆ, ಅಂಗಡಿಗಳಿಂದ ಸಂಗ್ರಹಿಸುವ ಕಸವನ್ನು ಹಸಿ ತ್ಯಾಜ್ಯ ಮತ್ತು ಒಣತ್ಯಾಜ್ಯ ಎಂದು ವಿಭಜಿಸಿ ಸಂಗ್ರಹಿಸಬೇಕಾಗಿದ್ದು, ಇದನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕಾಗಿದೆ. ಇದಕ್ಕಾಗಿ ನಗರ ಪಾಲಿಕೆಯ ಎಲ್ಲಾ ಸದಸ್ಯರುಗಳು, ಮಾನ್ಯ ಶಾಸಕರುಗಳು ತಮ್ಮ ಪ್ರದೇಶದಲ್ಲಿರುವ ಸಂಘ-ಸಂಸ್ಥೆಗಳ ಸಹಕಾರ ಪಡೆದು ಪ್ರತಿ ಮನೆಗೆ ಹಾಗೂ ವಾಣಿಜ್ಯ ಮಳಿಗೆಗಳಿಗೆ ವಿಷಯ ತಿಳಿಸಿ ಕಸವನ್ನು ವಿಂಗಡಿಸಿಕೊಡುವಂತೆ ಮನವರಿಕೆ ಮಾಡಬೇಕಾಗಿದೆ ಹಾಗೂ ವಾರ್ಡ್ ಮಟ್ಟದಲ್ಲೇ ಇರುವ ಖಾಲಿ ಜಾಗವನ್ನು ಗುರುತಿಸಿ, ಸೂಕ್ತ ವ್ಯವಸ್ಥೆ ಮಾಡಿ, ತ್ಯಾಜ್ಯ ವಿಂಗಡಣೆ ಮಾಡಲು ಅಗತ್ಯ ಕ್ರಮಕೈಗೊಳ್ಳಬೇಕಾಗಿದೆ. ಹೀಗೆ ಮಾಡಿದಲ್ಲಿ ನಗರದಿಂದ ಹೊರಕ್ಕೆ ಸಾಗಿಸುವ ಕಸವು ಬಹಳ ಕಡಿಮೆಯಾಗುತ್ತದೆ. ಇದರ ಜೊತೆಗೆ ಹೋಟೆಲ್‌ಗಳು, ಛತ್ರಗಳು ಹಾಗೂ ಆಸ್ಪತ್ರೆಗಳು ಸಹ ಮೇಲಿನ ಕ್ರಮವನ್ನು ಕಡ್ಡಾಯವಾಗಿ ಅನುಸರಿಸಲು ಸೂಚಿಸಬೇಕಾಗಿದೆ. ಈ ಮೇಲಿನ ಕಾರ್ಯಕ್ರಮಕ್ಕಾಗಿ ಪ್ರಚಾರ ಬಹಳ ಅಗತ್ಯವಾಗಿದ್ದು, ಮಾಧ್ಯಮಗಳಲ್ಲಿ ಜಾಹೀರಾತು ನೀಡುವ ಮೂಲಕ, ಪ್ರತಿ ಮನೆಗೆ ಕರಪತ್ರಗಳನ್ನು ಹಂಚುವ ಮೂಲಕ ಹಾಗೂ ಧ್ವನಿ ವರ್ಧಕಗಳನ್ನು ಅಳವಡಿಸಿ ಎಲ್ಲಾ ಪ್ರದೇಶಗಳಲ್ಲಿ ಬಿತ್ತರಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಇವುಗಳನ್ನು ಪಾಲಿಸದೇ ಇದ್ದ ಪಕ್ಷದಲ್ಲಿ ಕಡ್ಡಾಯವಾಗಿ ಅಂತಹವರಿಗೆ ದಂಡವನ್ನು ವಿಧಿಸುವ ಕ್ರಮವನ್ನು ಜಾರಿಗೊಳಿಸಬೇಕಾಗಿದೆ.

ಕಸ ಸಂಗ್ರಹಣೆಗೆ ಅಗತ್ಯವಿರುವ ಎರಡು ಪ್ಲಾಸ್ಟಿಕ್ ಬಕೆಟ್‌ಗಳನ್ನು ಪ್ರತಿ ಮನೆಗೆ ನೀಡಲು ಕ್ರಮಕೈಗೊಳ್ಳಬೇಕಾಗಿದೆ. ಇದೆಲ್ಲದರ ಉಸ್ತುವಾರಿಯನ್ನು ಕಾರ್ಯಪಾಲಕ ಅಭಿಯಂತರರು ಮತ್ತು ಕಂದಾಯ ಅಧಿಕಾರಿಗಳು ವಹಿಸಿಕೊಳ್ಳಬೇಕಾಗಿದೆ. ಪ್ರಾರಂಭದಲ್ಲಿ ಪ್ರತಿಯೊಬ್ಬರಿಗೆ ಈ ವಿಷಯ ಮುಟ್ಟಲು ಸಾಧ್ಯವಾಗುವಂತೆ ಆಯಾ ಪ್ರದೇಶದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ಹಾಗೂ ಕಿರಿಯ ಅಭಿಯಂತರರು, ಕೆಲಸ ಪರಿವೀಕ್ಷಕರು, ಮೌಲ್ಯಮಾಪಕರು, ಕಂದಾಯ ಪರಿವೀಕ್ಷಕರು, ಕಂದಾಯ ವಸೂಲಿಗಾರರು, ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರನ್ನು ನಿಯೋಜಿಸಬೇಕಾಗಿದೆ.

ಈ ಮೇಲೆ ಸೂಚಿಸಿರುವಂತೆ, ಕೂಡಲೇ ಅಗತ್ಯ ಕ್ರಮವನ್ನು ಮಾನ್ಯ ಆಯುಕ್ತರವರು ಕೈಗೊಂಡು 2012ರ ಸೆಪ್ಟೆಂಬರ್ ಮೊದಲ ವಾರದಲ್ಲಿ ಇದು ಕಾರ್ಯರೂಪಕ್ಕೆ ಬರುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಬೇಕು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಪಟ್ಟಂತೆ ಪ್ರತಿ ಮನೆ, ಅಂಗಡಿಗಳಿಂದ ಸಂಗ್ರಹಿಸುವ ಕಸವನ್ನು ಹಸಿ ತ್ಯಾಜ್ಯ ಮತ್ತು ಒಣತ್ಯಾಜ್ಯ ಎಂದು ವಿಭಜಿಸಿ ಸಂಗ್ರಹಿಸಬೇಕಾಗಿದ್ದು, ಇದನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕಾಗಿದೆ. ಇದಕ್ಕಾಗಿ ನಗರ ಪಾಲಿಕೆಯ ಎಲ್ಲಾ ಸದಸ್ಯರುಗಳು, ಮಾನ್ಯ ಶಾಸಕರುಗಳು ತಮ್ಮ ಪ್ರದೇಶದಲ್ಲಿರುವ ಸಂಘ-ಸಂಸ್ಥೆಗಳ ಸಹಕಾರ ಪಡೆದು ಪ್ರತಿ ಮನೆಗೆ ಹಾಗೂ ವಾಣಿಜ್ಯ ಮಳಿಗೆಗಳಿಗೆ ವಿಷಯ ತಿಳಿಸಿ ಕಸವನ್ನು ವಿಂಗಡಿಸಿಕೊಡುವಂತೆ ಮನವರಿಕೆ ಮಾಡಬೇಕಾಗಿದೆ ಹಾಗೂ ವಾರ್ಡ್ ಮಟ್ಟದಲ್ಲೇ ಇರುವ ಖಾಲಿ ಜಾಗವನ್ನು ಗುರುತಿಸಿ, ಸೂಕ್ತ ವ್ಯವಸ್ಥೆ ಮಾಡಿ, ತ್ಯಾಜ್ಯ ವಿಂಗಡಣೆ ಮಾಡಲು ಅಗತ್ಯ ಕ್ರಮಕೈಗೊಳ್ಳಬೇಕಾಗಿದೆ. ಹೀಗೆ ಮಾಡಿದಲ್ಲಿ ನಗರದಿಂದ ಹೊರಕ್ಕೆ ಸಾಗಿಸುವ ಕಸವು ಬಹಳ ಕಡಿಮೆಯಾಗುತ್ತದೆ. ಇದರ ಜೊತೆಗೆ ಹೋಟೆಲ್‌ಗಳು, ಛತ್ರಗಳು ಹಾಗೂ ಆಸ್ಪತ್ರೆಗಳು ಸಹ ಮೇಲಿನ ಕ್ರಮವನ್ನು ಕಡ್ಡಾಯವಾಗಿ ಅನುಸರಿಸಲು ಸೂಚಿಸಬೇಕಾಗಿದೆ. ಈ ಮೇಲಿನ ಕಾರ್ಯಕ್ರಮಕ್ಕಾಗಿ ಪ್ರಚಾರ ಬಹಳ ಅಗತ್ಯವಾಗಿದ್ದು, ಮಾಧ್ಯಮಗಳಲ್ಲಿ ಜಾಹೀರಾತು ನೀಡುವ ಮೂಲಕ, ಪ್ರತಿ ಮನೆಗೆ ಕರಪತ್ರಗಳನ್ನು ಹಂಚುವ ಮೂಲಕ ಹಾಗೂ ಧ್ವನಿ ವರ್ಧಕಗಳನ್ನು ಅಳವಡಿಸಿ ಎಲ್ಲಾ ಪ್ರದೇಶಗಳಲ್ಲಿ ಬಿತ್ತರಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಇವುಗಳನ್ನು ಪಾಲಿಸದೇ ಇದ್ದ ಪಕ್ಷದಲ್ಲಿ ಕಡ್ಡಾಯವಾಗಿ ಅಂತಹವರಿಗೆ ದಂಡವನ್ನು ವಿಧಿಸುವ ಕ್ರಮವನ್ನು ಜಾರಿಗೊಳಿಸಬೇಕಾಗಿದೆ.

ಕಸ ಸಂಗ್ರಹಣೆಗೆ ಅಗತ್ಯವಿರುವ ಎರಡು ಪ್ಲಾಸ್ಟಿಕ್ ಬಕೆಟ್‌ಗಳನ್ನು ಪ್ರತಿ ಮನೆಗೆ ನೀಡಲು ಕ್ರಮಕೈಗೊಳ್ಳಬೇಕಾಗಿದೆ. ಇದೆಲ್ಲದರ ಉಸ್ತುವಾರಿಯನ್ನು ಕಾರ್ಯಪಾಲಕ ಅಭಿಯಂತರರು ಮತ್ತು ಕಂದಾಯ ಅಧಿಕಾರಿಗಳು ವಹಿಸಿಕೊಳ್ಳಬೇಕಾಗಿದೆ. ಪ್ರಾರಂಭದಲ್ಲಿ ಪ್ರತಿಯೊಬ್ಬರಿಗೆ ಈ ವಿಷಯ ಮುಟ್ಟಲು ಸಾಧ್ಯವಾಗುವಂತೆ ಆಯಾ ಪ್ರದೇಶದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ಹಾಗೂ ಕಿರಿಯ ಅಭಿಯಂತರರು, ಕೆಲಸ ಪರಿವೀಕ್ಷಕರು, ಮೌಲ್ಯಮಾಪಕರು, ಕಂದಾಯ ಪರಿವೀಕ್ಷಕರು, ಕಂದಾಯ ವಸೂಲಿಗಾರರು, ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರನ್ನು ನಿಯೋಜಿಸಬೇಕಾಗಿದೆ.

ಈ ಮೇಲೆ ಸೂಚಿಸಿರುವಂತೆ, ಕೂಡಲೇ ಅಗತ್ಯ ಕ್ರಮವನ್ನು ಮಾನ್ಯ ಆಯುಕ್ತರವರು ಕೈಗೊಂಡು 2012ರ ಸೆಪ್ಟೆಂಬರ್ ಮೊದಲ ವಾರದಲ್ಲಿ ಇದು ಕಾರ್ಯರೂಪಕ್ಕೆ ಬರುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಬೇಕೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:31–08–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 238 / 2012–13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಗೋಡೆ ಬರಹ, ಭಿತ್ತಿಪತ್ರಗಳ ಹಾವಳಿ ಜಾಸ್ತಿಯಾಗಿದ್ದು, ಇದು ಕರ್ನಾಟಕ ಡಿಸ್‌ಫಿಗರ್‌ಮೆಂಟ್ ಆಕ್ಟ್ ಆಟ್ ಪಬ್ಲಿಕ್ ಪ್ಲೇಸಸ್‌ರ ಅನ್ವಯ ಈ ರೀತಿಯ ಬರಹಗಳು, ಭಿತ್ತಿ ಪತ್ರಗಳನ್ನು ಹಾಕುವುದು, ಮರಗಳಿಗೆ ಮೊಳೆ ಒಡೆದು ಜಾಹೀರಾತು/ಭಿತ್ರಿಪತ್ರಗಳನ್ನು ಹಾಕುವುದು ಕಾನೂನಿನ ಅಡಿಯಲ್ಲಿ ಅಪರಾಧವಾಗುತ್ತದೆ. ಈ ರೀತಿಯ ಬರಹಗಳು, ಭಿತ್ತಿಪತ್ರಗಳನ್ನು ಅಂಟಿಸುವ ಸಂಘ–ಸಂಸ್ಥೆಗಳು, ವ್ಯಕ್ತಿಗಳ ವಿರುದ್ಧ ಮೊದಲನೇ ಬಾರಿ ರೂ.5000/– ಎರಡನೇ ಬಾರಿ ರೂ.10000/– ಜುಲ್ಮಾನೆ ವಿಧಿಸುವುದು ಹಾಗೂ ನಂತರ ಇದೇ ರೀತಿ ಮುಂದುವರೆದಲ್ಲಿ ಸದರಿ ವ್ಯಕ್ತಿ, ಸಂಘ–ಸಂಸ್ಥೆಗಳ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಗೋಡೆ ಬರಹ, ಭಿತ್ತಿಪತ್ರಗಳ ಹಾವಳಿ ಜಾಸ್ತಿಯಾಗಿದ್ದು, ಇದು ಕರ್ನಾಟಕ ಡಿಸ್‌ಫಿಗರ್‌ಮೆಂಟ್ ಆಕ್ಟ್ ಆಟ್ ಪಬ್ಲಿಕ್ ಪ್ಲೇಸಸ್‌ರ ಅನ್ವಯ ಈ ರೀತಿಯ ಬರಹಗಳು, ಭಿತ್ತಿ ಪತ್ರಗಳನ್ನು ಹಾಕುವುದು, ಮರಗಳಿಗೆ ಮೊಳೆ ಒಡೆದು ಜಾಹೀರಾತು/ಭಿತ್ರಿಪತ್ರಗಳನ್ನು ಹಾಕುವುದು ಕಾನೂನಿನ ಅಡಿಯಲ್ಲಿ ಅಪರಾಧವಾಗುತ್ತದೆ. ಈ ರೀತಿಯ ಬರಹಗಳು, ಭಿತ್ತಿಪತ್ರಗಳನ್ನು ಅಂಟಿಸುವ ಸಂಘ–ಸಂಸ್ಥೆಗಳು, ವ್ಯಕ್ತಿಗಳ ವಿರುದ್ಧ ಮೊದಲನೇ ಬಾರಿ ರೂ.5000/– ಎರಡನೇ ಬಾರಿ ರೂ.10000/– ಜುಲ್ಮಾನೆ ವಿಧಿಸುವುದು ಹಾಗೂ ನಂತರ ಇದೇ ರೀತಿ ಮುಂದುವರೆದಲ್ಲಿ ಸದರಿ ವ್ಯಕ್ತಿ, ಸಂಘ–ಸಂಸ್ಥೆಗಳ ವಿರುದ್ಧ ಕಾನೂನು ರೀತಿ ಕ್ರಮ ಕ್ರಮಕೈಗೊಳ್ಳುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:31-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 239/ 2012-13

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 2012-13ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಪಾಲಿಕೆಗೆ ಅಂದಾಜು ರೂ.1668.00 ಕೋಟಿಗಳ ವೆಚ್ಚದಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ:ನಅಇ/356/ಎಂಎನ್‌ವೈ/2012(1) ಬೆಂಗಳೂರು, ದಿನಾಂಕ:10-07-2012 ರಲ್ಲಿ ಘನ ಸರ್ಕಾರವು ಅನುಮೋದನೆಯನ್ನು ನೀಡಿರುತ್ತದೆ.

ಈ ಯೋಜನೆಗಳ ಪೈಕಿ ರೂ.200.00 ಕೋಟಿಗಳ ವೆಚ್ಚದಲ್ಲಿ 45 ರಸ್ತೆಗಳನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಘನ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ:ನಅಇ/356/ಎಂಎನ್‌ವೈ/2012(1) ಬೆಂಗಳೂರು, ದಿನಾಂಕ:10-07-2012 ರ ಆದೇಶದಲ್ಲಿ ತಾತ್ವಿಕ ಅನುಮೋದನೆ ನೀಡಿರುತ್ತದೆ. ಸದರಿ 45 ರಸ್ತೆಗಳ ಅಭಿವೃದ್ಧಿಗೆ ರೂ.200.00 ಕೋಟಿ ನಿಗಧಿಪಡಿಸಿದ್ದು, ಘನ ಸರ್ಕಾರವು ಈಗಾಗಲೇ ರೂ.100.00 ಕೋಟಿಗಳನ್ನು ಸರ್ಕಾರ ಆದೇಶ ಸಂಖ್ಯೆ:ನಅಇ/597/ಎಂಎನ್‌ವೈ/2011 ಬೆಂಗಳೂರು, ದಿನಾಂಕ:30-03-2012 ರಲ್ಲಿ ಈಗಾಗಲೇ ಪಾಲಿಕೆಗೆ ಬಿಡುಗಡೆ ಮಾಡಿರುತ್ತದೆ. ಉಳಿದ ರೂ.100.00 ಕೋಟಿಗಳನ್ನು ಪಾಲಿಕೆಯು ಭರಿಸಬೇಕಾಗಿರುತ್ತದೆ. ಈ ರೂ.100.00 ಕೋಟಿಗಳನ್ನು ಪಾಲಿಕೆಯು ಭರಿಸಲು 2012-13ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಪ್ರಸ್ತಾಪಿಸಿ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಲಾಗಿರುತ್ತದೆ. ಸದರಿ ಯೋಜನೆಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಅಧಿಕಾರಯುಕ್ತ ಸಮಿತಿ ರಚಿಸಲಾಗಿದೆ.

| | | |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ನಗರಾಭಿವೃದ್ಧಿ ಇಲಾಖೆ | ಅಧ್ಯಕ್ಷರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಲೋಕೋಪಯೋಗಿ ಇಲಾಖೆ | ಸದಸ್ಯರು |
| 3 | ಸರ್ಕಾರದ ಕಾರ್ಯದರ್ಶಿ (ವೆಚ್ಚ)<br>ಆರ್ಥಿಕ ಇಲಾಖೆ | ಸದಸ್ಯರು |
| 4 | ಆಯುಕ್ತರು<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ<br>ಬೆಂಗಳೂರು | ಸದಸ್ಯ ಕಾರ್ಯದರ್ಶಿ |

ಘನ ಸರ್ಕಾರದ ಆದೇಶದಂತೆ ಈ ಸಮಿತಿ ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಕಾರವನ್ನು ಹೊಂದಿರುತ್ತದೆ.

(ಅ) ಪ್ರಸ್ತಾವನೆಯಲ್ಲಿ ತಿಳಿಸಿರುವ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವುದು.
(ಆ) ಯೋಜನೆಗಳ ಪ್ರಗತಿಗಳ ಬಗ್ಗೆ ತ್ರೈ ಮಾಸಿಕ ಪುನರಾವಲೋಕನೆ ಮತ್ತು ಮೇಲ್ವಿಚಾರಣೆ ಮಾಡುವುದು.
(ಇ) ಅಂತರ ಇಲಾಖೆ ಸಮಸ್ಯೆಗಳನ್ನು ಬಗೆಹರಿಸುವುದು.

..........2

(ಈ) ಕಾಮಗಾರಿಗಳ ಮೂಲ ಅಂದಾಜುಪಟ್ಟಿಗಿಂತ ಶೇಕಡ 25 ರಷ್ಟು ಹೆಚ್ಚಿನ ದರಗಳಿಗೆ ಅನುಮೋದನೆ ನೀಡುವುದು.

(ಉ) ಕಾಮಗಾರಿಗಳ ಟೆಂಡರ್ ಅನುಮೋದನೆ ನೀಡಲು.

ಈ ಮೇರೆಗೆ ಸದರಿ ಟೆಂಡರ್ ಶ್ಯೂರ್ ಮಾದರಿಯಡಿಯಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆ ಮೊತ್ತವಾದ ರೂ.200.00 ಕೋಟಿಗಳ ಪೈಕಿ, ಪಾಲಿಕೆಯು ಭರಿಸಬೇಕಾಗಿರುವ ರೂ.100.00 ಕೋಟಿಗಳನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿರುವಂತೆ ವೆಚ್ಚ ಮಾಡಲು ಮತ್ತು ಈ ಯೋಜನೆಗಳಿಗೆ ಟೆಂಡರ್ ಆಹ್ವಾನಿಸಿ ಸರ್ಕಾರಿ ಆದೇಶ ಸಂಖ್ಯೆ:ನಅಇ/356/ಎಂಎನ್‌ವೈ/2012(2) ಬೆಂಗಳೂರು, ದಿನಾಂಕ:10-07-2012 ರ ಘನ ಸರ್ಕಾರದ ಆದೇಶದಲ್ಲಿ ರಚಿಸಿರುವ ಅಧಿಕಾರಯುಕ್ತ ಸಮಿತಿಯ ಮುಂದೆ ನೇರವಾಗಿ ಮಂಡಿಸಿ ಅವಶ್ಯಕ ಅನುಮೋದನೆಗಳನ್ನು ಪಡೆದು ಯೋಜನೆಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಆಯುಕ್ತರಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:30-08-2012ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ದಿನಾಂಕ:30-08-2012ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:31-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ : 240 / 2012-13**

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಲು ಘನ ಸರ್ಕಾರವು ಕ್ರಮ ತೆಗೆದುಕೊಳ್ಳಲು, ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಆಯುಕ್ತರವರು ಕೂಡಲೇ ಕ್ರಮಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಲು ಘನ ಸರ್ಕಾರವು ಕ್ರಮ ತೆಗೆದುಕೊಳ್ಳಲು, ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಆಯುಕ್ತರವರು ಕೂಡಲೇ ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:31-08-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 241 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಸಿಲ್ಟ್ ಮತ್ತು ಟ್ರ್ಯಾಕ್ಟರ್‌ಗಳ ಮುಖಾಂತರ ಹೂಳೆತ್ತುವ ಕೆಲಸವನ್ನು ನಿರ್ವಹಿಸಿದ್ದು, ಇದು ಅತಿ ಅವಶ್ಯಕ ಕೆಲಸವೆಂದು ಪರಿಗಣಿಸಿ ಕೆಲಸ ನಿರ್ವಹಿಸಲಾಗಿತ್ತು. ಈ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ಇಲ್ಲಿಯವರೆವಿಗೆ ಬಿಲ್ಲುಗಳನ್ನು ಪಾವತಿಸಿರುವುದಿಲ್ಲ. ಆದ್ದರಿಂದ ಸದರಿ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿಸಲು ಆಯುಕ್ತರು ಅಗತ್ಯ ಕ್ರಮಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಸಿಲ್ಟ್ ಮತ್ತು ಟ್ರ್ಯಾಕ್ಟರ್‌ಗಳ ಮುಖಾಂತರ ಹೂಳೆತ್ತುವ ಕೆಲಸವನ್ನು ನಿರ್ವಹಿಸಿದ್ದು, ಇದು ಅತಿ ಅವಶ್ಯಕ ಕೆಲಸವೆಂದು ಪರಿಗಣಿಸಿ ಕೆಲಸ ನಿರ್ವಹಿಸಲಾಗಿತ್ತು. ಈ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ಇಲ್ಲಿಯವರೆವಿಗೆ ಬಿಲ್ಲುಗಳನ್ನು ಪಾವತಿಸಿರುವುದಿಲ್ಲ. ಆದ್ದರಿಂದ ಸದರಿ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿಸಲು ಆಯುಕ್ತರು ಅಗತ್ಯ ಕ್ರಮಕೈಗೊಳ್ಳುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು